N12<527030555 021
ubTÜBINGEN
LS

Ad. Bruckmann,
Buchbinder.

4

ಪರಮಾತ್ಮಜ್ಞಾನ

KNOWLEDGE

OF THE

SUPREME SPIRIT

A DIALOGUE ON THE HINDOO DOCTRINE OF GOD'S BEING THE AUTHOR OF SIN &

BY

THE REV. F. K

MANGALORE

PFLEIDERER & RIEHM, MISSION BOOKSHOP AND GOVT. SCHOOLBOOK DEPOT

1863

CXIV 108 aug

Printed by J. Mack,
Basel Mission Press, Mangalore

ಬಾಸೆಲ್ ಮಿಶನ್ ಪ್ರೆಸ್,
ಮಂಗಳೂರು

ಪರಮಾತ್ಮಜ್ಞಾನ

ಮೊದಲನೇ ಸ್ಕಂಧ

ಹಿಂದು ಬೋಧನೆಯು

೧ನೇ ಅಧ್ಯಾಯ

ಹಿಂದು ಬೋಧನೆಯಲ್ಲಿ ಶಿಕ್ಷುವ ಪ್ರಕೃತಿಯ ವಿಷಯವು



ಕ್ಷಿಣಾಪಥದಲ್ಲಿ ರಾಯಪುರವೆಂಬದು ಒಂದು ಊರು ಇರುವದು; ಅದರಲ್ಲಿ ಸುಚಿತ್ತಿಯೆಂಬ ಶಾನಭೋಗನೂ ರಂಗನೆಂಬ ವ್ಯಾಪಾರಸ್ಥನೂ ಇದ್ದರು. ಅವರಿಬ್ಬರು ಅಣ್ಣತಮ್ಮಂದಿರು; ಅವರು, ನನ್ನದು ತನ್ನದು ಎಂಬ ಹೊಟ್ಟೆಕಿಚ್ಚಿಲ್ಲದೆ, ಪ್ರಾಣಗೆಳೆಯರಾಗಿದ್ದರು. ಅವರು ಹಿತೋಪದೇಶದ ಮಿತ್ರ-ಲಾಭದಲ್ಲಿರುವ ಗ್ರಂಥಗಳ ಅನುಭವ ಮಾಡುತ್ತಾ ಬಂದರು, ಯಾವವಂದರೆ—

ಅಪುತ್ರಸ್ಯ ಗೃಹಂ ಶೂನ್ಯಂ ಸನ್ಮಿತ್ರ-ರಹಿತಸ್ಯ ಚ॥
ಯಸ್ಯ ಮಿತ್ರೇಣ ಸಮ್ಭಾಷಾ ಯಸ್ಯ ಮಿತ್ರೇಣ ಸಂಸ್ಥಿತಿಃ।
ಯಸ್ಯ ಮಿತ್ರೇಣ ಸಂಲಾಪಸ್ ತತೋ ನಾsಸ್ತ್ಯೇsಹ ಪುಣ್ಯವಾನ್॥

ಟೀಕು॥ ಮಕ್ಕಳಿಲ್ಲದವನ ಮನೆಯೂ ಒಳ್ಳೇ ಗೆಳೆಯನಿಲ್ಲದವನದ್ದೂ ಬಲೇದಾಗಿದೆ; ಯಾವನಿಗೆ ಮಿತ್ರನ ಸಂಗಡ ಸಂಭಾಷಣೆಯು ಲಿಸುತ್ತಾ ಬೋ, ಯಾವನಿಗೆ ಮಿತ್ರನ ಸಂಗಡ ಸಂಗತಿಯು ಅದೆಯೋ, ಯಾವನು ಮಿತ್ರನ ಸಂಗಡ ತನ್ನ ಅಂತಃಸ್ಥಿತಿಯನ್ನು ಹೇಳ ಬಹುದೋ, ಅಂಥವನಿಗಿಂತ ಸುಖವುಳ್ಳವನು ಈ ಲೋಕದಲ್ಲಿ ಇರುವದಿಲ್ಲ.—

ಅಜ್ಞಾನವ ಸುಚಿತ್ತಿಯು ಕಾಲಗತಿಯಲ್ಲಿ ನಿಜ ಮೋಕ್ಷಾರ್ಥಕ್ಕಾಗಿ ಹಿಂದು ಮತವನ್ನು ಬಿಟ್ಟು ಜಗದ್ರಕ್ಷಕನಾದ ಯೇಸು ಕ್ರಿಸ್ತನ ಚಕ್ತನಾದರೂ ಅವರಿಬ್ಬರ ಗೆಳೆತನವು ಹಾಗೆಯೇ ಉಳಿಯಿತು; ಆದರೆ ಹಾಗೆಯೇ ಉಳಿಯಿತೆಂದರೆ ಅದು ಪೂರಾಗಿ ಖರೆಯಲ್ಲ. ಹ್ಯಾಗಂದರೆ ಸುಚಿತ್ತಿಯು ಕ್ರೈಸ್ತನಾದ ಮೇಲೆ ಅವನ ಸ್ನೇಹವೆಂಬ ವೃಕ್ಷವನ್ನು ಬಡ ತರದ ಜೂಮಿಯಿಂದ ಕಿತ್ತು ಉತ್ಕೃಷ್ಟ ತರದ ಜೂಮಿಯಲ್ಲಿ ನಟ್ಟ ಹಾಗಾಯಿತು. ತಮ್ಮನ ಇಹಸುಚಾಗೃವನ್ನಲ್ಲದೆ ಮುಖ್ಯವಾಗಿ ಅವನ ಪರ ಸುಚಾಗೃವನ್ನು ಚಿಂತಿಸುವದರಲ್ಲಿ ಅವನದು ಆ ಪ್ರೀತಿಯು ಗೋಚರ ವಾಯಿತು. ಸುಚಿತ್ತಿಯು ಅನೇಕಾವರ್ತಿ—ತಮ್ಮಾ, ಹಿಂದು ಮತದಲ್ಲಿ ಆತ್ಮರಕ್ಷಣೆಯು ಇಲ್ಲ, ನಿತ್ಯ ಜೀವವನ್ನು ಹಾಂದ ಬೇಕಾದರೆ ಜೀವದಾತೆಯನಾದ ಯೇಸು ಕ್ರಿಸ್ತನ ಮೇಲೆ ವಿಶ್ವಾಸವಿಡ ಬೇಕೆಂತ ಹೇಳಿ, ಬಹಳ ದೃಷ್ಟಾಂತಗಳಿಂದ ತನ್ನ ಮಾತನ್ನು ಸಿದ್ಧಾಂತ ಮಾಡುತ್ತಾ ಬರುವನು. ಅವರಿಬ್ಬರು ತಾರ್ಕಿಕರಲ್ಲ, ಮುಮುಕ್ಷುಗಳೇ; ಅದರ ದೆಸೆಯಿಂದ ರಂಗನು ಅಜ್ಞಾನ ಬುದ್ಧಿಪ್ರಸಂಗಗಳಿಗೆ ಏನೂ ಶಿಟ್ಟು ಪಡವಿರುವನು.

ಒಂದು ರಾತ್ರಿಯಲ್ಲಿ, ತಂಪು ಘಾಳಿಯು ಬೀಸುವಾಗ, ಅವರು ಚಂದ್ರಶಾಲೆಯಲ್ಲಿ ಕೂತು ಕೊಂಡಿರುವಾಗ ರಂಗೈಯ್ಯನು ಕೇಳಿದ್ದೇನಂದರೆ—ಅದೆಲ್ಲಾ ಆಗಲಿ, ಅಣ್ಣಾ; ಆದರೆ ಹಿಂದು ವೇದ ಶಾಸ್ತ್ರಗಳನ್ನು ರಚಿಸಿದ ಜ್ಞಾನಿಗಳೆಲ್ಲರೂ ಪಾಪೋತ್ಪತ್ತಿಯ ವಿಷಯವಾಗಿ ಮೂಢರಾದರೆಂತ ನೀವು ಹೇಳಿದ ಮಾತಿಗೆ ಏನು ಪ್ರಮಾಣ? ದಯೆ ಮಾಡಿ ವಿವರಿಸಿರಿ!—ಅದಕ್ಕೆ ಸುಚಿತ್ತಿಯು—ಸಂತೋಷದಿಂದ ವಿವರಿಸ್ಯೇನು, ಆದರೆ, ತಮ್ಮಾ, ನಿಮಗೆ ಯುಧಿಷ್ಠಿರನ ಲಘು ಮನಸು ಬೇಡ! ಎನ್ನಲಾಗಿ ರಂಗನು, ಅದೇನು ಕಥೆಯ ಮಾತೆಂತ, ವಿಚಾರಿಸಿದನು. ಸುಚಿತ್ತಿಯು ಅಂದವ್ನೇನು—ಮಹಾಭಾರತದ ಆದಿ-ಪರ್ವದ ಪ್ರಕಾರ ಐವರು ಪಾಂಡವರು ದ್ರೌಪದಿಯೆಂಬವಳನ್ನು ಮದಿವೆ ಮಾಡಿ ಕೊಳ್ಳುವರೆಂತ ದ್ರುಪದ-ರಾಜನಿಗೆ ಸುದ್ದಿಯಾದ ಮೇಲೆ ಇವನು ಯುಧಿಷ್ಠಿರನ ಮುಂದೆ ಇಂತೆಂದನು—

ವಿಕಸ್ಯ ಬಹ್ವ್ಯೋ ವಿಹಿತಾ ಮಹಿಷ್ಯಃ ಕುರು-ನಂದನ।
ನೈಕಸ್ಯಾ ಬಹವಃ ಪುಂಸಃ ಶ್ರೂಯಂತೇ ಪತಯಃ ಕ್ವಚಿತ್ ॥ ೭೨೪೪ ॥
ಲೋಕ-ವೇದ-ವಿರುದ್ಧಂ ತ್ವಂ ನಾಽಧರ್ಮಂ ಧರ್ಮ-ವಿಚ್ ಛುಚಿಃ।
ಕರ್ತುಮ್ ಅರ್ಹಸಿ ಕೌಂತ್ಯೇಯ ಕಸ್ಮಾತ್ ತೇ ಬುದ್ಧಿರ್ ಈದೃಶೀ॥ ೭೨೪೫ ॥
ಯುಧಿಷ್ಠಿರ ಉವಾಚ ॥
ಸೂಕ್ಷ್ಮೋ ಧರ್ಮೋ ಮಹಾರಾಜ ನಾಽಸ್ಯ ವಿದ್ಮೋ ವಯಂ ಗತಿಂ।
ಪೂರ್ವೇಷಾಮ್ ಅನುಪೂರ್ವೇಣ ಯಾತಂ ವರ್ತ್ಮಾಽನುಯಾಮಹೇ
॥ ೭೨೪೬ ॥

ಟೀಕು॥ ಒಬ್ಬನಿಗೆ ಬಹಳ ಹೆಂಡರು ಇರುವದು ವಿಹಿತವಾಗಿದೆ, ಕುರು ವಿನ ಮಗನೇ; ಒಬ್ಬಳಿಗೆ ಎಲ್ಲಿಯಾದರೂ ಬಹಳ ಮಂದಿ ಗಂಡಂದ್ಯಾ ರು ಇದ್ದಾರೆಂಬ ವರ್ತಮಾನವು ಇಲ್ಲಿ; ಧರ್ಮ ಬಲ್ಲವನೂ ಶುಚಿಯೂ ಆದ ನೀನು ಲೋಕಕ್ಕೂ ವೇದಗಳಿಗೂ ವಿರುದ್ಧವಾದ ಅಧರ್ಮವನ್ನು ಮಾಡುವದು ತಕ್ಕದ್ದಲ್ಲ; ಕುಂತಿಯ ಮಗನೇ, ಇಂಥಾ ಬುದ್ಧಿಯು ನಿನ ಗೆ ಯಾತಕ್ಕೆ?—ಅದಕ್ಕೆ ಯುಧಿಷ್ಠಿರನು ಅಂದನು—ಧರ್ಮವು ಸೂಕ್ಷ್ಮ ವಾಗಿದೆ, ಮಹಾರಾಜನೇ, ನಮಗೆ ಅದರ ಗತಿಯು ತಿಳಿಯುವದಿಲ್ಲ; ಪೂ ರ್ವಿಕರು ಒಬ್ಬನ ಹಿಂದೆ ಒಬ್ಬನಾಗಿ ನಡದ ದಾರಿಯಲ್ಲಿ ನಡಕೊಳ್ಳು ತ್ತೇವೆ.—

ರಂಗನೇ, ಯುಧಿಷ್ಠಿರನ ಆ ಲಘು ಮನಸನ್ನು ನೋಡಿದಿರೋ? ಅಂಥಾ ಮಂದತನವು ನಿಜ ಮೋಕ್ಷಾಧಿಕಾರಿಗಳಿಗೆ ಹ್ಯಾಗೂ ಸಮವಲ್ಲ ದ್ದರಿಂದ ಅದು ನಿಮಗೆ ದೂರವಿರಲಿ! ಮತ್ತು ಈಗ, ತಮ್ಮಾ, ಹಿಂದು ಜನರಲ್ಲಿ ಪಂಡಿತರೆನ್ನಿಸಿ ಕೊಂಡವರು ಪಾಪಾಶ್ರಯವನ್ನು ಕುರಿತು ಬಾಳಿನಿದ್ದನ್ನು ಶೋಧಿಸುವ; ಅವರು ಬಾಳಿಸುವದೇನಂದರೆ—ಪ್ರಕೃತಿ ಯೆಂಬದು ಒಂದುಂಟು; ಮನುಷ್ಯರ ಮತ್ತು ತಮ್ಮ ದೇವರ ಸಕಲ ದುರ್ಗು ಣಗಳಾಗಲಿ ಸುಗುಣಗಳಾಗಲಿ ದುಷ್ಕೃತಿಯೆಗಳಾಗಲಿ ಸುಕೃತಿಯೆಗಳಾಗಲಿ ಆ ಪ್ರಕೃತಿಯಿಂದಲೇ ಬರುತ್ತವೆ; —ಹ್ಯಾಗಂದರೆ ಮಹಾಭಾರತದ ಭೀ ಷ್ಮ-ಪರ್ವದ ಭಗವದ್-ಗೀತೆಯಲ್ಲಿ ಕೃಷ್ಣನು ಹಿಂತೆಂದನು—

ಸತ್ತ್ವಂ ರಜಸ್ ತಮ ಇತಿ ಗುಣಾಃ ಪ್ರಕೃತಿ-ಸಂಭವಾಃ। ೧೪೦।

ಟೀಕು॥ಸತ್ತ್ವ ರಜಸು ತಮಸು ಎಂಬ ಗುಣಗಳು ಪ್ರಕೃತಿಯಿಂದ ಹುಟ್ಟುತ್ತವೆ.—

ಪ್ರಕೃತಿಯು ಎಲ್ಲಾ ಗುಣಗಳಿಗೂ ಮೂಲವೆಂತ ಪ್ರಮಾಣ ಮಾಡುವದಕ್ಕಾಗಿ ಶಂಕರಾಚಾರ್ಯನು ಸಹ ಅದೇ ಅರ್ಥ ಶ್ಲೋಕವನ್ನು ಕೃಷ್ಣ-ಯಜುರ್-ವೇದಕ್ಕೆ ಶೇರಿದ ಶ್ವೇತಾಶ್ವತರ-ಉಪನಿಷತ್ತಿನ ವಿಷಯವಾಗಿ ತಾನು ರಚಿಸಿದ ಭಾಷ್ಯದಲ್ಲಿ (ಅಂದರೆ ವ್ಯಾಖ್ಯಾನದಲ್ಲಿ) ಬರೆದಿದ್ದಾನೆ, ಕಲ್ಕತ್ತ ಪಟ್ಟಣದಲ್ಲಿ ಛಾಪೆಯಾದ ಆ ಭಾಷ್ಯದ ೨೭ಲನೇ ಪಾನಿನಲ್ಲಿ ಅದು ಹೇಳಿ ಅದೆ; ಅದಲ್ಲದೆ, ತಮ್ಮಾ, ಕೃಷ್ಣನು ಆ ಭಗವದ್-ಗೀತೆಯಲ್ಲಿ ಹೀಗೆಂದನು —

ಪ್ರಕೃತ್ಯೈವ ತು ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ । ೧೩೫೦।

ಟೀಕು॥ಕರ್ಮಗಳು (ಅಂದರೆ ದೇವರ ಮತ್ತು ಜನರ ಸುಕರ್ಮಗಳೂ ದುಷ್ಕರ್ಮಗಳೂ) ಒಂದರ ಮೇಲೆ ಒಂದಾಗಿ ಪ್ರಕೃತಿಯಿಂದಲೇ ಮಾಡಲ್ಪಡುತ್ತವೆ.—

ನೀಲ-ಕಂಠ-ಷಡ್-ದರ್ಶನ-ದರ್ಪಣದ ೧ನೇ ಸ್ಕಂಧದ ೫ನೇ ಅಧ್ಯಾಯಾರಂಭದ ಪ್ರಕಾರ, ಎಲ್ಲಾ ಕರ್ಮಗಳೂ ಪ್ರಕೃತಿಯಿಂದಲಾಗುತ್ತವೆಂತ ಪ್ರಮಾಣಿಸುವದಕ್ಕಾಸ್ಕರವಾಗಿ, ಯೋಗಿಯಾದ ವಿಜ್ಞಾನ-ಭಿಕ್ಷುವು ಆ ಅರ್ಥ ಶ್ಲೋಕವನ್ನೇ ತಾನು ರಚಿಸಿದ ಪಾತಂಜಲ-ಭಾಷ್ಯ-ವಾರ್ತಿಕದಲ್ಲಿ ಬರೆದಿದ್ದಾನೆ; ಅದಲ್ಲದೆ, ತಮ್ಮಾ, ಕೃಷ್ಣನು ಅದೇ ಗೀತೆಯಲ್ಲಿ ಅಂದದ್ದೇನು —

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ । ೨೭ । ೩

ಟೀಕು॥ಕರ್ಮಗಳು (ಅಂದರೆ ದೇವರ ಮತ್ತು ಜನರ ಒಳ್ಳೆಯವುಗಳಾಗಲಿ ಕೆಟ್ಟವುಗಳಾಗಲಿ) ಒಂದರ ಮೇಲೆ ಒಂದಾಗಿ ಪ್ರಕೃತಿಯ ಗುಣಗಳಿಂದ ಮಾಡಲ್ಪಡುತ್ತವೆ.—

ಪ್ರಕೃತಿಯ ಗುಣಗಳಿಂದ (ಅಂದರೆ ರಜಸು ತಮಸು ಸತ್ತ್ವ ಎಂಬವುಗಳಿಂದ) ಎಲ್ಲಾ ಕರ್ಮಗಳಾಗುತ್ತವೆಂತ ಸಿದ್ಧಾಂತ ಮಾಡುವದಕ್ಕೆ

ಶಂಕರಾಚಾರ್ಯನು ಆ ಶ್ವೇತಾಶ್ವತರ-ಉಪನಿಷತ್ತಿನ ಚಾಷ್ಯದ ೩೬ನೇ ಪಾನಿನಲ್ಲಿ ಅದೇ ಅರ್ಥ ಶ್ಲೋಕವನ್ನು ಬರೆದಿದ್ದಾನೆ. — ಅದಲ್ಲದೆ ಮಹಾಚಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವ ದೇನಂದರೆ —

ಪ್ರಕೃತಿಃ ಕುರುತೇ ಕರ್ಮ ಶುಚಾಽಶುಚ-ಫಲಾಽತ್ಮಕಂ। ೧೧೩೦೭।

ಟೀಕು॥ ಪ್ರಕೃತಿಯು ಶುಭ ಮತ್ತು ಅಶುಭ ಫಲವುಳ್ಳ ಕರ್ಮವನ್ನು ಮಾಡುತ್ತದೆ.—

ವಿಜ್ಞಾನ-ಭಿಕ್ಷುವು ರಚಿಸಿ ಕಲ್ಕತ್ತ ಪಟ್ಟಣದಲ್ಲಿ ಛಾಪೆಯಾದ ಸಾಂಖ್ಯ-ಪ್ರವಚನ-ಚಾಷ್ಯದ ೩೫ನೇ ಪಾನಿನಲ್ಲಿಯೂ ಆ ಅರ್ಥ ಶ್ಲೋಕವು ಕಾಣಿಸುತ್ತದೆ; ಅದಲ್ಲದೆ ಶಂಕರಾಚಾರ್ಯನು ತನ್ನ ಶ್ವೇತಾಶ್ವತರ-ಉಪನಿಷತ್ತಿನ ಚಾಷ್ಯದ ೨೭ನೇ ಪಾನಿನಲ್ಲಿ ಹೇಳುವದೇನಂದರೆ —

ತಥಾ ಚ ಪ್ರಕೃತಿ-ಕಾರ್ಯತ್ವಂ ಗುಣಾನಾಂ ದರ್ಶಯತಿ ವ್ಯಾಸಃ।

ಟೀಕು॥ ಅದೇ ಪ್ರಕಾರ (ವಿಷ್ಣು-ಪುರಾಣದ ೩ನೇ ಅಂಶೆದಲ್ಲಿರುವ ೨ನೇ ಅಧ್ಯಾಯದ ೨೦ನೇ ಶ್ಲೋಕದ ಮೇರೆಗೂ, ೩ನೇ ಅಧ್ಯಾಯೆದ ೫ನೇ ಶ್ಲೋಕದ ಮೇರೆಗೂ, ೪ನೇ ಅಧ್ಯಾಯೆದ ೫ನೇ ಕ್ಲೋಕದ ಮೇರೆಗೂ ವಿಭುವಾದ ವಿಷ್ಣುವೂ ಪ್ರಭುವಾದ ನಾರಾಯಣನೂ ಎನ್ನಿಸುವ) ವ್ಯಾಸ ಮುನಿಯು ಸಹ, ಪ್ರಕೃತಿಯು ಗುಣಗಳನ್ನು ಉಂಟು ಮಾಡುತ್ತದೆಂತ, ತೋರಿಸುತ್ತಾನೆ.—

ಮತ್ತು ಸದಾನಂದ-ಯೋಗೀಂದ್ರನು ತಾನು ರಚಿಸಿದ ವೇದಾಂತ-ಸಾರದ ೧೪ನೇ ಸಂಧಾನದಲ್ಲಿ ಪ್ರಕೃತಿಯೆಂಬ ಅಜ್ಞಾನದ ವಿಷಯವಾಗಿ ಹೇಳುವದೇನಂದರೆ —

ಅಖಿಲ-ಕಾರ್ಯ-ಕಾರಣಮ್ ಅಜ್ಞಾನಂ। ೫।

ಟೀಕು॥ ಅಜ್ಞಾನವು ಎಲ್ಲಾ ಕಾರ್ಯಗಳ ಕಾರಣವಾಗಿದೆ.—

ಷದರ ದೆಸೆಯಿಂದ ಹಿಂದು ಬೋಧೆಯಲ್ಲಿ, ತಮ್ಮಾ, ದೇವರ ಮತ್ತು ಜನರ ಎಲ್ಲಾ ಕ್ರಿಯೆಗಳು — ಅವು ಒಳ್ಳೆಯವುಗಳಾಗಲಿ ಕೆಟ್ಟವುಗಳಾಗ

ಲಿ—ಅಜ್ಞಾನ ಅಥವಾ ಅವಿದ್ಯೆ ಎನ್ನಿಸುತ್ತವೆ; ಹ್ಯಾಗಂದರೆ ಶಂಕರಾಚಾರ್ಯರು ಆ ಶ್ವೇತಾಶ್ವತರ-ಉಪನಿಷದ್-ಭಾಷ್ಯದ ೨೬ಳನೇ ಪಾನಿನಲ್ಲಿ ವಿಷ್ಣು-ಧರ್ಮದ ೬ನೇ ಅಧ್ಯಾಯದಿಂದ ತೆಗೆದು ಬರೆದ ಅರ್ಧ ಶ್ಲೋಕವೇನಂದರೆ —

ಅವಿದ್ಯಾ ಚ ಕ್ರಿಯಾಃ ಸರ್ವಾ ವಿದ್ಯಾ ಜ್ಞಾನಂ ಪ್ರಚಕ್ಷತೇ।

ಟೀಕು॥ ಎಲ್ಲಾ ಕ್ರಿಯೆಗಳು ಅವಿದ್ಯೆಯಾಗಿವೆ*, ವಿದ್ಯೆಯು ಜ್ಞಾನವೆನ್ನುತ್ತಾರೆ.—

ಅದಲ್ಲದೆ ವಿಜ್ಞಾನ-ಭಿಕ್ಷುವು ರಚಿಸಿ ಕಲ್ಕತ್ತದಲ್ಲಿ ಛಾಪೆಯಾದ ಸಾಂಖ್ಯ-ಪ್ರವಚನ-ಭಾಷ್ಯದ ೩೯ನೇ ಪಾನಿನಲ್ಲಿ ಹೇಳಿರುವದೇನಂದರೆ — ಈಶ್ವರ-ಗೀತಾಯಾಮ್ ಉಕ್ತಂ।

ರಾಗ-ದ್ವೇಷಾಽದಯಾೀ ದಾೀಷಾಃ ಸರ್ವೇ ಚಿತ್ತಾಸ್ತಿ-ನಿಬನ್ಧನಾಃ।
ಕಾಯಾರ್ೀ ಹ್ಯೆ ಅಸೃ ಋವೇದ್ ದಾೀಷಃ ಪುಣ್ಯಾಽಪುಣ್ಯಮ್ ಇತಿ ಶ್ರುತಿಃ॥

ಟೀಕು॥ ಈಶ್ವರ-ಗೀತೆಯಲ್ಲಿ ಹೇಳಿರುವದೇನಂದರೆ, ರಾಗ ದ್ವೇಷ ಮುಂತಾದ್ದಾಗಿರುವ (ಅಂದರೆ ಎಲ್ಲಾ ಸುಗುಣಗಳೂ ದುರ್ಗುಣಗಳೂ ಆಗಿರುವ) ದೋಷಗಳು ಭ್ರಾಂತಿಯಿಂದ (ಅಂದರೆ ಅಜ್ಞಾನದಿಂದ ಅಂದರೆ ಅವಿದ್ಯೆಯಿಂದ ಅಂದರೆ ಪ್ರಕೃತಿಯಿಂದ) ನಿರ್ಮಿಸಲ್ಪಟ್ಟಿವುಗಳಾಗಿವೆ; ಅದರಿಂದಲೇ (ಅಂದರೆ ಆ ಗುಣಗಳ ರಾಶಿಯಿಂದಲೇ) ಪುಣ್ಯವೂ ಅಪುಣ್ಯವೂ ಎಂಬ ದೋಷವು ಆಗುತ್ತದೆಂದು ವೇದವು ಹೇಳುತ್ತವೆ.—

ಮಹಾಭಾರತದ ಶಾಂತಿ-ಪರ್ವದಲ್ಲಿ, ದೇವರ ಕರ್ಮಗಳೂ ಅವಿದ್ಯೆಯಿಂದ (ಅಂದರೆ ಪ್ರಕೃತಿಯಿಂದ) ಆಗುತ್ತವೆಂಬಿದರ ವಿಷಯವಾಗಿ, ೫ರುವದೇನಂದರೆ —

ವ್ಯಾಸ ಉವಾಚ॥

ಅಹರ್-ಮುಖೇ ನಿಬುದ್ಧಃ ಸನ್ ಸೃಜತೇೀಽವಿದ್ಯಯಾ ಜಗತ್। ೪೫೧೧।

ಟೀಕು॥ ಹಗಲಿನ (ಅಂದರೆ ಹೊಸ ಕಲ್ಪದ) ಆರಂಭದಲ್ಲಿ ಅವನು (ಅಂದರೆ ದೇವರು) ಎಚ್ಚರವಾಗಿ (ಅಂದರೆ ನಿದ್ರೆ ತೀದು), ಅವಿದ್ಯೆಯಿಂ

*ಉಪಸ್ಯಾಥದ ೧ನೇ ಅಂಕೆಯದನ್ನು ನೋಡಿರಿ.

ದ ಜಗತ್ತನ್ನು ಸೃಷ್ಟಿಸುತ್ತಾನೆ ಎಂತ ವ್ಯಾಸನು ಹೇಳಿದನು (ಮುಂದಿನ ವಿಚಾರದಲ್ಲಿ ಇದು ಹೆಚ್ಚಾಗಿ ಕಾಣುವದು).—

ಈ ಮಾತುಗಳ ಮೇಲೆ, ರಂಗನೇ, ಹಿಂದು ಜನರು ಕರ್ಮೋತ್ಪತ್ತಿಯ ವಿಷಯವಾಗಿ ಬಾಳಿಸಿದ್ದರಲ್ಲಿ ಪ್ರಕೃತಿಯೆಂಬದು ಮುಖ್ಯವೆಂತ ಗೊತ್ತಾಯಿತಲ್ಲವೋ? ನಾನು ಕಡೆಗೆ ಹೇಳಿದ ವಾಕ್ಯಗಳಲ್ಲಿ ಅಜ್ಞಾನ ಮತ್ತು ಅವಿದ್ಯೆ ಮತ್ತು ಭ್ರಾಂತಿ ಎಂಬದು ಪ್ರಕೃತಿಯೆಂಬದಕ್ಕೆ ಸರಿ ಬೀಳುತ್ತದೆಂದು ನಿಮಗೆ ಇನ್ನು ಮುಂದೆ ತಿಳಿಯ ಬರುವದು; ಹ್ಯಾಗಂದರೆ ಹಿಂದು ಪಂಡಿತರು ತಾವು ಎಲ್ಲಾ ಗುಣಗಳಿಗೂ ಕರ್ಮಗಳಿಗೂ ಮೂಲವೆಂತ ನೆನಸಿದ ಪ್ರಕೃತಿಗೆ ತಮ್ಮ ಶಾಸ್ತ್ರಗಳಲ್ಲಿ ಬೇರೆ ಬೇರೆ ಹೆಸರುಗಳನ್ನಿಕ್ಕಿ, ಅದನ್ನು ಬೇರೆ ಬೇರೆ ಪ್ರಕಾರವಾಗಿ ವರ್ಣಿಸಿದ್ದಾರೆ; ನಿಮಗೆ ಇದರ ವಿಷಯವಾಗಿ ಸಂಶಯವು ಉಳಿಯದ ಹಾಗೆ ಕೆಲವು ಪ್ರಮಾಣವಾಕ್ಯಗಳನ್ನು ಕೇಳಿರಿ; ಭಾಗವತ-ಪುರಾಣದ ೧ನೇ ಸ್ಕಂಧದ ೩ನೇ ಅಧ್ಯಾಯದ ೧೦ನೇ ಶ್ಲೋಕದ ಪ್ರಕಾರ ವಿಷ್ಣುವಿನ ಐದನೇ ಅವತಾರವೆನ್ನಿಸುವ ಕಪಿಲ ಮುನಿಯ ಒಂದು ಸೂತ್ರವು ಇಲ್ಲಿ ಅದೆ, ಅದು ಅವನು ರಚಿಸಿದ ಸಾಂಖ್ಯ-ಪ್ರವಚನದ ೧ನೇ ಅಧ್ಯಾಯದ ೬೭ನೇ ಸೂತ್ರ, ಅಂದರೆ—

ಸತ್ವ-ರಜಸ್-ತಮಸಾಂ ಸಾಮ್ಯಾವಸ್ಥಾ ಪ್ರಕೃತಿಃ ।೬೭।

ಟೀಕು॥ ಸತ್ವವೂ ರಜಸೂ ತಮಸೂ ಒಂದೇ ಹಾಳತೆಯಲ್ಲಿ ಇರುವಂಥಾದ್ದು ಪ್ರಕೃತಿಯಾಗಿದೆ.—

ಮತ್ತು ಕೃಷ್ಣ-ಯಜುರ್-ವೇದಕ್ಕೆ ಶೇರಿದ ಶ್ವೇತಾಶ್ವತರ-ಉಪನಿಷತ್ತಿನ ೪ನೇ ಅಧ್ಯಾಯದಲ್ಲಿ ಹೇಳಿರುವದೇನಂದರೆ—

ಮಾಯಾನ್ ತು ಪ್ರಕೃತಿಂ ವಿದ್ಯಾತ್ ।೧೦।

ಟೀಕು॥ ಮಾಯೆಯು ಪ್ರಕೃತಿಯಾಗಿದೆಂತ ತಿಳುಕೊಳ್ಳಿ ತಕ್ಕದ್ದಾಗಿದೆ.—

ಮತ್ತು ಕಲ್ಕತ್ತ ಪಟ್ಟಣದಲ್ಲಿ ಛಾಪೆಯಾದ ನೀಲ-ಕಂಠ-ಷಡ್-ದರ್ಶನ-ದರ್ಪಣದ ೪ನೇ ಪಾನಿನಲ್ಲಿ ವಿಜ್ಞಾನ-ಭಿಕ್ಷುವು ಬೃಹದ್-ವಾಶಿ

ಷ್ಟವೆಂಬ ಗ್ರಂಥದಿಂದ ತೆಗೆದು ತನ್ನ ಯೋಗ-ಚಾಷ್ಯ-ವಾರ್ತ್ತಿಕದಲ್ಲಿ ಹಾಕಿದ ಒಂದು ಶ್ಲೋಕವದೆ, ಏನಂದರೆ —

ನಾಮ-ರೂಪ-ವಿನಿರ್ಮುಕ್ತಂ ಯಸ್ಮಿನ್ ಸನ್ತಿಷ್ಠತೇ ಜಗತ್।
ತಮ್ ಆಹುಃ ಪ್ರಕೃತಿಂಕೇಚಿನ್ ಮಾಯಾಮ್ ಅನ್ಯೇ಼ಪರೇ ತ್ವಅಜಮ್॥

ಟೀಕು॥ ಜಗತ್ತು ನಾಮ ರೂಪಗಳಿಲ್ಲದ್ದಾಗಿ ಯಾತರಲ್ಲಿ ನಿಲ್ಲುತ್ತದೋ, ಅದನ್ನೇ ಕೆಲವರು ಪ್ರಕೃತಿಯೆಂತ ಮತ್ತೊಬ್ಬರು ಮಾಯೆಯೆಂತ ಬೇರೊಬ್ಬರು (ಪಂಚ-ಭೂತಗಳೆಂಬ) ಅಣುವುಗಳೆಂತ ಹೇಳುತ್ತಾರೆ.—

ಮತ್ತು ಅದೇ ಷಡ್-ದರ್ಶನ-ದರ್ಪಣದ ಗಲೀನೇ ಪಾಣಿನಲ್ಲಿ ವಿಜ್ಞಾನ-ಭಿಕ್ಷುವು ಆದಿತ್ಯ-ಪುರಾಣದಿಂದ ತೆಗೆದು ತನ್ನ ಯೋಗ-ಚಾಷ್ಯ-ವಾರ್ತ್ತಿಕದಲ್ಲಿ ಶೇರಿಸಿದ ಒಂದು ಶ್ಲೋಕವು ಅದೆ, ಏನಂದರೆ —

ನಾ಼ಸದ್-ರೂಪಾ ನ ಸದ್-ರೂಪಾ ಮಾಯಾ ನೈ಼ವೋ಼ಭಯಾ಼ತ್ಮಿಕಾ।
ಸದ್-ಅಸದ್ಭ್ಯಾಮ್ ಅನಿರ್ವಾಚ್ಯಾ ಮಿಥ್ಯಾ-ಭೂತಾ ಸನಾತನೀ॥

ಟೀಕು॥ ಮಾಯೆಯು ತನ್ನ ಸ್ವಭಾವದ ಪ್ರಕಾರ ಇಲ್ಲದಂಥ ರೂಪದ್ದಲ್ಲ, ಮತ್ತು ಇರುವಂಥ ರೂಪದ್ದಲ್ಲ, ಮತ್ತು ಆ ಎರಡು ಕೂಡಿದಂಥಾದ್ದಲ್ಲ; ಅದು ಇರುವಂಥಾದ್ದೆಂದಾಗಲಿ ಇಲ್ಲದಂಥಾದ್ದೆಂದಾಗಲಿ ಹೇಳಕೂಡದು, ಅದು ಮಿಥ್ಯೆಯೂ ನಿತ್ಯವೂ ಆಗಿದೆ (ಹಿಂದು ಜನರಲ್ಲಿ ದೇವರ ಮತ್ತು ಜನರ ಎಲ್ಲಾ ಕ್ರಿಯೆಗಳಿಗೆ ಮೂಲವೆನ್ನಿಸುವ ಆ ಪ್ರಕೃತಿಯ ಅಥವಾ ಮಾಯೆಯ ಸಕಲ ಸುಕ್ರಿಯೆಗಳೂ ದುಷ್ಕ್ರಿಯೆಗಳೂ ಸಹಸುಳ್ಳು ಎಂಬಂತೆ).—

ಮತ್ತು, ತಮ್ಮಾ, ಇಲ್ಲಿ ವೇದಾಂತ-ಸಾರದ ಸಿನೇ ಸಂಧಾನದ ಒಂದು ವಾಕ್ಯವದೆ, ಏನಂದರೆ —

ಅಜ್ಞಾನಂ ತು ಸದ್-ಅಸದ್ಭ್ಯಾಮ್ ಅನಿರ್ವಚನೀಯಂ ತ್ರಿಗುಣಾ಼ತ್ಮಕಂ ಜ್ಞಾನ-ವಿರೋಧಿ ಯತ್ ಕಿಂಚಿತ್। ೬।

ಟೀಕು॥ ಅಜ್ಞಾನವು (ಅಂದರೆ ಮಾಯೆಯು ಅಥವಾ ಪ್ರಕೃತಿಯು) ಇರುವಂಥಾದ್ದೆಂದಾಗಲಿ ಇಲ್ಲದಂಥಾದ್ದೆಂದಾಗಲಿ ಹೇಳಕೂಡದು;

ಅದು ಮೂರು (ಅಂದರೆ ಸತ್ತ್ವ ರಜಸು ತಮಸು ಎಂಬ) ಗುಣಗಳಾದ ದ್ದೂ ಇರುವ ಹಾಗೆ (ಕವಟದಿಂದ) ಕಾಣಿಸುವಂಥಾದ್ದೂ (ಅಂದರೆ ಮಿಥ್ಯೆಯಾದಂಥಾದ್ದೂ) ಜ್ಞಾನಕ್ಕೆ ವಿರೋಧವಾದದ್ದೂ ಏನೋ ಒಂದು ಆಗಿದೆ.—

ಮತ್ತು ಶಂಕರಾಚಾರ್ಯನು ಅಥರ್ವ-ವೇದದ ಮಾಂಡೂಕ್ಯ-ಉಪನಿಷತ್ತಿನ ವಿಷಯವಾಗಿ ರಚಿಸಿ ಕಲ್ಕತ್ತ ಪಟ್ಟಣದಲ್ಲಿ ಛಾಪೆಯಾದ ಶಾಷ್ಯದ ಳಟಿನೇ ಪಾನಿನಲ್ಲಿ ಹೇಳಿರುವದೇನಂದರೆ —

ಮಾಯಾzವಿದ್ಯಾ।

ಟೀಕು॥ ಮಾಯೆಯು ಅವಿದ್ಯೆಯಾಗಿದೆ.—

ಆ ಶಾಷ್ಯದ ಳಲನೇ ಪಾನಿನಲ್ಲಿ ಅವನು ಹೇಳುವದೇನಂದರೆ —

ಅವಿದ್ಯಾ-ಲಕ್ಷಣ್ಾzನಾದಿ-ಮಾಯಾ ನಿದ್ರಾ।

ಟೀಕು॥ ಅವಿದ್ಯೆಯ ಲಕ್ಷಣವುಳ್ಳ ಅನಾದಿಯಾದ ಮಾಯೆಯು (ಕನಸುಳ್ಳಂಥ) ನಿದ್ರೆಯಾಗಿದೆ (ಸುಕರ್ಮಗಳೂ ದುಷ್ಕರ್ಮಗಳೂ ಸಹಬರೇ ನಿದ್ರೆಯ ಕನಸೆಂಬಂತೆ). —

ಅದಲ್ಲದೆ ಆನಂದ-ಗಿರಿಯೆಂಬ ಹಿಂದು ಜನರಲ್ಲಿ ಪ್ರಖ್ಯಾತಿ ಪಟ್ಟ ಪಂಯಿತನು ರಚಿಸಿ ಕಲ್ಕತ್ತದಲ್ಲಿ ಛಾಪೆಯಾದ ಅದೇ ಉಪನಿಷತ್ತಿನ ಟೀಕಿನ ಳಟಿನೇ ಪಾನಿನಲ್ಲಿ ಹೇಳಿರುವದೇನಂದರೆ —

ಮಾಯಾ ಮಣಿ-ಮನ್ತ್ರಾzದಿ-ರೂಪೇzನ್ದ್ರ-ಜಾಲ-ಪ್ರಯಾೀಜಕ-ಶೂತಾ।

ಟೀಕು॥ ಮಾಯೆಯು ಮಣಿಗಳ ಮತ್ತು ಮಂತ್ರಗಳ ಇತ್ಯಾದಿ (ಬಣ್ಣವುಳ್ಳಂಥ ಮತ್ತು ಬಲವುಳ್ಳಂಥ) ವಸ್ತುಗಳ ರೂಪದ್ದೂ ಇಂದ್ರಜಾಲವನ್ನು (ಅಂದರೆ ಮನಸ್ಸನ್ನು ಮರುಳಾಗಿ ಶಿಕ್ಕಿ ಕೊಳ್ಳುವ ಬಲೆಯನ್ನು) ಹಾಕುವಂಥಾದ್ದು ಆಗಿದೆ.—

ಮತ್ತು ಆನಂದ-ಗಿರಿಯು ಶುಕ್ಲ-ಯಜುರ್-ವೇದಕ್ಕೆ ಶೇರಿದ ವಾಜಸನೇಯ-ಉಪನಿಷತ್ತಿನ ಟೀಕು ಮಾಡಿ, ಅದರ ೧೦ನೇ ಶ್ಲಾೀಕಕ್ಕೆ ಹೇಳಿರುವದೇನಂದರೆ —

ಮಾಯಾ ಪರಮೇಶ್ವರಸ್ಯೋಪಾಧಿಃ।

ಟೀಕು॥ ಮಾಯೆಯು ಪರಮೇಶ್ವರನ ಉಪಾಧಿಯು (ಅಂದರೆ ವಿಶೇಷ ಲಕ್ಷಣವು ಅಥವಾ ವೇಷವು) ಆಗಿದೆ.—

ಅದಲ್ಲದೆ ಮತ್ಸ್ಯ-ಪುರಾಣದಲ್ಲಿ ಬರೆದಿರುವದೇನಂದರೆ—

ಸತ್ತ್ವಂ ರಜಸ್ ತಮಶ್ ಚೈವ ಗುಣ-ತ್ರಯಮ್ ಉದಾಹೃತಂ।
ಸಾಮ್ಯಾವಸ್ಥಿತ್ ಏತೇಷಾಂ ಪ್ರಕೃತಿಃ ಪರಿಕೀರ್ತಿತಾ॥
ಕೇಚಿತ್ ಪ್ರಧಾನಮ್ ಇತ್ಯೆ ಆಹುರ್ ಅವ್ಯಕ್ತಮ್ ಅಪರೇ ಜಗುಃ।

ಟೀಕು॥ ಸತ್ತ್ವ ರಜಸು ತಮಸು ಎಂತಲೇ ಮೂರು ಗುಣಗಳನ್ನು ವಿಕ್ಷಿಪಿಸಲಾಂಬುತು; ಇವುಗಳು ಬಂದೇ ಹಾಳತೆಯಲ್ಲಿ ಇರುವಂಥಾದ್ದು ಪ್ರಕೃತಿಯೆಂತ ಕೊಂಡಾಡುತ್ತಾರೆ; ಕೆಲವರು ಅದನ್ನು ಪ್ರಧಾನವೆಂತ ಹೇಳುತ್ತಾರೆ, ಮತ್ತೊಬ್ಬರು ಅವ್ಯಕ್ತವೆಂತ ಹೇಳುತ್ತಾರೆ.—

ಲಿಂಗ-ಪುರಾಣದ ೧೭ನೇ ಅಧ್ಯಾಯದಲ್ಲಿ ಇರುವದೇನಂದರೆ—

ಪಿತಾಮಹ ಉವಾಚ॥
ಪ್ರಧಾನಂ ಲಿಂಗಮ್ ಆಖ್ಯಾತಂ ಲಿಂಗೀ ಚ ಪರಮೇಶ್ವರಃ। ೫।

ಟೀಕು॥ ಪ್ರಧಾನವು (ಅಂದರೆ ಪ್ರಕೃತಿಯು ಅಥವಾ ಅವ್ಯಕ್ತವು ಅಥವಾ ಮಾಯೆಯು) ಲಿಂಗವೆನ್ನಿಸುತ್ತದೆ; ಲಿಂಗವು* ಉಳ್ಳವನು ಪರಮೇಶ್ವರನಾಗಿದ್ದಾನೆ ಎಂತ ಬ್ರಹ್ಮನು ಹೇಳಿದನು.—

ಮತ್ತು, ತಮ್ಮಾ, ಮಹಾಭಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವದೇನಂದರೆ—

ಅವ್ಯಕ್ತಮ್ ಆಹುಃ ಪ್ರಕೃತಿಂ ಪರಂ ಪ್ರಕೃತಿ-ವಾದಿನಃ। ೧೨೯೪।
ತದ್ ಅವ್ಯಕ್ತಮ್ ಇತಿ ಜ್ಞೇಯಂ ತ್ರಿ-ಗುಣಂ ನೃಪ-ಸತ್ತಮ। ೧೪೪೬।
ಶಿಸ್ರಃ ಪ್ರಕೃತಯಾೀ ರಾಜನ್ ದೇಹ-ಬಿನ್ದೇಷು ನಿರ್ಮಿತಾಃ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೈವ ಭಾರತ॥ ೧೪೬೦೫॥

---

* ಉಪಸ್ಕಂಧದ ೨ನೇ ಅಂಕೆಯದನ್ನು ನೋಡಿರಿ.

ಟೀಕು॥ ಪ್ರಕೃತಿವಾದಿಗಳು ಪರವಾದ ಅವ್ಯಕ್ತವನ್ನು ಪ್ರಕೃತಿಯೆಂತ ಹೇಳುತ್ತಾರೆ; ಅವ್ಯಕ್ತವೆಂತ ತಿಳಿಕೊಳ್ಳ ತಕ್ಕಂಥ ಅದು ಮೂರು ಗುಣಗಳದ್ದಾಗಿವೆ, ಉತ್ತಮ ರಾಜನೇ; ದೇಹದ ಬಂಧಗಳಲ್ಲಿ (ಅಂದರೆ ದೇಹಗಳಿಗೆ ಕಟ್ಟುವಂಥಾ, ಮೋಕ್ಷಕ್ಕೆ ವಿರೋಧ ಮಾಡುವಂಥಾ ಬಂಧಗಳಲ್ಲಿ) ಮೂರು ಪ್ರಕೃತಿಗಳು (ದೇವರಿಂದ) ನಿರ್ಮಿಸಲ್ಪಟ್ಟವೆ, ರಾಜನೇ; ಯಾವವಂದರೆ ಸಾತ್ತ್ವಿಕವಾದದ್ದೂ ರಾಜಸವಾದದ್ದೂ ತಾಮಸವಾದದ್ದೂ, ಭಾರತನೇ!—

ಮತ್ತು ಮಹಾಭಾರತದ ಶಾಂತಿ-ಪರ್ವದಲ್ಲಿ ಇರುವದೇನಂದರೆ—

ಅವಿದ್ಯಾಮ್ ಆಹುರ್ ಅವ್ಯಕ್ತಂ ಸರ್ಗ-ಪ್ರಲಯ-ಧರ್ಮ ಣೈ
।೩೦೪೧೯।

ಟೀಕು॥ ಸೃಷ್ಟಿ ಪ್ರಲಯಗಳ ಲಕ್ಷಣವುಳ್ಳ (ಅಂದರೆ ಹಿಂದು ಶಾಸ್ತ್ರಗಳ ಪ್ರಕಾರ ಎಲ್ಲಾ ಕರ್ಮ ಮಾಡುವ) ಅವ್ಯಕ್ತವು (ಅಂದರೆ ಪ್ರಕೃತಿಯು) ಅವಿದ್ಯೆಯೆನ್ನಿಸುತ್ತದೆ.—

ಅದಲ್ಲದೆ ಶಂಕರಾಚಾರ್ಯನು ತಾನು ಕೃಷ್ಣ-ಯಜುರ್-ವೇದದ ಶ್ವೇತಾಶ್ವತರ-ಉಪನಿಷತ್ತಿನ ಭಾಷ್ಯ ಮಾಡಿ, ಅದರ ೧ನೇ ಅಧ್ಯಾಯದ ೨ನೇ ಶ್ಲೋಕಕ್ಕೆ ಹೇಳಿರುವದೇನಂದರೆ—

ಕೇಚಿದ್ ಯೋನಿ-ಶಬ್ದಂ ಪ್ರಕೃತಿಂ ವರ್ಣಯನ್ತಿ। ತದ್ ಉಕ್ತಂ ಹಿ ಶಾಂತಿ-ಪರ್ವೇ।

ರಜಸ್ ತಮಶ್ ಚ ಸತ್ತ್ವಂ ಚ ತ್ರಯ ಏತೇ ಸ್ವ-ಯೋನಿ-ಜಾಃ।
ಸಮಾಃ ಸರ್ವೇಷು ಭೂತೇಷು ತಾನ್ ಗುಣಾನ್ ಉಪಲಕ್ಷಯೇತ್॥೪೯೩॥

ಟೀಕು॥ ಕೆಲವರು ಯೋನಿಯೆಂಬದನ್ನು ಪ್ರಕೃತಿಯೆಂತ ವರ್ಣಿಸುತ್ತಾರೆ; ಅದರ ಬೆನೆಯಿಂದ (ಮಹಾಭಾರತದ) ಶಾಂತಿ-ಪರ್ವದಲ್ಲಿ ಹೇಳಿರುವದೇನಂದರೆ, ರಜಸೂ ತಮಸೂ ಸತ್ತ್ವವೂ ಈ ಮೂರವುಗಳು (ಪ್ರಕೃತಿಯೆಂಬ) ಸ್ವಯೋನಿಯಿಂದ ಹುಟ್ಟಿದವುಗಳಾಗಿವೆ, ಆ (ಮೂರು) ಗುಣಗಳು ಎಲ್ಲಾ ಭೂತಗಳಲ್ಲಿ (ಅಂದರೆ ಮನುಷ್ಯಾದಿಗಳಲ್ಲಿ) ಸಮವಾಗಿವೆಂತ ನೋಡ ತಕ್ಕದ್ದಾಗಿದೆ.—

ಈ ಪ್ರಕಾರವಾಗಿ, ತಮ್ಮಾ, ಹಿಂದು ಗ್ರಂಥಕರ್ತರು ಎಲ್ಲಾ ಸುಗುಣಗಳಿಗೂ ದುರ್ಗುಣಗಳಿಗೂ ಎಲ್ಲಾ ಸುಕ್ರಿಯೆಗಳಿಗೂ ದುಷ್ಕ್ರಿಯೆಗಳಿಗೂ ಮೂಲವೆಂತ ತಾವು ನೆನಸಿದ್ದಕ್ಕೆ ೧೪ ಮುಖ್ಯ ಹೆಸರುಗಳನ್ನು ಆಕ್ಕಿದರೆಂದು ಕಂಡೆವು; ಅವು ಯಾವವಂದರೆ—ಪ್ರಕೃತಿ, ಮಾಯೆ, ಪಂಚಭೂತಗಳೆಂಬ ಅಣುವುಗಳು, ಮಿಥ್ಯೆ, ಅಜ್ಞಾನ, ಅವಿದ್ಯೆ, ಭ್ರಾಂತಿ, ನಿದ್ರೆ, ಇಂದ್ರಜಾಲ, ಪರಮೇಶ್ವರನ ಉಪಾಧಿ (ಅಂದರೆ ವಿಶೇಷಲಕ್ಷಣ ಅಥವಾ ವೇಷ), ಪ್ರಧಾನ, ಅವ್ಯಕ್ತ, ಲಿಂಗ, ಯೋನಿ; ಶಿಳಿಯ ಬಂತಾ?—ಅದಕ್ಕೆ ರಂಗನು ಅಂದನು—ಶಿಳಿಯ ಬಂದದೆ, ಅಣ್ಣಾ; ಆದರೆ ಇಷ್ಟೆಲ್ಲಾ ಯಾತಕ್ಕೆ? ಆ ಗ್ರಂಥಗಳ ಮೇಲೆ ಪಾಪ ಪುಣ್ಯಗಳೆರಡೂ ಮಿಥ್ಯೆಯೂ ಅಜ್ಞಾನವೂ ಆಗಿವೆಂಬ ಬೌದ್ಧವಾದವನ್ನು ಸಿದ್ಧಾಂತ ಮಾಡಲಿಕ್ಕೆ ಯೋಚಿಸುತ್ತೀರಾ?—ಸುಚಿತ್ತಿಯು ಕೇಳಿ, ಎಲ್ಲಾ ಸುಗುಣಗಳೂ ದುರ್ಗುಣಗಳೂ, ಸುಕ್ರಿಯೆಗಳೂ ದುಷ್ಕ್ರಿಯೆಗಳೂ, ಅಥವಾ ಸತ್ವ ರಜಸು ತಮಸುಗಳುಳ್ಳ ಎಲ್ಲಾ ಗುಣಗಳೂ ಕರ್ಮಗಳೂ ಸುಳ್ಳೇ ಎಂಬಂಥ, ಮನಸ್ಸಾಕ್ಷಿಯ ಬಲ ಕಿತ್ತು ಇಹಪರ ಮತ್ತು ಪರದ ನಾಶನಕ್ಕೆ ಕಾರಣವಾಗುವಂಥ ಆ ಬೌದ್ಧ ದುರ್ಬೋಧನೆಯು ಸಹ ಆ ಹಿಂದು ಗ್ರಂಥಗಳಿಂದ ಪ್ರಮಾಣವಾಯಿತು, ಹೌದು; ಆಪರೆ ಈ ದೂಷ್ಯ ಹಿಂದು ಬೋಧನೆಯನ್ನು ಕುರಿತು ಮತ್ತೊಂದು ಸಮಯ ಮಾತಾಡ ಬಂದೀತು; ತಾವು ಪ್ರಕೃತಿ ಇತ್ಯಾದಿ ಹೇಳುವಂಥಾದ್ದು ಮೂರು ಗುಣಗಳಾದ್ದೂ ಮೂರು ಗುಣಗಳ ಮತ್ತು ಇವುಗಳ ಕ್ರಿಯೆಗಳ ಕಾರಣವಾದ್ದೂ ಎಂತ ಹಿಂದು ಜನರು ಬೋಧಿಸುತ್ತಾರೆಂಬದಾಗಿ ತೋರಿಸಲಿಕ್ಕೆ ನನಗೆ ಮುಖ್ಯವಾಗಿ ಮನಸ್ಸಿತ್ತು; ಅದು ತೋರಿಸಿದ ಹಾಗಾಯಿತಲ್ಲವಾ, ತಮ್ಮಾ? ಎನ್ನಲಾಗಿ ರಂಗನು ಒಪ್ಪಿ ಕಾಂಡನು.—ಆಗ ಸುಚಿತ್ತಿಯು ಹೇಳಿದ್ದೇನಂದರೆ—ಹಿಂದು ಜನರಲ್ಲಿ ಪ್ರಕೃತಿ ಇತ್ಯಾದಿ ಹೆಸರುಗಾಂಡದ್ದು ಮೂರು ಗುಣಗಳೇ ಅಥವಾ ಮೂರು ಗುಣಗಳ ಉತ್ಪತ್ತಿಸ್ಥಾನವೇ ಎಂಬುದನ್ನು ಚಂದಾಗಿ ಜ್ಞಾಪಕ ಮಾಡಿ ಕಾಳ್ಕಿರಿ, ಆ ಗಾತ್ತು ನಮ್ಮ ಸಂಜಾಷಣೆಯ ವಿಶೇಷ ಸೂತ್ರವಾಗುವದು; ಆ ಮೂರು ಗುಣಗಳನ್ನೂ ಅವುಗಳಿಂದ ಬರುವ ಕರ್ಮಗಳನ್ನೂ ಮನಸ್ಸಾಕ್ಷಿಯೆಂಬ ಸೂಕ್ಷ್ಮ ತ್ರಾಸಿನಲ್ಲಿ ಹಾಕಿ ತೂಗಿ ನೋಡಿದರೆ ಅವುಗಳಲ್ಲಿ ಮ

ನುಷ್ಯರಿಗೆ ಷರ ತಕ್ಕಂಥವುಗಳಾಗಿ ಯಾವ ಯಾವವುಗಳು ಕಾಣಿಸುತ್ತವೆ, ರಂಗಾ? — ಷವನು ಅಂದನು — ಸತ್ಷದವುಗಳಷ್ಟೇ, ನಿಶ್ಚಯ; ರಜಸೆಂಬದು ಪ್ರಪಂಚಕ್ಕೆ ಹತ್ತಿ ಕಾಳ್ಕುವಂಥ ವ್ಯಸನವಲ್ಲವಾ? ಮತ್ತು ತಮಸು ಬರೇ ನರಕಾಂಥಕಾರವಲ್ಲವಾ? — ಸುಚಿತ್ತಿಯು ಅದಕ್ಕೆ ಸಮ್ಮತಿಪಟ್ಟು, ಮತ್ತು ಹೀಗೆ ಕೇಳಿದನು — ಹಾಗಾದ ಮೇಲೆ, ತಮ್ಮಾ, ರಜಸು ತಮಸುಗಳೆಂಬ, ಸಂಶಯವಿಲ್ಲದೆ ನಿಜ ಅಜ್ಞಾನವೂ ಅವಿದ್ಯೆಯೂ ಆಗಿರುವ ಈ ಎರಡು ಗುಣಗಳಿಗೂ ಷವುಗಳಿಂದ ಬರುವ ದುಷ್ಕರ್ಮಗಳಿಗೂ, ಮತ್ತು ದೇವರಿಗೂ ಕಿಂಚಿತ್ತೂ ಸಂಬಂಥವಿದ್ದೀತಾ? ಖಂಡಿತವಾಗಿ ಉತ್ತರ ಕಾಯಿರಿ! — ಅದಕ್ಕೆ ರಂಗನು — ಅವುಗಳಿಗೂ ದೇವರಿಗೂ ಏನೇನೂ ಸಂಬಂಥವಿಲ್ಲ,

ಪ್ರದೀಪ-ಪ್ರಕಾಶ-ಸಿದ್ಧಿ-ವತ್ ತತ್-ಸಿದ್ಧಿಃ।

ಟೀಕು॥ ತನ್ನ ಮುಂದಿನ ದೀಪದ ಪ್ರಕಾಶದ ನಿಶ್ಚಯತ್ವದಂತೆ ಅದರ ನಿಶ್ಚಯತ್ವವು!

ದೇವರು ಎಂದೆಂದಿಗೂ ನಿರ್ಮಲನೇ! ಎಂತ, ಆಗಿ ಷಡಲಾಗಿ ಅವನ ಅಣ್ಣನು ಹೇಳಿದ್ದೇನಂದರೆ — ಒಳ್ಳೇದು, ನನಗೆ ಬಹಳ ಸಂತಾಷವಾಯಿತು; ಹಿಂದು ಜನರಲ್ಲಿ ಜ್ಞಾನಿಗಳೆನ್ನಿಸಿಕಾಂಡವರು ಪಾಪಾತ್ಮಶ್ರಿಯನ್ನು ಕುರಿತು ಬಾಧಿಸುವಂಥಾದ್ದು ದೇವರ ಚಯವುಳ್ಳ ನಿಮ್ಮಂಥವರಿಗೆ ಸ್ಪಷ್ಟವಾಗಿ ಮೂಢತನವಾಗಿಯೂ ದೇವದೂಷಣೆಯಾಗಿಯೂ ಕಾಣಿಸುವದು; ಆದರೆ, ತಮ್ಮಾ, ಉಳಿನವರೆಲ್ಲರು ಈಗ ಮಲಗಿ ಕಾಂಡಿಡ್ಡಾರೆ, ನಾವು ಅವೇ ಪ್ರಕಾರ ಮಾಷ ತಕ್ಕಡ್ಡಾಯಿತಲ್ಲವೋ? — ಅವಕ್ಕೆ ರಂಗನು — ಆಗಲಿ, ಆದರೆ ನಾಳೆ ಅಗತ್ಯವಾಗಿ ತಿರಿಗಿ ಕೂಡಿ ಮಾತಾಡ ಬೇಕೆಂದು, ಒಡಂಬಟ್ಟ ಮೇಲೆ ಅವರಿಬ್ಬರು ಅಗಲಿ ಹಾದರು. —



ಏನೇ ಅಧ್ಯಾಯ

ದೇವರಿಗೂ ಆ ಪ್ರಕೃತಿಗೂ ಇರುವ ಸಂಬಂಧದ ವಿಷಯವಾದ ಹಿಂದು ಬೋಧನೆಯು

ಮರುದಿವಸದ ರಾತ್ರಿಯಲ್ಲಿ ಅವರಿಬ್ಬರು ತಿರಿಗಿ ಅದೇ ಅರ್ಥದ ಸಂಜಾಷಣೆ ಮಾಡಲಿಕ್ಕೆ ಹತ್ತಿದರು. ಸು ಚಿತ್ತಿಯು ಹೇಳಿದ್ದೇನಂದರೆ—ನಿನ್ನೆ, ತಮ್ಮಾ, ಮನುಷ್ಯರ ಮತ್ತು ದೇ ವರ ಎಲ್ಲಾ ಗುಣಗಳೂ ಎಲ್ಲಾ ಕರ್ಮಗಳೂ ಪ್ರಕೃತಿ ಇತ್ಯಾದಿ ಹೆಸ ರುಗಾಂಡದರಿಂದಲೇ ಹುಟ್ಟುತ್ತವೆಂಬದು ಹಿಂದು ಬಾಧನೆಯಾಗಿ ಗಾತ್ತಾಯಿತು; ಆದರೆ ಅದು ತಿಳಿ ನೀರೂ ಹಾಲೆ ನೀರೂ ಬಂದ ಒಂದು ವಿಪರೀತ ಕಲ್ಪನೇ ಜಾವಿಯನ್ನು ಹಾರ್ತಾಗಿ ಆ ಜಾವಿಯ ಅಡಿಜಲವನ್ನಾ ಗಲಿ ನೀರುಗಳು ಜಾವಿಯಾಳಗಿಂದ ಹಾರಗೆ ಬಿದ್ದು ಬಂದ ರೀತಿಯನ್ನಾ ಗಲಿ ತಾ೧ರಿಸಿದ ಹಾಗೆ ಆಗಲೇ ಇಲ್ಲ; ದೇವರು ಸತ್ವಕ್ಕೆ ಪಾತ್ರವಲ್ಲ, ರಜ ಸು ತಮಸು ಎಂಬ ದುರ್ಗುಣಗಳಿಗೂ ಇವುಗಳಿಂದ ಆಗುವ ದುಷ್ಕ ರ್ಮಗಳಿಗೂ ಸಹ ಅತಿಶೆಲೆಯಾಗಿದ್ದಾನೆ, ಅವನ ದೆಸೆಯಿಂದಲೂ ಅವ ನ ಮೂಲವಾಗಿಯೂ ಇವಿವುಗಳು ಮನುಷ್ಯರಲ್ಲಿ ಬಂದವೆ ಎಂಬ ಹಿಂ ದು ವೇದಶಾಸ್ತ್ರಬಾಧನೆಯನ್ನು ಆ ಮೇಲೆ ನಿಮಗೆ ವಿವರಿಸ್ಯೇನು; ಮುಂದಾಗಿ ನೀವು ತಿಳುಕಾಳ್ಳ ತಕ್ಕದ್ದೇನಂದರೆ—ಹಿಂದು ಶಾಸ್ತ್ರಗಳು ಅಂಥಾ ಅಪರಾಧವನ್ನು ಹೊರಿಸಿರುವ ದೇವರು ಶ್ರಿಮೂರ್ತಿಯವರಲ್ಲಿ ಒಬ್ಬನಲ್ಲ; ಆ ಶಾಸ್ತ್ರಗಳು, ಶ್ರಿಮೂರ್ತಿಯವರು ಬರೇ ಸುಳ್ಳೆಂತ, ಹೇ ಳುತ್ತವೆ; ಹ್ಯಾಗಂದರೆ ನಾರದ-ಪಂಚ-ರಾತ್ರದ ಒಂದು ಶ್ಲೋಕವೇನಂ ದರೆ—

ಬ್ರಹ್ಮಾzದಿ-ತೃಣ-ಪರ್ಯನ್ತಂ ಸರ್ವಂ ಮಿಥ್ಯೈವzವ ಸ್ವಪ್ನ-ವತ್।
ಅಬ್ರಹ್ಮ-ಸ್ತಮ್ಬ-ಪರ್ಯನ್ತಂ ಸರ್ವಂ ಕೃಷ್ಣಶ್ ಚರಾzಚರಂ॥

ಟೀಕು॥ ಬ್ರಹ್ಮನನ್ನು ಹಿಡಿದು ಹುಲ್ಲುಗಡ್ಡಿಯ ವರೆಗೆ ಎಲ್ಲವು ಕನಸಿನ ಹಾಗೆ ಮಿಥ್ಯೆಯೇ (ಅಂದರೆ ಮಾಯೆಯೇ) ಆಗಿದೆ; ಬ್ರಹ್ಮನನ್ನು ಹಿಡಿದು ಹುಲ್ಲುಗಡ್ಡಿಯ ವರೆಗೆ ಎಲ್ಲವು, ಚರವಾದದ್ದಾಗಲಿ ಅಚರವಾದದ್ದಾಗಲಿ, ಕೃಪ್ಣನಾಗಿದೆ.—

ಮತ್ತು ವಾಲ್ಮೀಕಿ-ಯಾಗ-ವಾಶಿಷ್ಟದ ಒಂದು ಶ್ಲೋಕವೇನಂದರೆ —

ಬ್ರಹ್ಮಾ ವಿಷ್ಣುಶ್ ಚ ರುದ್ರಶ್ ಚ ಸರ್ವಾ ಭೂತ-ಜಾತಯಃ।
ನಾಶಮ್ ಏವಾಽನುಧಾವನ್ತಿ ಸಲೀಲಾನೀಽವ ವಾಡವಂ॥

ಟೀಕು॥ ಬ್ರಹ್ಮನೂ ವಿಷ್ಣುವೂ ರುದ್ರನೂ ಎಲ್ಲಾ ಭೂತಗಳ (ಅಂದರೆ ಮನುಷ್ಯಾದಿಗಳ) ಜಾತಿಗಳೂ ನಾಶನಕ್ಕೆಯೇ ಹೋಗುತ್ತಾರೆ, ನೀರುಗಳು ಬಾಡಬಕ್ಕೆ (ಅಂದರೆ ಸಮುದ್ರದ ಕೆಳಗಿನ ಅಗ್ನಿಗೆ) ಹೋಗುವಂತೆ.—

ಹೀಗೆ, ತಮ್ಮಾ, ಶ್ರಿಮೂರ್ತಿಯವರು ಶಾಸ್ತ್ರಗಳ ಪ್ರಕಾರ ಮಾಯೆಯೇ*; ಬ್ರಹ್ಮವು ಅಥವಾ ಪರಮಾತ್ಮನು ತಾನೇ ಪಾಪಕ್ಕೆ ಮೂಲವೆಂಬದು ಹಿಂದು ಶಾಸ್ತ್ರಗಳ ದುರ್ಬಾಧನೆಯಾಗಿದೆ; ಆದ್ದರಿಂದ ನಾನು ಹೇಳಲಿಕ್ಕಿರುವ ಪ್ರಮಾಣಗ್ರಂಥಗಳಲ್ಲಿ ಕಾಣುವ ದೇವರು ಆಯಾ ಶಾಸ್ತ್ರಾಧಿಗಳು ಪರಮಾತ್ಮನೆಂತ ಹೇಳುವಂಥವನೇ; ಆಯಾ ಗ್ರಂಥಗಳಲ್ಲಿ ಒಬ್ಬನೇ ಪರಮಾತ್ಮನ ಮಾತದೆಂತ ನೆನಸ ಬೇಡಿರಿ, ತಮ್ಮಾ; ದೇಶಪ್ರಸಿದ್ಧಿಯಾಗಿರುವಂತೆ ಒಂದು ಪುರಾಣವು ಪರಮಾತ್ಮನೆಂತ ಪ್ರಸಂಗಿಸಿದವನಿಗೆ ಮತ್ತೊಂದು ಪುರಾಣವು ಶಾಪವಿಕ್ಕುತ್ತದೆ; ಇಂಥಾ ವಿಪರೀತಾಜ್ಞಾನದ ತರ್ಕವು ವೇದಗಳಲ್ಲಿ ಇಲ್ಲದೆ ಹಾಗಲಿಲ್ಲ, ಹ್ಯಾಗಂದರೆ ಋಗ್-ವೇದದ ೧೦ನೇ ಮಂಡಲದ ೮೬ನೇ ಸೂಕ್ತದ ೬ನೇ ಶ್ಲೋಕದಲ್ಲಿ ಇರುವದೇನಂದರೆ —

ವಿಶ್ವಸ್ಮಾದ್ ಇನ್ದ್ರ ಉತ್ತರಃ। ೬।

ಟೀಕು॥ ಇಂದ್ರನು† ಎಲ್ಲಕ್ಕಿಂತಲೂ ದೊಡ್ಡವನಾಗಿದ್ದಾನೆ.—

---

* ಉಪಸ್ಯಂಥದ ೫ನೇ ಅಂಕೆಯದನ್ನು ನೋಡಿರಿ.
† ಉಪಸ್ಯಂಥದ ೪ನೇ ಅಂಕೆಯದನ್ನು ನೋಡಿರಿ.

ಇಂದ್ರನನ್ನು ಲಕ್ಷಿಸದೆ, ಶುಕ್ಲ-ಯಜುರ್-ವೇದದ ಶತಪಥ-ಬ್ರಾಹ್ಮಣದ ೨ನೇ ಕಾಂಡದ ೨ನೇ ಅಧ್ಯಾಯದ ೪ನೇ ಬ್ರಾಹ್ಮಣದಲ್ಲಿ (ಅಂದರೆ ಪ್ರಸಂಗದಲ್ಲಿ) ಇರುವದೇನಂದರೆ —

ಪ್ರಜಾಪತಿರ್ ಹ ವಾ ಇದಮ್ ಅಗ್ರೇ ಏಕ ಏವಾಸ ।೧।

ಟೀಕು॥ ಪ್ರಜಾಪತಿಯು* (ಅಂದರೆ ಬೇರೆ ಶಾಸ್ತ್ರಗಳ ಬರೇ ಮಾಯೆಯೆಂತ ಹೇಳುವ ಹಿರಣ್ಯಗರ್ಭನು ಅಂದರೆ ಬ್ರಹ್ಮನು) ಒಬ್ಬನೇ ಆರಂಭದಲ್ಲಿ ಇದು (ಅಂದರೆ ಈ ವಿಶ್ವವೆಲ್ಲವು) ಆಗಿದ್ದನು. —

ಈ ಅರ್ಥ ಬಿಟ್ಟು, ಶತಪಥ-ಬ್ರಾಹ್ಮಣದ ೧೧ನೇ ಕಾಂಡದ ೨ನೇ ಅಧ್ಯಾಯದ ೩ನೇ ಬ್ರಾಹ್ಮಣದಲ್ಲಿರುವದೇನಂದರೆ —

ಬ್ರಹ್ಮ ವಾ ಇದಮ್ ಅಗ್ರೇ ಆಸೀತ್ ।೧।

ಟೀಕು॥ ಬ್ರಹ್ಮವು† ಆರಂಭದಲ್ಲಿ ಇದು (ಅಂದರೆ ಈ ವಿಶ್ವವು) ಆಗಿತ್ತು (ಬ್ರಹ್ಮನೂ ಬ್ರಹ್ಮವೂ ಒಂದೇ ಎಂಬಂತೆ). —

ಆದರೆ ಅಥರ್ವ-ವೇದದ ಅಥರ್ವ-ಶಿಖಾ-ಉಪನಿಷತ್ತಿನಲ್ಲಿ (ಇದು ಒಂದೇ ಅಧ್ಯಾಯದ್ದಾಗಿದೆ) ಹೇಳಿರುವದೇನಂದರೆ —

ಈಶಾನೋ ವಾ ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮ್ ಅನ್ಯತ್ ಪರಿತ್ಯಜ್ಯಂ।

ಟೀಕು॥ (ಬೇರೆ ಶಾಸ್ತ್ರಗಳ ಪ್ರಕಾರ ಮಾಯೆಯಾದ) ಈಶನು ಅಥವಾ ಶಿವನು‡ ಒಬ್ಬನೇ ಧ್ಯಾನಿಸಲ್ಪಡ ತಕ್ಕವನೂ ಸುಖ ಕೊಡುವವನೂ ಆಗಿದ್ದಾನೆ; ಬೇಕೆ ಆದದ್ದೆಲ್ಲಾ ತ್ಯಜಿಸಿ ಬಿಡ ಬೇಕು. —

ಅದೇ ಪ್ರಕಾರ ಕೃಷ್ಣ-ಯಜುರ್-ವೇದದ ಶ್ವೇತಾಶ್ವತರ-ಉಪನಿಷತ್ತಿನ ೩ನೇ ಅಧ್ಯಾಯದ ೨ನೇ ಶ್ಲೋಕದ ಆರಂಭವೇನಂದರೆ —

ಏಕೋ ಹಿ ರುದ್ರೋ ನ ದ್ವಿತೀಯಃ। ೨।

ಟೀಕು॥ ರುದ್ರನೊಬ್ಬನೇ ಇದ್ದಾನೆ, ಮತ್ತೊಬ್ಬನು ಇಲ್ಲ. —

ಇದಕ್ಕೆ ವಿರೋಧವಾಗಿ ಅಥರ್ವ-ವೇದದ ಮಹಾ-ಉಪನಿಷತ್ತಿನ ಆರಂಭದಲ್ಲಿ ಕೇಳಿರುವದೇನಂದರೆ —

---

*ಉಪಸ್ಕಂಥದ ೪ನೇ ಅಂಕೆಯದನ್ನು ನೋಡಿರಿ. †ಉಪಸ್ಕಂಥದ ೫ನೇ ಅಂಕೆಯದನ್ನು ನೋಡಿರಿ. ‡ಉಪಸ್ಕಂಥದ ೬ನೇ ಅಂಕೆಯದನ್ನು ನೋಡಿರಿ.

ನಾರಾಯಣ ಏಕಾ ಆಸೀನ್ ನ ಬ್ರಹ್ಮಾ ನ ಈಶಾನಾ ನ ಆಪಃ***ಸ ಏಕಾಕೀ ನರ ಏವ।

ಟೀಕು॥(ಬೇರೆ ಕಡೆಯಲ್ಲಿ ಮಾಯೆಯಾದ ವಿಷ್ಣುವು ಅಥವಾ) ನಾರಾಯಣನು* ಒಬ್ಬನೇ (ಆರಂಭದಲ್ಲಿ) ಇದ್ದನು, ಬ್ರಹ್ಮನೂ ಶಿವನೂ ನೀರುಗಳೂ ಇರಲಿಲ್ಲ; ಅವನು ಒಬ್ಬನೇ ಆದ ನರನು (ಅಂದರೆ ಆದಿಪುರುಷನು ಆಗಿದ್ದನು).—

ಅದೇ ಪ್ರಕಾರ ಕೃಷ್ಣ-ಯಜುರ್-ವೇದದ ನಾರಾಯಣ-ಉಪನಿಷತ್ತಿನ ೧೩ನೇ ಅನುವಾಕದ ೪ನೇ ಶ್ಲೋಕದ ಆರಂಭವಿರುವದೇನಂದರೆ—

ನಾರಾಯಣಃ ಪರಾ ಜ್ಯೋತಿರ್ ನಾರಾಯಣಃ ಪರ ಆತ್ಮಾ ನಾರಾಯಣಃ ಪರಂ ಬ್ರಹ್ಮ। ಇತ್ಯಾದಿ।

ಟೀಕು॥ನಾರಾಯಣನು ಪರವಾದ ಜ್ಯೋತಿಯೂ ನಾರಾಯಣನು ಪರವಾದ ಆತ್ಮನೂ ನಾರಾಯಣನು ಪರವಾದ ಬ್ರಹ್ಮವೂ (ಆಗಿದ್ದಾನೆ).—

ಇಷ್ಟರ ಮೇಲೆ, ತಮ್ಮಾ, ವೇದಗಳನ್ನು ರಚಿಸಿದ ಪಂಡಿತರ ಹಾಟ್ಟೇ ಕೆಚ್ಚು ಸಿದ್ಧಾಂತವಾಯಿತು; ಆದರೆ ಈಗ ಮೊದಲಾಗಿ, ಪ್ರಕೃತಿ ಇತ್ಯಾದಿ ಹೆಸರುಗಾಂಡದ್ದು ಹಿಂದು ಜ್ಞಾನಿಗಳ ಮಾತುಗಳ ಪ್ರಕಾರ ದೇವರದ್ದೂ ದೇವರೂ ಆಗಿದೆಂದು, ಗಾತ್ತು ಮಾಡುತ್ತೇನೆ; ಹ್ಯಾಗಂದರೆ ಮಹಾಭಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವದೇನಂದರೆ—

ರಜಸ್ ತಮಶ್ ಚ ಸತ್ವಂ ಚ ವಿದ್ಧಿ ನಾರಾಯಣಾತ್ಮಕಂ। ೧೦೦೪೬।

ಟೀಕು॥ರಜಸೂ ತಮಸೂ ಸತ್ವವೂ ನಾರಾಯಣನ ಆತ್ಮದ್ದಾಗಿದೆಂತ ತಿಳ್ಕುಕೋ!—

ಮತ್ತು ಕಲ್ಕತ್ತ ಪಟ್ಟಣದಲ್ಲಿ ಛಾಪೆಯಾದ ವೇದಾಂತ-ಪರಿಭಾಷೆಯ ೧ನೇ ಪಾನಿನಲ್ಲಿ ಹೇಳಿರುವದೇನಂದರೆ—

ಮಾಯಾವಚ್ಛಿನ್ನಂ ಚೈತನ್ಯಂ ಚ ಪರಮೇಶ್ವರಃ।

---

* ಉಪಗ್ರಂಥದ ೩ನೇ ಅಂಕೆಯದನ್ನು ನೋಡಿರಿ.

ಟೀಕು॥ ಮಾಯೆಗೆ ಕೂಡಿದಂಥ ಚೈತನ್ಯವು (ಅಂದರೆ ಬ್ರಹ್ಮವು) ಪರಮೇಶ್ವರನಾಗಿದೆ.—

ಮತ್ತು ಶ್ರೀಮದ್ಭಾಗವತ-ಪುರಾಣದ ೧೦ನೇ ಸ್ಕಂಧದ ೧೪ನೇ ಅಧ್ಯಾಯದಲ್ಲಿರುವದೇನಂದರೆ —

ವಿಷ್ಣೋರ್ ಮಾಯಾ ಭಗವತೀ ಯಯಾ ಸಮ್ಮೋಹಿತಂ ಜಗತ್ ।೨೫।

ಟೀಕು॥ ವಿಷ್ಣುವಿನ ಮಾಯೆಯು ಭಗವನ್ನಾಮ ಸಂಬಂಧದ್ದಾಗಿದೆ; ಅದರಿಂದ ಜಗತ್ತು ಮೋಹ ಪಡುವಂಥಾದ್ದಾಗಿದೆ (ದೇವರು ತಾನು, ತನ್ನ ಮಾಯೆಯಿಂದ ಜನರ ಮೋಹಕ್ಕೆ ಕಾರಣವಾಗಿ, ಅವರು ಮೋಕ್ಷ ಹೊಂದದ ಹಾಗೆ ಅಡ್ಡಿ ಮಾಡುತ್ತಾನೆಂಬಂತೆ).—

ಅದಲ್ಲದೆ ಮಹಾಭಾರತದ ಆಶ್ವ-ಮೇಧಿಕ-ಪರ್ವದಲ್ಲಿ ಇರುವದೇನಂದರೆ —

ವಾಸುದೇವ ಉವಾಚ॥

ತಮೋ ರಜಶ್ ಚ ಸತ್ವಂ ಚ ವಿದ್ಧಿ ಭಾವಾನ್ ಮದ್-ಆಶ್ರಯಾನ್
।೧೫೬।

ಟೀಕು॥ ತಮಸು ರಜಸು ಸತ್ತ್ವ ಎಂಬವುಗಳ ಭಾವಗಳು ನನ್ನಲ್ಲಿ ವಾಸ ಮಾಡುತ್ತವೆಂತ ತಿಳುಕೋ, (ಉತ್ತಂಗ ಮುನಿಯೇ!) ಎಂದು ಕೃಷ್ಣನು ಹೇಳಿದನು.—

ಮತ್ತು ಕೃಷ್ಣ-ಯಜುರ್-ವೇದದ ಶ್ವೇತಾಶ್ವತರ-ಉಪನಿಷತ್ತಿನ ೫ನೇ ಅಧ್ಯಾಯದ ಆರಂಭದ ಶ್ಲೋಕವೇನಂದರೆ —

ದ್ವೇ ಅಕ್ಷರೇ ಬ್ರಹ್ಮ-ಪರೇ ತ್ವ ಅನನ್ತೇ ವಿದ್ಯಾವಿದ್ಯೇ ನಿಹಿತೇ ಗೂಢೇ।
ಕ್ಷರನ್ ತ್ವ ಅವಿದ್ಯಾ ಹ್ಯ್ ಅಮೃತಂ ತು ವಿದ್ಯಾ ವಿದ್ಯಾವಿದ್ಯೇ
ಈಶತೇ ಯಸ್ ತು ಸೋಽನ್ಯಃ॥೯॥

ಟೀಕು॥ ಕ್ಷಯವಾಗದಂಥ, ವಿದ್ಯೆಯು ಮತ್ತು ಅವಿದ್ಯೆಯು (ಅಂದರೆ ಮಾಯೆಯು ಅಂದರೆ ಸುಳ್ಳು) ಇವೆರಡು ಸುಪ್ತವಾಗಿ ವಾಸಿಸುವಂಥ, ಬ್ರಹ್ಮನಿಗಿಂತ (ಅಥವಾ ಹಿರಣ್ಯಗರ್ಭನಿಗಿಂತ) ಪರನಾದಂಥ, ವಿದ್ಯೆಯ ಮತ್ತು ಅವಿದ್ಯೆಯ ಈಶನಾದಂಥ ಅವನು (ಅಂದರೆ ಪರಮಾತ್ಮನು)

ಬೇರೆಯಾಗಿದ್ದಾನೆ (ಅಂದರೆ ಮಾಯೆಯು ಅವನಲ್ಲಿ ವಾಸಿಸಿದರೂ ಅವನು ತಾನು ಬರೇ ಮಾಯೆಯಲ್ಲ); ಆದರೆ ಅವಿದ್ಯೆಯು (ಎಲ್ಲಾ ಸುಕ್ರಿಯೆಗಳ ಸಂಗಡಲೂ ದುಷ್ಕ್ರಿಯೆಗಳ ಸಂಗಡಲೂ) ಕ್ಷಯವಾಗುವಂಥಾದ್ದು, ವಿದ್ಯೆಯು ಅಮೃತವಾಗಿರುವಂಥಾದ್ದು ಆಗಿದೆ.—

ಮತ್ತು ಅದೇ ಉಪನಿಷತ್ತಿನ ೩ನೇ ಅಧ್ಯಾಯದ ೧ನೇ ಶ್ಲೋಕದ ಆರಂಭವೇನಂದರೆ —

ಯ ಏಕೋ ಜಾಲವಾನ್ ಈಶತ ಈಶನೀಭಿಃ ಸರ್ವಾಲ್ ಲೋಕಾನ್ ಈಶತ ಈಶನೀಭಿಃ॥ ೧॥

ಟೀಕು॥ ಏಕನಾದಂಥ, ಜಾಲವುಳ್ಳವನಾದಂಥ ಅವನು (ಅಂದರೆ ಪರಮಾತ್ಮನು) ಶಕ್ತಿಗಳಿಂದ (ಅಂದರೆ ಮಾಯೆಯ ಶಕ್ತಿಗಳಿಂದ) ಆಳುತ್ತಾನೆ; ಎಲ್ಲಾ ಲೋಕಗಳನ್ನು ಶಕ್ತಿಗಳಿಂದ ಆಳುತ್ತಾನೆ.—

ಈ ಶ್ಲೋಕಕ್ಕೆ ಶೇರಿದ ಶಂಕರಾಚಾರ್ಯನ ಭಾಷ್ಯದ ಒಂದು ಮಾತೇನಂದರೆ —

ಜಾಲಂ ಮಾಯಾ ದುರ್-ಅತ್ಯೈ-ಅಯತ್ವಾತ್।

ಟೀಕು॥ (ದೇವರ) ಜಾಲವು ಮಾಯೆಯಾಗಿದೆ, ಹ್ಯಾಗಂದರೆ ಅದನ್ನು ದಾಟುವದು ಬಹಳ ಕಷ್ಟವಾಗುತ್ತದೆ (ದೇವರು ತಾನೇ ಜನಕ ಮೋಕ್ಷಕ್ಕೆ ಅಡ್ಡಿ ಮಾಡುತ್ತಾನೆಂಬಂತೆ; ೨೨ನೇ ಪಾನಿನಲ್ಲಿಯ ಭಗವದ್-ಗೀತೆಯ ಮಾತು ನೋಡಿರಿ).—

ಮತ್ತು, ತಮ್ಮಾ, ಅದೇ ಶ್ವೇತಾಶ್ವತರ-ಉಪನಿಷತ್ತಿನ ೧ನೇ ಅಧ್ಯಾಯದ ೪ನೇ ಶ್ಲೋಕದ ಆರಂಭದಲ್ಲಿ ಪರಮಾತ್ಮನ ವಿಷಯವಾಗಿ ಹೇಳಿರುವದೇನಂದರೆ —

ತಮ್ ಏಕ-ನೇಮಿಂ ತ್ರಿ-ವೃತಂ ಮತ್ವಾ।೪।

ಟೀಕು॥ ಅವನನ್ನು (ವಿಶ್ವವೆಂಬ ಚಕ್ರದ) ಒಂದೇ ಪರಿಧಿಯು ಎಂತಲೂ ಮೂರರಿಂದ (ಅಂದರೆ ಮಾಯೆಯ ಮೂರು ಗುಣಗಳಿಂದ) ಮುಚ್ಚಲ್ಪಟ್ಟವನು ಎಂತಲೂ ತಿಳುಕೊಂಡಿದ್ದೇವೆ.—

ಶಂಕರಾಚಾರ್ಯನು ತನ್ನ ಭಾಷ್ಯದಲ್ಲಿ ಈ ಮಾತುಗಳನ್ನು ಕುರಿತು ಹೇಳುವದೇನಂದರೆ —

ಯೋನಿರ್ ಅವ್ಯಾಕೃತಮ್ ಆಕಾಶಂ ಪರಮ-ವ್ಯೋಮ ಮಾಯಾ ಪ್ರಕೃತಿಃ ತಮೋऽವಿದ್ಯಾ ಛಾಯಾ ಅಜ್ಞಾನಮ್ ಅನೃತಮ್ ಅವ್ಯಕ್ತಮ್ ಇತ್ಯೆ ವಿವಮ್ ಆದಿ-ಶಬ್ದೈರ್ ಅಖಿಲಪ್ರಮಾಣಾ ವಿಕಾ ಕಾರಣಾऽವ ಸ್ಥಾ ನೇಮಿರ್ ಇವ ನೇಮಿಃ ಸರ್ವಾऽಧಾರಃ। ತ್ರಿ-ವೃತಂ ತ್ರಿಭಿಃ ಸತ್ವ-ರಜಸ್-ತಮೋಭಿಃ ಪ್ರಕೃತಿ-ಗುಣೈರ್ ವೃತಂ।

ಟೀಕು॥ ಯೋನಿ, ಗುಪ್ತವಾದ ಆಕಾಶ, ಪರಮವಾದ ಆಕಾಶ, ಮಾಯೆ, ಪ್ರಕೃತಿ, ತಮಸ್ಸು, ಅವಿದ್ಯೆ, ಛಾಯೆ, ಅಜ್ಞಾನ, ಅನೃತ (ಅಂದರೆ ಸುಳ್ಳು), ಅವ್ಯಕ್ತ ಇತ್ಯಾದಿ ಹೆಸರುಗಳಿಂದ ಹೇಳಲ್ಪಡುವ (ಜಗತ್ತಿನ) ಮೂಲವು ಪರಿಧಿಯಾಗಿದೆ ಎಂಬಂತೆ ಪರಿಧಿಯು ಸರ್ವಕ್ಕೆ (ಅಂದರೆ ಎಲ್ಲಾ ವಿಶ್ವಕ್ಕೆ) ಆಧಾರವು (ವಿಶ್ವವು ಬರೇ ದೇವಮಾಯೆಯಾಗಿದೆಂಬಂತೆ); ಅವನು (ಅಂದರೆ ಪರಮಾತ್ಮನು) ಮೂರರಿಂದ ಮುಚ್ಚಲ್ಪಟ್ಟವನು ಅಂದರೆ, ಅವನು ಪ್ರಕೃತಿಯ ಮೂರು ಗುಣಗಳಾದ ಸತ್ತ್ವದಿಂದಲೂ ರಜಸಿನಿಂದಲೂ ತಮಸಿನಿಂದಲೂ ಮುಚ್ಚಲ್ಪಟ್ಟವನಾಗಿದ್ದಾನೆ.—

ಮತ್ತು ವೇದಾಂತ-ಸಾರದ ಮುನೇ ಸಂಧಾನದಲ್ಲಿ ಬರೆದಿರುವದೇನಂದರೆ —

ಅಜ್ಞಾನಂ ತು ***ತ್ರಿ-ಗುಣಾऽತ್ಮಕಂ। ದೇವಾऽತ್ಮ-ಶಕ್ತಿಂ ಸ್ವ-ಗುಣೈರ್
ನಿಗೂಢಾಮ್ ಇತ್ಯೆ ಆದಿ-ಶ್ರುತೇಃ॥

ಟೀಕು॥ ಅಜ್ಞಾನವು ಮೂರು ಗುಣಗಳಿಂದಾಗಿದೆ; ಹ್ಯಾಗಂದರೆ ತನ್ನ ಗುಣಗಳಿಂದ (ಅಂದರೆ ದೇವರ ಆತ್ಮದ ಶಕ್ತಿಯೆನ್ನಿಸುವ ಪ್ರಕೃತಿಯ ಅಥವಾ ಅಜ್ಞಾನದ ಮೂರು ಗುಣಗಳಿಂದ) ಮುಚ್ಚಲ್ಪಟ್ಟ ದೇವಾತ್ಮಶಕ್ತಿಯನ್ನು (ಯೋಗಿಗಳು ನೋಡುತ್ತಾರೆ) ಇತ್ಯಾದಿ ವೇದವಾಕ್ಯಗಳುಂಟು.—

ವೇದಾಂತ-ಸಾರದಲ್ಲಿ ಸೂಚಿಸಿರುವ ಈ ಶ್ರುತಿಯು, ತಮ್ಮಾ,

ಶ್ವೇತಾಶ್ವತರ-ಉಪನಿಷತ್ತಿನ ೧ನೇ ಅಧ್ಯಾಯದ ೩ನೇ ಶ್ಲೋಕದಲ್ಲಿ ಅದೆ, ಏನಂದರೆ —

ತೇ ಧ್ಯಾನ-ಯೋಗಾಽನುಗತಾ ಅಪಶ್ಯನ್ ದೇವಾತ್ಮ-ಶಕ್ತಿಂ ಸ್ವ-ಗುಣೈರ್ ನಿಗೂಢಾಂ।೩।

ಟೀಕು॥ ಅವರು ಧ್ಯಾನವನ್ನೂ ಯೋಗವನ್ನೂ ಮಾಡಿ ಕೊಂಡು, ತನ್ನ (ಮೂರು) ಗುಣಗಳಿಂದ ಮುಚ್ಚಲ್ಪಟ್ಟ ದೇವಾತ್ಮಶಕ್ತಿಯನ್ನು ನೋಡಿದರು.—

ಮತ್ತು ಅದೇ ಶ್ವೇತಾಶ್ವತರ-ಉಪನಿಷತ್ತಿನ ೪ನೇ ಅಧ್ಯಾಯದಲ್ಲಿ ಹೇಳಿರುವದೇನಂದರೆ —

ಮಾಯಾನ್ ತು ಪ್ರಕೃತಿಂ ವಿದ್ಯಾನ್ ಮಾಯಿನನ್ ತು ಮಹೇಶ್ವರಂ।
ತಸ್ಯಾಽವಯವ-ಭೂತೈಸ್ ತು ವ್ಯಾಪ್ತಂ ಸರ್ವಮ್ ಇದಂ ಜಗತ್॥೧೦॥

ಟೀಕು॥ ಮಾಯೆಯು ಪ್ರಕೃತಿಯೆಂತಲೂ ಮಾಯೆಯುಳ್ಳವನು ಮಹೇಶ್ವರನೆಂತಲೂ ತಿಳುಕೊಳ್ಳ ಬೇಕು; ಮತ್ತು ಅವನ ಅವಯವಗಳಾದ (ಪಂಚ) ಭೂತಗಳಿಂದ (ಅಂದರೆ ಅಣುವುಗಳೆಂಬ ಮಾಯೆಯಿಂದ) ಈ ಜಗತ್ತೆಲ್ಲವು ವ್ಯಾಪಿಸಲ್ಪಟ್ಟಿದ್ದಾಗಿದೆ.—

ದೇವರು ನಾನಾ ಮಾಯೆಯುಳ್ಳವನೆಂದು ಪ್ರಮಾಣ ಮಾಡುವದಕ್ಕೋಸ್ಕರವಾಗಿ ಹಿಂದು ಶಾಸ್ತ್ರಕರ್ತರು ಮುಖ್ಯವಾಗಿ ಪ್ರಯೋಗಿಸುವ ವೇದವಾಕ್ಯವೇನಂದರೆ —

ಇನ್ದ್ರೋ ಮಾಯಾಭಿಃ ಪುರು-ರೂಪ ಈಯತೇ।

ಟೀಕು॥ ಇಂದ್ರನು (ಅಂದರೆ ಪುರಾಣಗಳವನಲ್ಲ ವೇದದಲ್ಲಿ ಬ್ರಹ್ಮವೆನ್ನಿಸುವವನು) ಮಾಯೆಗಳಿಂದ ಬಹಳ ರೂಪವುಳ್ಳವನೆಂದು ತಿಳಿಯಲ್ಪಟ್ಟವನಾಗಿದ್ದಾನೆ.—

ಈ ಶ್ರುತಿಯು, ತಮ್ಮಾ, ಋಗ್-ವೇದದ ೬ನೇ ಮಂಡಲದ ೪೭ನೇ ಸೂಕ್ತದ ೧೮ನೇ ಶ್ಲೋಕದ ೨ನೇ ಚರಣದ ಆರಂಭವಾಗಿದೆ; ಆ

ದು ವೇದಾಂತ-ಸಾರದ ಳನೇ ಸಂಧಾನದಲ್ಲಿಯೂ ಶಂಕರಾಚಾರ್ಯ ನು ಶ್ವೇತಾಶ್ವತರ-ಉಪನಿಷತ್ತಿಗಾಗಿ ರಚಿಸಿ ಕಲ್ಕತ್ತದಲ್ಲಿ ಛಾಪೆಯಾ ದ ಚಾಷ್ಯದ ೨೬ನೇ, ೨೭ನೇ, ೨೯ನೇ ಪಾನಿನಲ್ಲಿಯೂ ಅಲ್ಲಿಯೇ ಛಾಪೆಯಾದ, ಅಥರ್ವ-ವೇದದ ಮಾಂಡೂಕ್ಯ-ಉಪನಿಷತ್ತಿಗಾಗಿ ಅವ ನು ರಚಿಸಿದ ಚಾಷ್ಯದ ಳಲ್ಲಿನೇ, ೪೩ನೇ, ೪೭ನೇ ಪಾನಿನಲ್ಲಿಯೂ ಅಲ್ಲಿಯೇ ಛಾಪೆಯಾದ, ಈ ಉಪನಿಷತ್ತಿಗಾಗಿ ಆನಂದಗಿರಿಯು ರಚಿಸಿದ ಟೀಕೆಯ ಳಲ್ಲಿನೇ ಪಾನಿನಲ್ಲಿಯೂ ಇತ್ಯಾದಿ ಸ್ಥಳಗಳಲ್ಲಿ ಸಹ ನನಗೆ ಶಿ ಕ್ಷಿತ. ಒಂದು ದೃಷ್ಟಾಂತವಾಗಿ ಅದೇ ಮಾತು ಶುಕ್ಲ-ಯಜುರ್-ವೇದದ ಬೃಹದ್-ಆರಣ್ಯಕ-ಉಪನಿಷತ್ತಿನ ೨ನೇ ಅಧ್ಯಾಯದ ೫ನೇ ಬ್ರಾಹ್ಮಣದ ೧೪ನೇ ಕಂಡಿಕೆಯಲ್ಲಿ ಅದೆ; ಅಲ್ಲಿ ಶಂಕರಾಚಾರ್ಯನು ತನ್ನ ಚಾಷ್ಯದಲ್ಲಿ ಅದಕ್ಕೆ ಹೇಳುವದೇನಂದರೆ — ಇನ್ದ್ರಃ ಪರಮೇಶ್ವರಃ। ಅಂದರೆ ಇಂದ್ರ ನು ಪರಮೇಶ್ವರನಾಗಿದ್ದಾನೆ; — ಮತ್ತು ಆನಂದಗಿರಿಯೆಂಬವನು ಅದಕ್ಕೆ ಯೇ ಹೇಳುವದೇನಂದರೆ —

ಮಿಥ್ಯಾ-ಧೀ-ಹೇತು-ಋತಾಽನಾದ್ಯೈ-ಅನಿರ್ವಾಚ್ಯಾಽದಣ್ಡ್ಯಾಽಯಮಾ ನಾಽಜ್ಞಾನ-ವಶಾದ್ ಖಿಷ ಬಹು-ರೂಪೋ ಚಾಶಿ।

ಟೀಕು॥ ಇವನು (ಅಂದರೆ ಪರಮೇಶ್ವರನು) ಸುಳ್ಳು ಬುದ್ಧಿಯಿಂದ ಹುಟ್ಟಿ ದ, ಅನಾದಿಯೂ ಅನಿರ್ವಾಚ್ಯವೂ ಆಗಿರುವ, (ಮದದಾನೆಯಂತೆ) ಶಿಕ್ಷೆ ತಾಳದ ಅಜ್ಞಾನದ ವಶದಲ್ಲಿರುವದರಿಂದ ಬಹಳ (ಒಳ್ಳೇ ಮತ್ತು ಕೆಟ್ಟ ಕ್ರಿಯೆ ಇತ್ಯಾದಿ) ರೂಪವುಳ್ಳವನಾಗಿ ತೋರುತ್ತಾನೆ. —

ಮತ್ತು ಕೃಷ್ಣನೆಂಬವನು ಮಹಾಭಾರತದ ಭೀಷ್ಮ-ಪರ್ವದ ಚಗ ವದ್-ಗೀತೆಯಲ್ಲಿ ಹೇಳಿರುವದೇನಂದರೆ —

ದೈವೀ ಹ್ಯೆ ಖಿಷಾ ಗುಣ-ಮಯಿ ಮಮ ಮಾಯಾ ದುರ್-ಅತ್ಯೈ-ಅಯಾ। ೧೪।೫೫।

ಟೀಕು॥ ದೇವರ ಸಂಬಂಧವಾದಂಥ, (ಮೂರು) ಗುಣಗಳುಳ್ಳಂಥ ಈ ನನ್ನ ಮಾಯೆಯನ್ನು ದಾಟುವದು ಬಹಳ ಕಷ್ಟವೇ (ಅಂದರೆ ಕೃ ಷ್ಣನ ಮಾಯೆಯ ದೆಸೆಯಿಂದ ಜನರು ಮೋಕ್ಷವನ್ನು ಹೊಂದುವದು ಬಹಳ ದುರ್ಲಭವಾಗಿದೆ)! —

ಷ್ಟೆಲ್ಲಾ, ತಮ್ಮಾ, ದೇವರು ಮಾಯೆಯುಳ್ಳವನೂ ಮಾಯೆಯು ದೇವರದ್ದೂ ಎಂಬ ಹಿಂದು ವೇದಶಾಸ್ತ್ರದುರ್ಬೋಧನೆಯನ್ನು ಸ್ಪಷ್ಟವಾಗಿ ತಾರಿಸಿದ ಹಾಗಾಯಿತಲ್ಲವೊ? — ಅದಕ್ಕೆ ರಂಗನು — ಹೌದಣ್ಣಾ, ನನಗೆ ಅದರಿಂದ ಮನಸ್ತಾಪವು ಬಹಳವಾಯಿತೆನ್ನಲಾಗಿ ಸುಚಿತ್ತಿಯು ಮತ್ತಿಂತೆಂದನು — ಮಾಯೆಯು ಅಥವಾ ಮೂರು ಗುಣವುಳ್ಳ ಪ್ರಕೃತಿಯು ಇತ್ಯಾದಿ ಹೆಸರುಗಳನ್ನು ಪಡಕೊಂಡದ್ದು ಬ್ರಹ್ಮವೇ ಎಂತ, ಹಿಂದು ಜನರಲ್ಲಿ ಅತಿ ಕೀರ್ತಿ ಪಟ್ಟ ವ್ಯಾಸ ಮುನಿಯು ಬಾಧಿಸಿದನೆಂದು ಈಗ ಪ್ರಮಾಣ ಮಾಡುತ್ತೇನೆ; ಹ್ಯಾಗಂದರೆ ಅವನು ತನ್ನ ಶಾರೀರಕ-ಸೂತ್ರಗಳ ೧ನೇ ಅಧ್ಯಾಯದ ೪ನೇ ಪಾದದಲ್ಲಿ ಬರೆದ ಎರಡು ಸೂತ್ರಗಳು ಯಾವವಂದರೆ —

ಬ್ರಹ್ಮ ಪ್ರಕೃತಿಶ್ ಚ ॥೨೫॥ ಯೋನಿಶ್ ಚ ಹಿ ಗೀಯತೇ॥೨೭॥

ಟೀಕು॥ ಬ್ರಹ್ಮವು (ಮೂರು ಗುಣಗಳುಳ್ಳ) ಪ್ರಕೃತಿಯೂ ಆಗಿದೆ;— ಅದು (ಅಂದರೆ ಆ ಬ್ರಹ್ಮವು) ಯೋನಿಯೂ ಆಗಿದೆಂತ (ವೇದದಲ್ಲಿ) ಹಾಡುತ್ತಾರೆ, ನಿಶ್ಚಯ!—

ಆ ೨೭ನೇ ಸೂತ್ರಕ್ಕೆ ಶಂಕರಾಚಾರ್ಯನು ತನ್ನ ಭಾಷ್ಯದಲ್ಲಿ ಬರೆದಿರುವ ಟೀಕೆಯೇನಂದರೆ —

ಯಾನಿ-ಶಬ್ದಶ್ ಚ ಪ್ರಕೃತಿ-ವಚನಃ ಸಮಧಿಗತಾ ಲೋಕೇ ಪೃಥಿವೀ ಯಾನಿರ್ ಓಷಧಿ-ವನಸ್ಪತೀನಾಮ್ ಇತಿ॥

ಟೀಕು॥ ಯೋನಿಯೆಂಬದನ್ನು ಪ್ರಕೃತಿಯೆಂತ ಲೋಕದಲ್ಲಿ ತಿಳುಕೊಳ್ಳುವದುಂಟು, ಪೃಥ್ವಿಯು ಪಲ್ಯಗಳ ಮತ್ತು ಮರಗಳ ಯೋನಿಯೆಂಬಂತೆ.—

ವ್ಯಾಸ ಮುನಿಯು ಆ ಸ್ಥಳದಲ್ಲಿಯೇ, ತನ್ನ ಬಾಧನೆಯು ವೇದಕ್ಕೆ ಅನುಸಾರವಾಗಿದೆಂದು, ಕೆಲವು ಬೇರೆ ಸೂತ್ರಗಳಿಂದ ಸಿದ್ಧಾಂತ ಮಾಡುತ್ತಾನೆ; ಅವನ್ನು ಇಲ್ಲಿ ಹೇಳಲಿಕ್ಕೆ ಕಾರಣವಿಲ್ಲ; ಆದರೆ ಬ್ರಹ್ಮವು ಪ್ರಕೃತಿಯೂ ಆಗಿದೆ ಎಂಬ ಹಿಂದು ದುರ್ಬೋಧನೆಯನ್ನು ವೇದದಿಂದಲೇ ಹೆಚ್ಚಾಗಿ ಪರ್ಸಿಸುವದಕ್ಕೋಸ್ಕರ, ಕೃಷ್ಣ-ಯಜುರ್-ವೇದದ ತೈತ್ತಿ

ರೀಯ-ಆರಣ್ಯಕದ ಒನೇ, ಲನೇ, ೀನೇ ಅಧ್ಯಾಯಗಳಾವ ತೈತ್ತಿರೀಯ-ಉಪನಿಷತ್ತಿನ ಬ್ರಹ್ಮಾನಂದ-ವಲ್ಲಿಯ ಕೆಲವು ವಾಕ್ಯಗಳನ್ನು ಹೇಳ ತಕ್ಕ ದ್ದಾಗಿದೆ, ಯಾವಪಂದರೆ—

ಸಾೀಕಾಮಯತ। ಬಹು ಸ್ಯಾಂ ಪ್ರಜಾಯೇಯೇೀತಿ। ಸ ತಪಾೀತ ಪ್ಯತ। ಸ ತಪಸ್ ತಪ್ತಾ। ಇದಂ ಸರ್ವಮ್ ಅಸೃಜತ। ಯದ್ ಇದಂ ಕಿಂ ಚ। ತತ್ ಸೃಷ್ಟಾ್ವ। ತದ್ ಏವಾನುಪ್ರಾವಿಶತ್। ತದ್ ಅನುಪ್ರವಿಶ್ಯ। ಸಚ್ ಚ ತ್ಯಚ್ ಚಾಭವತ್। ನಿರುಕ್ತಂ ಚಾನಿರುಕ್ತಂ ಚ। ನಿಲಯನಂ ಚಾನಿಲಯನಂ ಚ। ವಿಜ್ಞಾನಂ ಚಾವಿಜ್ಞಾನಂ ಚ। ಸತ್ಯಂ ಚಾನೃತಂ ಚ ಸತ್ಯಮ್ ಅಭವತ್। ಯದ್ ಇದಂ ಕಿಂ ಚ। ತತ್ ಸತ್ಯಮ್ ಇತ್ಯಾ ಆಚಕ್ಷತೇ। ತದ್ ಅಪ್ಯಾ ಏಷ ಶ್ಲೋಕಾೀ ಭವತಿ॥ ಒನೇ ಅನುವಾಕ॥ ಅಸದ್ ವಾ ಇದಮ್ ಅಗ್ರ ಆಸೀತ್। ತತಾೀ ವೈ ಸದ್ ಅಜಾಯತ। ತದ್ ಆತ್ಮಾನಂ ಸ್ವಯಮ್ ಅಕುರುತ। ತಸ್ಮಾತ್ ತತ್ ಸುಕೃತಮ್ ಉಚ್ಯತ ಇತಿ॥ ಒನೇ ಅನುವಾಕ॥

ಟೀಕು॥ ಅವನು (ಅಂದರೆ ಪರಮಾತ್ಮನು ಸೃಷ್ಟಿೀ ಕಾಲದಲ್ಲಿ)—ನಾನು ಬಹಳಿವಾಗುತ್ತೇನೆ, ನಾನು ಹುಟ್ಟುತ್ತೇನೆ ಎಂತ, (ಪ್ರಕೃತಿೀ ಬೆಸೆಯಿಂದ) ಕಾಮಿಸಿದನು; ಅವನು ತಪಸು ಮಾಡಿದನು; ಅವನು ತಪಸು ಮಾಡಿ, ಇದನ್ನೆಲ್ಲಾ (ಅಂದರೆ ಈ ವಿಶ್ವವನ್ನೆಲ್ಲಾ), ಯಾವದು ಉಂಟೋ ಅದನ್ನೆಲ್ಲಾ ಸೃಷ್ಟಿಸಿದನು (ಅಂದರೆ ತನ್ನಿಂದ ಹೊರಡ ಬಿಟ್ಟನು); ಅದನ್ನು ಸೃಷ್ಟಿಸಿ, ಅದರೊಳಗೆ ಹೊಕ್ಕೊಂಡನು; ಅದರೊಳಗೆ ಹೊಕ್ಕೊಂಡು, ಸತ್ (ಅಂದರೆ ಮೂರ್ತಿ ಅಥವಾ ರೂಪ ಉಳ್ಳದ್ದು) ಮತ್ತು ತ್ಯತ್ (ಅಂದರೆ ಮೂರ್ತಿಯಿಲ್ಲದ್ದು), ನಿರುಕ್ತ (ಅಂದರೆ ಸ್ಪಷ್ಟವಾದದ್ದು) ಮತ್ತು ಅನಿರುಕ್ತ (ಅಂದರೆ ಸ್ಪಷ್ಟವಲ್ಲದ್ದು), ನಿಲಯನ (ಅಂದರೆ ಆಧಾರವುಳ್ಳದ್ದು) ಮತ್ತು ಅನಿಲಯನ (ಅಂದರೆ ಆಧಾರವಿಲ್ಲದ್ದು), ವಿಜ್ಞಾನ (ಅಂದರೆ ವಿಚಿತ್ರವಾದ ಜ್ಞಾನ) ಮತ್ತು ಅವಿಜ್ಞಾನ, ಸತ್ಯ (ಅಂದರೆ ಪುಣ್ಯ) ಮತ್ತು ಅನೃತ (ಅಂದರೆ ಪಾಪ) ಆದನು,—(ಬರೇ ಮಿಥ್ಯೆಯೂ ಕನಸೂ ಆದ ಮಾಯೆಯಲ್ಲ) ಸತ್ಯವು (ಅಂದರೆ ಬ್ರಹ್ಮದಿಂದಲೇ ಬಂದು ನಿಜವಾಗಿ ಇರುವಂಥಾದ್ದು) ಆಗಿರುವ ಇದೆಲ್ಲವೂ ಆದನು (ಅಂದರೆ ಬೇರೆ

ವೇದಾಂತ್ಯಾದಿ ಜನರು ಪ್ರಕೃತಿಯೆಂಬದು ಸುಳ್ಳೆಂದು ಹೇಳ್ಗುವ ಹಾಗ ಲ್ಲ, ಪ್ರಕೃತಿಯು ಬ್ರಹ್ಮವೇ ಅಥವಾ ಸತ್ಯವಾಗಿ ಇರುವಂಥಾದ್ದೇ ಎಂಬಂತೆ ಈ ಹಳ್ಳೇ ಉಪನಿಷತ್ತಿನ ಅರ್ಥವಾಗುತ್ತದೆ);—ಅದರ ದೆಸೆಯಿಂದ (ಅಂದರೆ ಈ ವಿಶ್ವದ ಪ್ರಕೃತಿಯು ಬ್ರಹ್ಮವಾಗಿರುವದರ ದೆಸೆಯಿಂದ) ಇದು (ಅಂದರೆ ಈ ವಿಶ್ವದಲ್ಲಿ ಕಾಣುವಂಥಾದ್ದು) ಸತ್ಯವು (ಅಂದರೆ ಸುಳ್ಳಾದ ಮಾಯೆಯೆಲ್ಲ ಸತ್ಯವಾಗಿ ಇರುವಂಥಾದ್ದು) ಎನ್ನಿಸುತ್ತದೆ. ಮತ್ತು ಇಲ್ಲಿ ಈ ಶ್ಲೋಕವು ತಕ್ಕದ್ದಾಯಿತು, ಏನಂದರೆ—ಇದು (ಅಂದರೆ ವಿಶ್ವವು) ಆರಂಭದಲ್ಲಿ (ಅಂದರೆ ಸೃಷ್ಟಿಯಾಗುವದಕ್ಕೆ ಮುಂಚೆ) ಅಸತ್ (ಅಂದರೆ ಮೂರ್ತಿಯಿಲ್ಲದ್ದು) ಆಗಿತ್ತು, ಅದರ ದೆಸೆಯಿಂದ ಏ (ಅಂದರೆ ಮೂರ್ತಿಗೊಳ್ಳದಿದ್ದ ಬ್ರಹ್ಮವಾಗಿರುವ ಪ್ರಕೃತಿಯಿಂದ ಏ) ಸತ್ (ಅಂದರೆ ಮೂರ್ತಿಯುಳ್ಳ ವಿಶ್ವವು) ಹುಟ್ಟಿತು; ತತ್ (ಅಂದರೆ ಮೂರ್ತಿಗೊಳ್ಳದಿದ್ದ ಬ್ರಹ್ಮವು) ತನ್ನನ್ನು ತಾನೇ (ವಿಶ್ವವೆಲ್ಲವಾಗಿ) ಮಾಡಿತು; ಅದರ ದೆಸೆಯಿಂದ ತತ್ (ಅಂದರೆ ವಿಶ್ವವಾದ ಆ ಬ್ರಹ್ಮವು) ತನ್ನಿಂದ ತಾನೇ ಮಾಡಲ್ಪಟ್ಟಿದ್ದೆನ್ನಿಸಿ ಕೊಳ್ಳುತ್ತದೆ.—

ಅದಲ್ಲದೆ ಮಹಾಭಾರತದ ಸಭಾ-ಪರ್ವದಲ್ಲಿ ಇರುವದೇನಂದರೆ—

ಭೀಷ್ಮ ಉವಾಚ ॥

ಕೃಷ್ಣಸ್ಯ ಹಿ ಕೃತೇ ವಿಶ್ವಮ್ ಇದಂ ಭೂತಂ ಚರಾಚರಂ।
ಅಪಿ ಪ್ರಕೃತಿರ್ ಅವ್ಯಕ್ತಾ ಕರ್ತಾ ಚೈವ ಸನಾತನಃ ॥ ೬೪೬೧ ॥

ಟೀಕು ॥ ಕೃಷ್ಣನ ಮುಖಾಂತ್ರದಿಂದ ಸಚರ ಅಚರವಾದ ಇದೆಲ್ಲವು ಆಯಿತು; ಅವನು ಅವ್ಯಕ್ತವಾಗಿರುವ ಪ್ರಕೃತಿಯೂ ಕರ್ತನೂ ಸನಾತನನೂ ಆಗಿದ್ದಾನೆ ಎಂತ, ಭೀಷ್ಮನು ಹೇಳಿದನು.—

ಹಾಗಾದರೆ, ತಮ್ಮಾ,—ಹಿಂದು ಬಾಧಿತಾರ್ಥವಾದಂಥ, ರಜಸು ತಮಸುಗಳುಳ್ಳಂಥ, ಎಲ್ಲಾ ದುಷ್ಕರ್ಮಗಳು ಹುಟ್ಟುತ್ತಿರುವಂಥ ಪ್ರಕೃತಿಯು ದೇವರೂ ದೇವರ ಆತ್ಮದ್ದೂ ಅವನ ಆತ್ಮದ ಶಕ್ತಿಯೂ ಆಗಿದೆ, ದೇವರು ಅಜ್ಞಾನದ ಅಥವಾ ಅವಿದ್ಯೆಯ ಅಥವಾ ಸುಳ್ಳಿನ ಅಥವಾ ಭ್ರಾಂತಿಯ ಶಕ್ತಿಯೂ ಇಂದ್ರಜಾಲವುಳ್ಳವನೂ ಸಕಲ ಪಾಪಕ್ಕೆ ಕಾರಣವಾದ ರಜಸು ತಮಸುಗಳ ಮೂಲವೂ ನಿರ್ಮಾಣಿಕನೂ ಇತ್ಯಾದಿ ಆ

ಗಿದ್ದಾನೆ ಎಂಬ ದುರ್ಬೋಧನೆಯು ಹಿಂದು ವೇದ ಶಾಸ್ತ್ರಗಳದ್ದಾಗಿದೆಂತ ಸಿದ್ಧಾಂತವಲ್ಲವೋ? ಮತ್ತು ಹೀಗೆ ಬೋಧಿಸಿದವರು ಅತಿ ಮೂಢರೆಂದರೆ ಅನ್ಯಾಯವೋ? — ರಂಗನು ಬೇಗ ಶಿಟ್ಟು ಪಡುವಂಥವನಲ್ಲ; ಆದರೆ ಹಿಂದು ಬೋಧನಾರ್ಥವು ಅಂಥಾದ್ದೆಂದು ತಿಳಿದು, ಪ್ರತಿವಾದ ಮಾಡದೆ, ಅಂಥಾ ದೂಷಣೆಯುಳ್ಳ ಬೋಧನೆಯನ್ನು ಹುಟ್ಟಿಸಿದವರು ನಾಶವಾಗಲಿ! ಎಂತ, ಕೋಪವೇರಿ ನುಡಿದನು. — ಅವನ ಅಣ್ಣನು ಸಂತೈಸಿ, ಮತ್ತಿಂತೆಂದನು — ಈಗಿನ ಕಾಲದ ಅವರ ಮಕ್ಕಳು, ರಂಗಾ, ಯೇಸು ಕ್ರಿಸ್ತನಲ್ಲಿ ಮೂಡಿದ ಸತ್ಯಜ್ಞಾನಕ್ಕೆ ಬರಲಿ ಎಂತ ಬೇಡಿಕಾಳ್ಳ ತಕ್ಕದ್ದಾಯಿತು; ನಾನು ಹೇಳಿದ ನಿಮ್ಮ ಶಾಸ್ತ್ರಗಳ ಬೋಧನೆಗೆ ಶಿಟ್ಟು ಪಟ್ಟಿರಿ; ಇನ್ನು ಮುಂದಿನ ಸಂಜಿತಾಷಣೆಯಲ್ಲಿಯೂ ಅದಕ್ಕೆ ಶಿಟ್ಟು ಪಟ್ಟರೆ, ನಾನಲ್ಲ ನಿಮ್ಮ ಶಾಸ್ತ್ರಗಳೇ ಕಾರಣವೆಂತ ನೆನಪು ಮಾಡಿಕಾಳ್ಳುತ್ತಿರ್ರಿ!

ಹಿಂದು ಬೋಧನಾರ್ಥವಾದ, ಅವಿದ್ಯೆ ಅಜ್ಞಾನ ಮಿಥ್ಯೆ ಇತ್ಯಾದಿ ಹೆಸರುಗಾಂಡ, ರಜಸು ತಮಸು ಗುಣಗಳುಳ್ಳ ಮಾಯೆಯಿಂದ ದೇವರಿಗೆ ಸೃಷ್ಟೀ ಕಾಲದಲ್ಲಿ ಏನು ಸಂಚವಿಸಿತೆಂದೂ, ಹಿಂದು ಬೋಧನೆಯ ಪ್ರಕಾರ ದೇವರ ಎಲ್ಲಾ ಕರ್ಮಗಳಿಗೂ ಮೂಲವಾವ ಆ ಪ್ರಕೃತೀ ಜಾಲದಲ್ಲಿ ಅವನು ಹ್ಯಾಗೆ ಶಿಕ್ಕಿ ಕಾಂಡು ಸೃಷ್ಟಿಸಿದನೆಂದೂ, ಹಿಂದು ವೇದ ಶಾಸ್ತ್ರಗಳ ಮೇಲೆ ಈಗ ವಿವರಿಸ್ಯೇನು, ಕೇಳಿರಿ; ನಾನು ಕೆಲವು ಶ್ಲೋಕಗಳನ್ನು ಹೇಳಿದ ಕೃಷ್ಣ-ಯಜುರ್-ವೇದದ ಶ್ವೇತಾಶ್ವತರ-ಉಪನಿಷತ್ತಿನ ಳನೇ ಅಧ್ಯಾಯದ ೀನೇ ಶ್ಲೋಕ ಹೇಳುವದೇನಂದರೆ —

ಯಸ್ತಾನ್ ಮಾಯಿೀ ಸೃಜತೇ ವಿಶ್ವಮ್ ಏತತ್ ತಸ್ಮಿಂಶ್ ಚಾನ್ಯೋ
ಮಾಯಯಾ ಸನ್ನಿರುದ್ಧಃ । ೯ ।

ಟೀಕು॥ ಅವನು (ಅಂದರೆ ಪರಮಾತ್ಮನು) ಮಾಯೆಯುಳ್ಳವನಾಗಿದ್ದು, ಈ ವಿಶ್ವವನ್ನು ಸೃಷ್ಟಿಸುತ್ತಾನೆ (ಅಂದರೆ ತನ್ನಿಂದ ಹೊರಡ ಮಾಡುತ್ತಾನೆ); ಮತ್ತು ಅದರಲ್ಲಿ (ಅಂದರೆ ವಿಶ್ವದಲ್ಲಿ) ಅವನು ಮಾಯೆಯಿಂದ ಕಟ್ಟಲ್ಪಟ್ಟವನಾಗಿ, ಅನ್ಯನು (ಅಂದರೆ ಜೀವಾತ್ಮನು) ಆಗಿದ್ದಾನೆ.—

ಸಂಶಯವನ್ನು ಪರಿಹರಿಸಲಿಕ್ಕಾಗಿ ಇದಕ್ಕೆ ಕೂಡಿದ ಶಂಕರಾಚಾರ್ಯ ನ ಚಾಪ್ಯದ ಒಂದು ಮಾತೇನಂದರೆ —

ಸನ್ನಿರುದ್ಧಸ್ ತು। ಅವಿದ್ಯಾ-ವಶ-ಗಾಽ ಇವಾತ್ಮಾ।

ಟೀಕು॥ (ಮಾಯೆಯಿಂದ) ಕಟ್ಟಲ್ಪಟ್ಟವನೆಂದರೆ ಅವಿದ್ಯೆಯ ವಶದಲ್ಲಿ ಶೇರಿದವನು.—

ಹೀಗೆಯೇ ಗೌಡ-ಪಾದನೆಂಬ, ಹಿಂದು ಜನರಲ್ಲಿ ಪ್ರಖ್ಯಾತಿ ಪ ಟ್ಟ ಪಂಡಿತನು ತಾನು ಮಾಂಡೂಕ್ಯ-ಉಪನಿಷತ್ತಿಗಾಗಿ ರಚಿಸಿದ ಕಾರಿಕೆ ಯ ೪ನೇ ಪ್ರಕರಣದಲ್ಲಿ ದೇವರನ್ನು ಕುರಿತು ಬರೆದಿದ್ದಾನೆ, ಹ್ಯಾಗಂದ ರೆ —

ಮಾಯೈಷಾ ತಸ್ಯ ದೇವಸ್ಯ ಯಯಾ ಸಮ್ಮೋಹಿತಃ ಸ್ವಯಂ। ೧೪।

ಟೀಕು॥ ಅವನು (ಅಂದರೆ ದೇವರು) ಯಾತರಿಂದ ತನ್ನಿಂದ ತಾನೇ (ಛೀ, ಛೀ!) ಮರುಳಾಗಿದ್ದಾನೋ, ಅದು ಆ ದೇವರ ಈ ಮಾಯೆಯಾಗಿದೆ.—

ಈ ಕಾರಿಕೇ ಮಾತಿನ ವಿವರಕ್ಕಾಗಿ ಆನಂದ-ಗಿರಿಯು ತನ್ನ ಟೀಕೆಯ ಲ್ಲಿ ಬರದ್ದೇನಂದರೆ —

ಯಥಾ ಲೌಕಿಕಾ ಮೋಹಿತಾ ಮೋಹ-ಪರವಶಾ ದೃಶ್ಯತೇ ತ ಥಾಽಯಮ್ ಆತ್ಮಾ ಸ್ವಯಮ್ ಏವ ಮಾಯಾ-ಸಮ್ಬನ್ಧಾನ್ ಮೋಹಿ ತಾ ಇವತಿ।

ಟೀಕು॥ ಲೌಕಿಕನೊಬ್ಬನು ಹ್ಯಾಗೆ ಮರುಳಾಗಿ, ಅಂದರೆ ಮರುಳ ವಶ ದವನಾಗಿ, ದೃಷ್ಟಿಸಲ್ಪಡುತ್ತಾನೋ, ಹಾಗೆಯೇ ಈ ಆತ್ಮನು ಮಾಯೆಯ ಸಂಬಂಧದ ದೆಸೆಯಿಂದ ತನ್ನಿಂದ ತಾನೇ ಮರುಳಾಗುತ್ತಾನೆ.—

ಮತ್ತು, ತಮ್ಮಾ, ಅಥರ್ವ-ವೇದದ ಕೈವಲ್ಯ-ಉಪನಿಷತ್ತಿನ ೧೧ನೇ ಶ್ಲೋಕವೇನಂದರೆ —

ಸ ಏವ ಮಾಯಾ-ಪರಿಮೋಹಿತಾಽತ್ಮಾ ಶರೀರಮ್ ಏತ್ಯಾ ಸೃಜತೇ ಚ ವಿಶ್ವಂ।
ಸ್ತ್ರೀಯಾಽನ್ನ-ಪಾನಾದಿ-ವಿಚಿತ್ರ-ಭೋಗೈಃ ಸ ತೃಪ್ತಿಮ್ ಏಷ್ಯಾತಿ ಚ ಜಾಗರೂಕಃ॥ ೧೧॥

ಟೀಕು॥ ಅವನೇ (ಅಂದರೆ ಪರಮಾತ್ಮನೇ) ಮಾಯೆಯಿಂದ ಮರುಳಾದ ಆತ್ಮನಾಗಿ, ಶರೀರವನ್ನು ಪಡಕೊಂಡು, ವಿತ್ತವನ್ನು ಸೃಷ್ಟಿಸುತ್ತಾನೆ; ಮತ್ತು (ಕನಸಿನಾಟವೆಂಬ) ಜಾಗ್ರತೆಯುಳ್ಳವನು (ಅಂದರೆ ಜೀವಾತ್ಮನು) ಆಗಿದ್ದು, ಸ್ತ್ರೀ ಅನ್ನ ಪಾನ ಮುಂತಾದ್ದರಲ್ಲಿರುವ ಬೇರೆ ಬೇರೆ ಭೋಗಗಳಿಂದ ತೃಪ್ತಿ ಹೊಂದುತ್ತಾನೆ—

ಮತ್ತು ಕೃಷ್ಣ-ಯಜುರ್-ವೇದದ ತೈತ್ತಿರೀಯ-ಆರಣ್ಯಕದ ೧೦ನೇ ಅಧ್ಯಾಯವಾದ ನಾರಾಯಣೀಯಾ-ಉಪನಿಷತ್ತಿನ ೧೦ನೇ ಅನುವಾಕದಲ್ಲಿರುವದೇನಂದರೆ —

ಅಜಾಮ್ ಏಕಾಂ ಲೋಹಿತ-ಶುಕ್ಲ-ಕೃಷ್ಣಾಮ್ ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ।
ಅಜೋ ಹ್ಯೇಕೋ ಜುಷಮಾಣೋಽನುಶೇತೇ ಜಹಾತ್ಯೇನಾಮ್ ಭುಕ್ತ-ಭೋಗಾಮ್ ಅಜೋಽನ್ಯಃ॥ ೫॥

ಟೀಕು॥ ಹುಟ್ಟದೆ ಇರುವಂಥ, ಒಬ್ಬಳೇ ಆದಂಥ, ಕೆಂಪಾಗಿಯೂ (ಅಂದರೆ ರಜಸುವರ್ಣವಾಗಿಯೂ) ಬಿಳುಪಾಗಿಯೂ (ಅಂದರೆ ಸತ್ತ್ವವರ್ಣವಾಗಿಯೂ) ಕಪ್ಪಾಗಿಯೂ (ಅಂದರೆ ತಮಸುವರ್ಣವಾಗಿಯೂ) ಇರುವಂಥ, ತನ್ನ ರೂಪವುಳ್ಳ ಬಹಳ ಪ್ರಜೆಗಳನ್ನು (ಅಂದರೆ ಮನುಷ್ಯಾದಿಗಳನ್ನು) ಸೃಷ್ಟಿಸುವಂಥ ಅವಳಿಗೆ (ಅಂದರೆ ಸರಸ್ವತಿ ಲಕ್ಷ್ಮಿ ಪಾರ್ವತಿ ಇತ್ಯಾದಿ ಹೆಸರ್ಗೊಂಡ ಪ್ರಕೃತಿಗೆ) ಹುಟ್ಟದೆ ಇರುವಂಥ, ಒಬ್ಬನೇ ಆದಂಥ ಅವನು (ಅಂದರೆ ನಾರಾಯಣನಾಗಲಿ ರುದ್ರನಾಗಲಿ ಎನ್ನಿಸುವ ಪರಮಾತ್ಮನು) ವಿಲಾಸ ಪಟ್ಟು ಕೂಡುತ್ತಾನೆ (ಅಂದರೆ ಜೀವಾತ್ಮನಾಗುತ್ತಾನೆ); (ಆ ಮೇಲೆ) ತಾನು ಭೋಗಿಸಿದವಳನ್ನು, ಬೇರೆ ಅಜನಾಗಿ (ಅಂದರೆ ಲಯಕಾಲದಲ್ಲಿ ಯೋಗಬಲದಿಂದ ತಿರಿಗಿ ಪರಮಾತ್ಮನಾಗಿ), ಬಿಡುತ್ತಾನೆ—

ರಂಗನೇ, ಇಲ್ಲಿ ಒಂದು ಮಾತು ಹೇಳ ಬೇಕಾಗುತ್ತದೆ; ರುದ್ರನು ಪರಮಾತ್ಮನೆಂತ ಹೇಳುವ ಆ ಶ್ವೇತಾಶ್ವತರ ಮತ್ತು ಕೈವಲ್ಯ ಎಂಬ ಉಪನಿಷತ್ತುಗಳಿಂದಲೂ ನಾರಾಯಣೀಯಾ-ಉಪನಿಷತ್ತಿನಿಂದಲೂ ನಾನು ತೆಗೆದು ಹೇಳಿದ ವಾಕ್ಯಗಳ ಪ್ರಕಾರ ದೇವರು ತಾನೇ ಜೀವಾತ್ಮನು

ಅಥವಾ ಜೂತಾತ್ಮನು ಆಗಿ (ಅಂದರೆ ಮನುಷ್ಯನಾಗಿ), ಲೌಕಿಕದಲ್ಲಿ ಎ
ಲ್ಲಾ ಕ್ರಿಯೆಗಳನ್ನು ಮಾಡುತ್ತಾನೆ, ಅಂದರೆ ಮನುಷ್ಯರೆಲ್ಲರು ಸುಕ್ರಿಯೆಗಳ
ನ್ನಲ್ಲ ದುಷ್ಕ್ರಿಯೆಗಳನ್ನು ಮಾತ್ರ ಮಾಡುವದರಿಂದ ಎಲ್ಲಾ ದುಷ್ಕ್ರಿ
ಯೆಗಳನ್ನೇ ಮಾಡುತ್ತಾನೆಂತ ಬಾೀಧಿಸಲಾಯಿತು, ಆನಂದ-ಗಿರಿಯು
ರಚಿಸಿ ಕಲ್ಕತ್ತದಲ್ಲಿ ಛಾಪೆಯಾದ ಆ ಕಾರಿಕೇ ಟೀಕೆಯ ತಿಲಳನೇ ಪಾಠ
ನಲ್ಲಿ ಹೇಳಿರುವ ಪ್ರಕಾರ; ತಿನಂದರೆ —

ಪರಮಾತ್ಮೈವ ಜೀವ-ಭಾವಮ್ ಆಪನ್ನಃ ಸಂಸರತಿ।

ಟೀಕು॥ ಪರಮಾತ್ಮನೇ ಜೀವಭಾವವನ್ನು ವಡಕೊಂಡು ಸಂಸಾರದೊಳ
ಗಿದ್ದಾನೆ.—

ಸಕಲ ಹಿಂದು ಶಾಸ್ತ್ರಗಳಲ್ಲಿ ಶಿಕ್ಕುವ ಈ ಬಾೀಧನೆಯನ್ನು ಅತಿ
ದೂಷ್ಯ ಬಾೀಧನೆಯೇ ಎಂತ ಹೇಳ ಬೇಕು; ಆದರೆ ನಾವು ಈಗ ವಿ
ಶೇಷವಾಗಿ ಈ ದುರ್ಬಾೀಧನೆಯನ್ನಲ್ಲ, ದೇವರು ಪ್ರಕೃತಿಯೂ ಆಗಿ ಅ
ಥವಾ ರಜಿಸು ತಮಸುಗಳುಳ್ಳ ಜಾವದವನಾಗಿ, ಅದೇ ಜಾವದ ಸೃಷ್ಟಿ
ಮಾಡಿ, ಸಕಲ ಪಾಪಕ್ಕೂ ಕಾರಣವಾಗಿದ್ದಾನೆಂಬ ಹಿಂದು ದುರ್ಬಾೀಧನೆ
ಯನ್ನು ದೃಷ್ಟಿಸುತ್ತೇವೆ; ಈ ವಿಷಯವಾಗಿ ಮುಂದೆ ಕೇಳಿರಿ; ಮಧುಸೂ
ದನ-ಸರಸ್ವತಿಯೆಂಬ ದಾಡ್ಡ ಹಿಂದು ಪಂಡಿತನು ತನ್ನ ಪ್ರಸ್ಥಾನ-ಭೇ
ದದ ೨ಳನೇ ಸಂಧಾನದಲ್ಲಿ ಹೇಳುವದೇನಂದರೆ —

ಪರಮಾನನ್ದಾದ್ವಿತೀಯಂ ಬ್ರಹ್ಮ ಸ್ವ-ಮಾಯಾ-ವಶಾದ್ ಮಿಥ್ಯೈವ
ಜಗದ್-ಆಕಾರೇಣ ಕಲ್ಪತೇ ॥೪॥

ಟೀಕು॥ ಪರಮ ಆನಂದವುಳ್ಳ, ಒಂದೇ ಆದ ಬ್ರಹ್ಮವು, ತನ್ನ ಮಾಯೆಯ
ವಶದಲ್ಲಿರುವದರ ದೆಸೆಯಿಂದ, ಸುಳ್ಳಾಗಿ ಜಗತ್ತಿನ (ಕ್ರಿಯಾದಿ) ರೂಪವ
ನ್ನು ತಕ್ಕೊಳ್ಳುತ್ತದೆ (ಎಲ್ಲಾ ದುಷ್ಕ್ರಿಯೆಗಳೂ ಸುಕ್ರಿಯೆಗಳೂ ಸಹ
ಸುಳ್ಳು ಎಂಬುಂತೆ).—

ಶಂಕರಾಚಾರ್ಯನು ಶ್ವೇತಾಶ್ವತರ-ಉಪನಿಷತ್ತಿಗಾಗಿ ರಚಿಸಿದ ಜಾ
ಷ್ಯದ ೨ಟಲನೇ ಪಾನಿನಲ್ಲಿ ಜಗವಾನ್-ಪರಾಶರನ ಈ ಮಾತುಗಳವೆ
(ವಿಷ್ಣು-ಪುರಾಣದವು) —

ಅಸ್ಮಾದ್ ಹಿ ಜಾಯತೇ ವಿಶ್ವಂ ಮೈತ್ರೇಯ ಪ್ರವಿಲೀಯತೇ।
ಸ ಮಾಯೀ ಮಾಯಯಾ ಬದ್ಧಃ ಕರೋತಿ ವಿವಿಧಾಸ್ ತನೂಃ॥

ಟೀಕು॥ ಅವನ ದೆಸೆಯಿಂದಲೇ (ಪರಮಾತ್ಮನ ದೆಸೆಯಿಂದಲೇ) ವಿಶ್ವವು ಹುಟ್ಟುತ್ತದೆ ಮತ್ತು ಲೀನವಾಗುತ್ತದೆ, (ನನ್ನ ಶಿಷ್ಯನಾದ) ಮೈತ್ರೇಯನೇ; ಅವನು (ಅಂದರೆ ಪರಮಾತ್ಮನು) ಮಾಯೆಯುಳ್ಳವನಾಗಿ, ಮಾಯೆಯಿಂದ ಬಂಧಿಸಲ್ಪಟ್ಟವನಾಗಿ ವಿಧವಿಧವಾದ ದೇಹಗಳನ್ನು (ಮತ್ತು ಅವುಗಳ ಕರ್ಮಗಳನ್ನು) ಉಂಟು ಮಾಡುತ್ತಾನೆ.—

ಮತ್ತು ವಿಷ್ಣು-ಪುರಾಣದ ೧ನೇ ಅಂಶದ ೨ನೇ ಅಧ್ಯಾಯದಲ್ಲಿ ಹೀರುವದೇನಂದರೆ —

ಜುಷನ್ ರಜೋ-ಗುಣಂ ತತ್ರ ಸ್ವಯಂ ವಿಶ್ವೇಶ್ವರೋ ಹರಿಃ।
ಬ್ರಹ್ಮಾ ಭೂತ್ವಾ೭ಸೃಜ ಜಗತೋ ವಿಸೃಷ್ಟೌ ಸಮ್ಪ್ರವರ್ತ್ತತೇ॥ ೫೬॥

ಟೀಕು॥ ವಿಶ್ವೇಶ್ವರನಾದ ಹರಿಯು ಅದರೊಳಗೆ (ಅಂದರೆ ನೀರಿನಲ್ಲಿ ತೇಲಾಡುವ ಪ್ರಕೃತಿಯ ಅಂಡದೊಳಗೆ) ತನ್ನಿಂದ ತಾನೇ ರಜಸು ಗುಣವನ್ನು ಮೋಹವಾಗಿ ತಕ್ಕೊಂಡು, ಬ್ರಹ್ಮನಾಗಿ ಈ ಜಗತ್ತಿನ ಸೃಷ್ಟಿಯನ್ನು ನಡಿಸುತ್ತಾನೆ.—

ಹೀಗೆ ಕೇಳಿದ ಮೇಲೆ, ತಮ್ಮಾ, ಶುಕ್ಲ-ಯಜುರ್-ವೇದದ ಶತಪಥ-ಬ್ರಾಹ್ಮಣದ ೧೦ನೇ ಕಾಂಡದ ೪ನೇ ಅಧ್ಯಾಯದ ೪ನೇ ಬ್ರಾಹ್ಮಣದ ದೂಷಣೆಯುಳ್ಳ ಮಾತಿನಲ್ಲಿ ಆಶ್ಚರ್ಯವೇನು? ಆ ಮಾತೇನಂದರೆ —

ಪ್ರಜಾಪತಿಂ ವೈ ಪ್ರಜಾಃ ಸೃಜಮಾನಮ್ ಪಾಪ್ಮಾ ಮೃತ್ಯುರ್ ಅಜಿಘರಿ-ಜಿಘಾನ। ಸ ತಪೋ೭ತಪ್ಯತ ಸಹಸ್ರಂ ಸಂವತ್ಸರಾನ್ ಪಾಪ್ಮಾನಂ ವಿಜಿಹಾಸನ್ನ್। ೧।

ಟೀಕು॥ ಪ್ರಜೆಗಳನ್ನು ಸೃಷ್ಟಿಸುವ ಪ್ರಜಾಪತಿಯನ್ನು (ಅಂದರೆ ಬ್ರಹ್ಮನನ್ನು; ೧೬ನೇ ಪಾನು ನೋಡಿರಿ) ಪಾಪವೂ ಮೃತ್ಯುವೂ ಬಹಳವಾಗಿ ಕಾಡಿಸಿತು; ತನ್ನ ಪಾಪವನ್ನು ಕಳೆಯುವದಕ್ಕಾಗಿ ಸಾವಿರ ವರುಷಗಳ ಪರ್ಯಂತರ ತಪಸ್ಸು ಮಾಡಿದನು.—

ಹೀಗೆ, ತಮ್ಮಾ, ಹಿಂದು ಜನರು ಕಲ್ಪಿಸಿ ಕಾಂಡ ಸೃಷ್ಟಿಕರ್ತನು ತಾನೀರಿಸಿ ಕಾಳ್ಳುತ್ತಾನೆ; ಅವರ ಕಲ್ಪನೆಯಲ್ಲಿರುವ ದೇವದೂಷಣೆಯು ಹಸ್ತಗತವಾಗಿದೆ; ಆ ದುರ್ಬಾಧನೆಗನುಸಾರವಾಗಿ ಋಗ್-ವೇದದ ೨ನೇ ಮಂಡಲದ ೧೫ನೇ ಸೂಕ್ತದ ಒಂದು ಶ್ಲೋಕವು ಇರುವದೇನಂದರೆ—

ಅವಂಶೇ ದ್ಯಾಮ್ ಅಸ್ತಭಾಯದ್ ವೃಹನ್ತಮ್ ಆ ರೋದಸೀ ಅಪೃ
ಣದ್ ಅನ್ತರಿಕ್ಷಂ।
ಸ ಧಾರಯತ್ ಪೃಥಿವೀಂ ಪಪ್ರಥಚ್ ಚ ಸೋಮಸ್ಯ ತಾ ಮದ ಇನ್ದ್ರ
ಶ್ ಚಕಾರ॥೨॥

ಟೀಕು॥ ಆಧಾರವಿಲ್ಲದಲ್ಲಿ ದಿವವನ್ನು ನಿಲ್ಲಿಸಿ ವಿಶಾಲವಾದ ಅಂತರಿಕ್ಷವನ್ನೂ ದಿವವನ್ನೂ ಭೂಮಿಯನ್ನೂ ತುಂಬಿಸಿದವನೇ ಪೃಥ್ವಿಗೆ ಆಧಾರ ಕೊಟ್ಟು ಅದನ್ನು ಕೀರ್ತಿ ಪಡಿಸಿದವನಾಗಿದ್ದಾನೆ; ಸೋಮದಿಂದ (ಅಂದರೆ ಸೋಮಬಳ್ಳಿಯ ಅಥವಾ ಅಮೃತಬಳ್ಳಿಯ ಸಾರಾಯದಿಂದ) ಅಮಲಾಗಿ (ಅಥವಾ ರಜಸು ತಮಸುಗಳೆಳ್ಳುಳ್ಳ ಮಾಯೆಯ ವಶದವನಾಗಿ) ಇಂದ್ರನು ಅವುಗಳನ್ನು (ಅಂದರೆ ಆ ಕ್ರಿಯೆಗಳನ್ನು) ಮಾಡಿದ್ದಾನೆ.—

ಒಟ್ಟಿಗೆ, ತಮ್ಮಾ, ದೇವರು ಸೃಷ್ಟಿಯಲ್ಲಿ ಮಾಯೆಯಿಂದ ಪ್ರಯೋಜನವಿಲ್ಲದ ಆಟ ಮಾಡಿದರೂ ಅವನು ಹುಚ್ಚನಲ್ಲ ಎಂಬುದೇ ಹಿಂದು ಶಾಸ್ತ್ರಗಳ ಹುಚ್ಚು ಬಾಧನೆಯಾಗಿದೆ; ಇದು ವ್ಯಾಸಮುನಿಯ ಶಾರೀರಕ-ಸೂತ್ರಗಳ ೨ನೇ ಅಧ್ಯಾಯದ ೧ನೇ ಪಾದದ ೩೩ನೇ ಸೂತ್ರದ ಮೇಲೆಯೂ ಇದಕ್ಕೆ ಶೇರಿದ ಶಂಕರಾಚಾರ್ಯನ ಭಾಷ್ಯದ ಕೆಲವು ಮಾತುಗಳ ಮೇಲೆಯೂ ಕಾಣಿಸುವದು, ಏನಂದರೆ—

ಲೋಕ-ವತ್ತು ಲೀಲಾ-ಕೈವಲ್ಯಂ॥೩೩॥ಯಥಾ ಲೋಕೇ ಕಸ್ಯಚಿದ್ ಆಪ್ತೈರ್ಋಷೇಸ್ಯ ರಾಜ್ಞೋ ರಾಜಾಽಮಾತ್ಯಸ್ಯ ವಾ ವೃತ್ತಿರಿಕ್ತಂ ಕಿಂಚಿತ್ ಪ್ರಯೋಜನಮ್ ಅನ್-ಅಭಿಸನ್ಧಾಯ ಕೇವಲಂ ಲೀಲಾ-ರೂಪಾಃ ಪ್ರವೃತ್ತಯಃ ಕ್ರೀಡಾ-ವಿಹಾರೇಷು ಭವನ್ತಿ ಏವಮ್ ಈಶ್ವರಸ್ಯಾಽಪ್ಯನ್-ಅಪೇಕ್ಷ ಕಿಂಚಿತ್ ಪ್ರಯೋಜನಾಽನ್ತರಂ ಸ್ವಭಾವಾದ್ ಏವ ಕೇವಲಂ ಲೀಲಾ-ರೂಪಾ ಪ್ರವೃತ್ತಿರ್ ಭವಿಷ್ಯತಿ। ನ ಹೀಽಶ್ವರಸ್ಯ ಪ್ರ

ಯಾೞನಾೞನ್ತರಂ ನಿರೂಪ್ಯಮಾಣಂ ನ್ಯಾಯತಃ ಶ್ರುತಿತೋ ವಾ ಸಮ್ಭವತಿ। ಯದಿ-ನಾಮ ಲೀಕೇ ಲೀಲಾಸ್ವ ಅಪಿ ಕಿಂಚಿತ್ ಸೂಕ್ಷ್ಮಂ ಪ್ರಯೋಜನಮ್ ಉತ್ಪ್ರೇಕ್ಷೇತ ತಥಾೞಪಿ ನೈವಾೞತ್ರ ಕಿಂಚಿತ್ ಪ್ರಯೋಜನಮ್ ಉತ್ಪ್ರೇಕ್ಷಿತುಂ ಶಕ್ಯತೇ। ನಾೞಪ್ಯ ಅಪ್ರವೃತ್ತಿರ್ ಉನ್ಮತ್ತ-ಪ್ರವೃತ್ತಿರ್ ವಾ।

ಟೀಕು॥ ಲೋಕದಲ್ಲಿ ಆಗುವಂತೆ (ದೇವರ ಸೃಷ್ಟಿಯು) ಬರೇ ಲೀಲೆಯಾಗಿದೆ.— ಇಚ್ಛಿಸಿದ್ದನ್ನೆಲ್ಲಾ ಹೊಂದಿದ ಬಬ್ಬ ರಾಜನಾಗಲಿ ರಾಜಮಂತ್ರಿಯಾಗಲಿ, ಏನೂ ವಿಶೇಷ ಪ್ರಯೋಜನ ಚೆಂತಿಸದೆ, ಆಟಪಾಟಗಳಲ್ಲಿ ಬರೇ ಲೀಲೆಯಾಗಿ ಹ್ಯಾಗೆ ಲೋಕದಲ್ಲಿ ಪ್ರವರ್ತಿಸುತ್ತಾನೋ, ಹಾಗೆಯೇ ಈಶ್ವರನಾದರೂ ಸ್ವಭಾವದ ದೆಸೆಯಿಂದಲೇ (ಅಂದರೆ ತಾನು ಹಿಂದು ಬೋಧನೆಯ ಪ್ರಕಾರ ಎಲ್ಲಾ ಕ್ರಿಯೆಗಳನ್ನು ಮಾಡುವ ಪ್ರಕೃತಿಯೂ ಆಗಿರುವದರಿಂದಲೇ), ಬೇರೇನೂ ಪ್ರಯೋಜನ ಅಪೇಕ್ಷಿಸದೆ, ಬರೇ ಲೀಲೆಯಾಗಿ (ಅಂದರೆ ಕರುಣೆಯಿಲ್ಲದೆಯೂ ನೀತಿಯಿಲ್ಲದೆಯೂ ಲೆಕ್ಖವಿಲ್ಲದೆಯೂ ಇತ್ಯಾದಿ ಸೃಷ್ಟಿನಿರ್ಮಾಣಿಕನಿಗೆ ಯೋಗ್ಯವಾದ ಲಕ್ಷಣಗಳಿಲ್ಲದೆಯೂ ಸೃಷ್ಟಿಯಲ್ಲಿ) ಪ್ರವರ್ತಿಸುವನು; ನ್ಯಾಯದ ದೆಸೆಯಿಂದಲಾಗಲಿ ವೇದದ ದೆಸೆಯಿಂದಲಾಗಲಿ, ಈಶ್ವರನಲ್ಲಿ (ಬರೇ ಲೀಲೆಯು ಹೊರತಾಗಿ) ಬೇರೇನೂ ಪ್ರಯೋಜನವಿತ್ತೆಂತ, ಭಾವಿಸಿ ಕೊಳ್ಳಲಾಗದು (ಅದರ ದೆಸೆಯಿಂದ ಜನರು ಮಾಡುವ ಸುಕೃತಿಯೆಗಳೂ ದುಷ್ಕೃತಿಯೆಗಳೂ ಸಹ ಬರೇ ಲೀಲೆ, ನ್ಯಾಯವಿಚಾರಕನಿಲ್ಲವೆಂಬಂತೆ ಆಗುತ್ತದೆ), ನಿಶ್ಚಯ; ಲೋಕದಲ್ಲಿ ಆಗುವ ಲೀಲೆಗಳಲ್ಲಿ ಸೂಕ್ಷ್ಮ ಪ್ರಯೋಜನವೇನಾದರೂ ಭಾವಿಸಿಕೊಳ್ಳಲಾದರೂ ಇದರಲ್ಲಿ (ಅಂದರೆ ದೇವರ ಸೃಷ್ಟಿಯಲ್ಲಿ) ಏನಾದರೂ ಪ್ರಯೋಜನ ಭಾವಿಸಿ ಕೊಳ್ಳಲಾಗದು; ಆದರೆ (ದೇವರಲ್ಲಿ) ಪ್ರವರ್ತ್ತನೆಯಿರುವದಿಲ್ಲವೆಂತಲೂ (ಅಂದರೆ ಅವನು ಕಲ್ಲಿನಂಥವನಾಗಿದ್ದಾನೆಂತಲೂ) ಹುಚ್ಚು ಪ್ರವರ್ತ್ತನೆಯುಂಟೆಂತಲೂ (ಭಾವಿಸಿ ಕೊಳ್ಳಲಿಕ್ಕೆ) ಆಗದು.—

ಮೇಲೆ ವಿಪರಿಸಿದ ಮಾಯಾವಾದದ ವಿಷಯವಾಗಿಯೂ ಈ ವ್ಯಾಸನ ಸೂತ್ರದ ವಿಷಯವಾಗಿಯೂ ನೀವೇ ನಿಮ್ಮೊಳಗೆ ಶೀರ್ಪು ಮಾಡಿಕೊಳ್ಳಿರಿ, ತಮ್ಮಾ! ಒಂದು ಮಾತ್ರ ಹೇಳುತ್ತೇನೇನಂದರೆ, ವ್ಯರ್ಥವಾದ

ಆಟಕ್ಕೆ ಅಂದರೆ ಮಂಗತನಕ್ಕೆ ಮತ್ತು ಹುಚ್ಚುತನಕ್ಕೆ ಈ ಲೋಕದಲ್ಲಿ ಹೆಚ್ಚುಕಡಿಮೆ ಮಾಡುವದು ಅಪರೂಪ; ಹೀಗುಂಟಿಲ್ಲವೋ? ಹೇಳಿರಿ. —

ರಂಗನು ಇಷ್ಟೆಲ್ಲಾ ಸುಮ್ಮನೇ ಕೇಳಿ, ಇನ್ನೂ ತಾಳಲಾರದೆ, ಛೀ, ಛೀ, ಎಂಥಾ ಪರಮಾತ್ಮನು! ಅಂಥವನು ಮಾಯೆಯ ಕರುವಷ್ಟೇ! ಎಂಥಾ ದೂಷಣೆ! ಎನ್ನಲಾಗಿ ಅವನಲ್ಲನು ಹೀಗಂದನು — ಈ ಸರ್ತಿ ನೀವು ಹಿಂದು ಬಾಧೆಯ ಪ್ರಕಾರ ಹೆಚ್ಚಿನ ಮಾತಾಡಿದ ಹಾಗಾಗಲಿಲ್ಲ, ಹ್ಯಾಗಂದರೆ ವಿದ್ಯಾರಣ್ಯ-ಸ್ವಾಮಿಯು ತಾನು ರಚಿಸಿದ ಪಂಚದಶಿಯಲ್ಲಿ ಹೇಳುವದೇನಂದರೆ —

ಮಾಯಾಽಖ್ಯಾಯಾಃ ಕಾಮ-ಧೇನಾಸ್ತಾರ್ ಪತ್ತೌ ಜೀವೇಽಶ್ವರಾವ್
ಉಚ್ಚೌ ! ಯಥೇಽಚ್ಛಂ ಪಿವತಃ । ಇತ್ಯಾದಿ।

ಟೀಕು॥ (ಮೂರು ಗುಣಗಳುಳ್ಳ) ಮಾಯೆಯೆಂಬ ಕಾಮಧೇನುವಿಗೆ ಜೀವ ಮತ್ತು ಈಶ್ವರ (ಅಂದರೆ ಮನುಷ್ಯನು ಮತ್ತು ಪರಮಾತ್ಮನು) ಎಂಬ ಎರಡು ಕರುಗಳು ಅವೆ, ಅವು ಇಚ್ಛೆ ಬಂದ ಹಾಗೆ (ಮಾಯೆಯ ಹಾಲನ್ನು) ಕುಡಿಯುತ್ತವೆ.—

ಇಂಥಾ ನಿರ್ಲಜ್ಜೆಯುಳ್ಳ ಮಾತುಗಳು ಹಿಂದು ಗ್ರಂಥಗಳಲ್ಲಿ ಅನೇಕ; ಆದರೆ ಈಗ, ತಮ್ಮಾ, ನನಗೆ ಹೇಳಿರಿ; ಹಿಂದು ಜನರ ವೇದ ಶಾಸ್ತ್ರಗಳು ವರ್ಣಿಸುವಂಥ ಪರಮಾತ್ಮನು, ಅಂದರೆ ರಜಸು ತಮಸು ಗುಣಗಳಾದ ಮಾಯೆಯುಳ್ಳಂಥ, ಅದರಿಂದ ಮರುಳಾಗುವಂಥಾ, ಅಜ್ಞಾನದ ಅಥವಾ ಅವಿದ್ಯೆಯ ಅಥವಾ ಸುಳ್ಳಿನ ವಶದಲ್ಲಿ ಶೀರುವಂಥ, ಸಾರಾಯವಿಂದ ಅಮಲಾಗುವಂಥ, ವ್ಯರ್ಥ ಆಟ ಮಾಡುವಂಥ, ಅವಿದ್ಯೆಯನ್ನು ಕುಡಿಯುವಂಥ, ಮೂರು ಗುಣವುಳ್ಳ ಪ್ರಕೃತಿ ಅಥವಾ ಮಾಯೆ ಸಹ ಆಗಿರುವಂಥ, ಪಾಪಕ್ಕೂ ಮರಣಕ್ಕೂ ಒಳಗಾಗುವಂಥ ಪರಮಾತ್ಮನು ಇದ್ದಾನೆಂದು ನಂಬುತ್ತೀರಾ? — ಆಗ ರಂಗನು — ಜೀವ ಹಾದರೂ ನಾನು ಎಂದೆಂದಿಗೂ ನಂಬಲಿಕ್ಕಿಲ್ಲ! ಅಂಥಾ ಬಾಧೆಯು ನನ್ನ ಮನಸ್ಸಾಕ್ಷಿಗೆ ಪೂರಾಗಿ ವಿರಾಧವೇ ಆಗಿದೆ; ನೀವು ಅದನ್ನು ನಂಬುತ್ತೀರಾ? ಎಂದು ಕೇಳಾಗ ಸುಚಿತ್ತಿಯು ಹೇಳಿದ್ದೇನಂದರೆ — ಹಿಂದು

ಮತದ ಬಾಧನೆಯು ಸುಳ್ಳೆಂತ, ಅದನ್ನು ಬಿಟ್ಟು, ದಿವ್ಯ ಜ್ಞಾನಸಾಗ
ರನಾದ ಯೇಸು ಕ್ರಿಸ್ತನ ಭಕ್ತನಾಗಿದ್ದೇನಲ್ಲವೋ? ನೀವು, ರಂಗಾ,
ನನ್ನ ಹಾಗೆ ಮಾಡಿ ಸೂಕ್ಷ್ಮ ಮನಸ್ಸಾಕ್ಷಿಯನ್ನು ಕ್ರಿಸ್ತನಿಂದ ಪಡಕಾಂ
ಡ ಮೇಲೆ ನಿಮಗೆ ಆ ಬಾಧನೆಯು ಮತ್ತಷ್ಟು ಅಪರಾಧವುಳ್ಳದ್ದಾ
ಗಿ ಕಾಣಿಸುವದು; ಆದರೆ ಬಹಳ ರಾತ್ರಿಯಾಯಿತು, ಬನ್ನಿ! — ಆಗ ಅವ
ರಿಬ್ಬರು ಎದ್ದು ಹೋದರು. —

೩ನೇ ಅಧ್ಯಾಯ

ದೇವರು ಪಾಪದ ಮತ್ತು ನಾಶನದ ಮೂಲವೆಂಬ ಹಿಂದು ಬೋಧನೆಯ ವಿವರವು

ಮೂರನೇ ರಾತ್ರಿಯಲ್ಲಿ ಅವರು ತಿರಿಗಿ ಸಂಚಾಷಣೆಗೆ ಕೂಡಿದ ತರುವಾಯ ಸುಚಿತ್ತಿಯು ಇಂತೆಂದನು — ಹಿಂದು ಜನರ ಗ್ರಂಥಗಳ ಪ್ರಕಾರ ದೇವರು ಮೊನೇನು ಸೃಷ್ಟಿಸಿದನೆಂತ ನಿಮಗೆ ಈಗ ಹೆಚ್ಚು ವಿವರವಾಗಿ ಹೇಳ್ಕೇನು; ಆ ಗ್ರಂಥಗಳ ಮೇರೆಗೆ ಅವನು ಮೊದಲು ಬ್ರಹ್ಮಾದಿ ದೇವತೆಗಳನ್ನು ಸೃಷ್ಟಿಸಿದನು; ಇವರು ಅವನ ಮಾಯೆಯ ಒಳ್ಳೇ ಮತ್ತು ಕೆಟ್ಟ ಮುಖ್ಯ ಶಕ್ತಿಗಳಾಗಿದ್ದಾರೆಂತ, ಶಂಕರಾಚಾರ್ಯನು ತಾನು ಶ್ವೇತಾಶ್ವತರ-ಉಪನಿಷತ್ತಿಗೆ ರಚಿಸಿದ ಭಾಷ್ಯದಲ್ಲಿ ಒಂದು ಸ್ಮೃತಿಯ ಶ್ಲೋಕದಿಂದ ಪ್ರಮಾಣ ಮಾಡಿದ್ದಾನೆ; ಅದು ಅದರ ಅಲಂನೇ ಪಾಠನಿನಲ್ಲಿ ಬರುತ್ತದೆ, ಮೊನಂದರೆ —

ಶಕ್ತಯೋ ಯಸ್ಯ ದೇವಸ್ಯ ಬ್ರಹ್ಮ-ವಿಷ್ಣು-ಶಿವಾತ್ಮಿಕಾಃ।
ಬ್ರಹ್ಮ-ವಿಷ್ಣು-ಶಿವಾ ಬ್ರಹ್ಮನ್ ಪ್ರಧಾನಾ ಬ್ರಹ್ಮ-ಶಕ್ತಯಃ॥

ಟೀಕು॥ ಆ ದೇವರ (ಅಂದರೆ ಬ್ರಹ್ಮದ) ಶಕ್ತಿಗಳು ಬ್ರಹ್ಮನೂ ವಿಷ್ಣುವೂ ಶಿವನೂ ಆಗಿವೆ; ಬ್ರಹ್ಮನೂ ವಿಷ್ಣುವೂ ಶಿವನೂ, ಬ್ರಾಹ್ಮಣನೇ, ಬ್ರಹ್ಮದ (ಮಾಯೆಯ) ಮುಖ್ಯವಾದ ಶಕ್ತಿಗಳಾಗಿದ್ದಾರೆ.—

ಇದಕ್ಕೆ ಶಂಕರಾಚಾರ್ಯನು ಟೀಕಿಗಾಗಿ ಕೂಡಿಸುವದೇನಂದರೆ —

ಸತ್ತ್ವೇನ ವಿಷ್ಣೂ ರಜಸಾ ಬ್ರಹ್ಮಾ ತಮಸಾ ಮಹೇಶ್ವರಃ।

ಟೀಕು॥ (ದೇವರು) ಸತ್ತ್ವದಿಂದ ವಿಷ್ಣುವು, ರಜಸಿನಿಂದ ಬ್ರಹ್ಮನು, ತಮಸಿನಿಂದ ಮಹೇಶ್ವರನು (ಆಗಿದ್ದಾನೆ).—

ಅದಲ್ಲದೆ ಲಿಂಗ-ಪುರಾಣದ ೧೭ನೇ ಅಧ್ಯಾಯದಲ್ಲಿರುವದೇನಂದ

ರೆ, ಬ್ರಹ್ಮನು ನೀರುಗಳ ಮೇಲೆ ಮಲಗಿರುವ ನಾರಾಯಣನನ್ನು ಕಂಡು, ಇವನ ವಿಷಯವಾಗಿ ಹೇಳುವದೇನಂದರೆ —

ಹಿರಣ್ಯ-ಗರ್ಭಾರ್ ರಜಸಾ ತಮಸಾ ಶಂಕರಃ ಸ್ವಯಂ।
ಸತ್ತ್ವೇನ ಸರ್ವ-ಗಾ ವಿಷ್ಣುಃ ಸರ್ವಾತ್ಮತ್ವೇ ಮಹೇಶ್ವರಃ॥ ೧೨॥

ಟೀಕು॥ (ನಾರಾಯಣನು) ತಾನು ರಜಸಿನಿಂದ ಹಿರಣ್ಯಗರ್ಭನೂ (ಅಂದರೆ ಬ್ರಹ್ಮನೂ *) ತಮಸಿನಿಂದ ಶಂಕರನೂ (ಅಂದರೆ ಶಿವನೂ) ಸತ್ತ್ವದಿಂದ ಸರ್ವಗತನಾದ ವಿಷ್ಣುವೂ ಸರ್ವಾತ್ಮತ್ವದಲ್ಲಿ ಮಹೇಶ್ವರನೂ (ಅಂದರೆ ಪರಮಾತ್ಮನೂ) ಆಗಿದ್ದಾನೆ.—

ಮತ್ತು ಧರ್ಮ-ರಾಜ-ದ್ವಿಷ್ಠಿತನ ವೇದಾಂತ-ಪರಿಚಾಷೆಯಲ್ಲಿ ಹೇಳಿರುವದೇನಂದರೆ —

ಸ ಚ ಪರಮೇಶ್ವರ ಏಕೋಽಪಿ ಸ್ವೋಽಪಾಧಿ-ಋತ-ಮಾಯಾ-ನಿಷ್ಪ-ಸತ್ಪ-ರಜಸ್-ತಮೋ-ಗುಣ-ಚೇದೇನ ಬ್ರಹ್ಮ-ವಿಷ್ಣು-ಮಹೇಶ್ವರಾದಿ-ಶಬ್ದ-ವಾಚ್ಯತಾಂ ಭಜತೇ॥

ಟೀಕು॥ ಆ ಪರಮೇಶ್ವರನು ಒಬ್ಬನೇ ಆಗಿದ್ದರೂ ತನ್ನ ಉಪಾಧಿ (ಅಂದರೆ ವಿಶೇಷಲಕ್ಷಣ ಅಥವಾ ವೇಷ) ಆದ ಮಾಯೆಯಲ್ಲಿ ನಿಂತು ಕೊಂಡಿರುವ ಸತ್ತ್ವ ರಜಸು ತಮಸು ಎಂಬ ಗುಣಗಳ ಭೇದದಿಂದ ಬ್ರಹ್ಮ ವಿಷ್ಣು ಮಹೇಶ್ವರ ಇತ್ಯಾದಿ ಹೆಸರುಗಳನ್ನು (ಸೃಷ್ಟಿಯಲ್ಲಿ) ಪಡಕೊಳ್ಳುತ್ತಾನೆ.—

ಈ ವಾಕ್ಯವು ಕಲ್ಕತ್ತದಲ್ಲಿ ಛಾಪೆಯಾದ ಆ ಗ್ರಂಥದ ಒನೇ ಪಾನಿನಲ್ಲಿ ಅದೆ; ನಾವೀರಿ, ರಂಗಾ, ಹಿಂದು ಶಾಸ್ತ್ರಗಳ ಪ್ರಕಾರ ಪರಮಾತ್ಮನು ತಾನು ಎಲ್ಲಾ ಕೆಟ್ಟಿದ್ದರ ಶೆಲೆಯು ಸಹ ಆಗಿದ್ದು, ತನ್ನ ಮಟ್ಟವೊದಲಿನ ಸೃಷ್ಟಿಯಾದ ಶ್ರಿಮೂರ್ತಿಯಲ್ಲಿ ತನ್ನ ಕೆಟ್ಟ ಗುಣಗಳನ್ನು ಸಹ ಪ್ರತ್ಯಕ್ಷ ಮಾಡಿ, ಮೊದಲಿನ ಸೃಷ್ಟಿಯಿಂದಲೂ ಕೀರ್ತಿಯುಳ್ಳವನಾಗದೆ, ದೂಷಣೆಗೆ ಒಳಗಾಗುತ್ತಾನೆ (ಹಿಂದು ವೇದ ಶಾಸ್ತ್ರಗಳ ಪ್ರಕಾರ ಪ್ರಕೃತಿಯೂ ಆಗಿರುವ ಬ್ರಹ್ಮವು ಆಯಾ ವೇದ ಶಾಸ್ತ್ರಗಳ ಮೇರೆಗೆ ತಾನೇ ಆ ಶ್ರಿ

* ಈ ಗ್ರಂಥದ ೫ನೇ ಪಾನಿನ ವಿಷ್ಣು-ಪುರಾಣದ ೧ನೇ ಅಂಕದ್ದನ್ನು ನಾವೀರಿ.

ಮೂರ್ತಿಯಾಗಿದೆಂಬ ವಾದವು ಅಷ್ಟೇ ದೂಷ್ಯವಾದದ್ದಾಗಿದೆ, ಈ ವಿಷಯವಾಗಿ ಮುಂದೆ ಇನ್ನು ಒಂದು ಮಾತು ಬರುವದು); ಹಿಂದು ಶಾಸ್ತ್ರಗಳ ಪ್ರಕಾರ ಅಂಥಾ ವಿಪರೀತ ಶ್ರಿಮೂರ್ತಿಯು ಸೃಷ್ಟಿಯಾಯಿತು. ಆದರೆ ಅದರ ಸೃಷ್ಟಿಕರ್ತನು ಯಾರೆಂಬದಕ್ಕೆ ಆಯಾ ಶಾಸ್ತ್ರಗಳಲ್ಲಿ ಹಾಚ್ಚೆಕಿಚ್ಚುಳ್ಳ ತರ್ಕವು ನಡೆಯುತ್ತದೆ; ಇದನ್ನು ಸ್ವಲ್ಪ ಸೂಚಿಸುವದಕ್ಕಾಗಿ ಕೆಲವು ಗ್ರಂಥಗಳನ್ನು ಹೇಳುತ್ತೇನೆ; ಹ್ಯಾಗಂದರೆ ಮಹಾಭಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಇರುವದೇನಂದರೆ —

ಯಸ್ಯ ಪ್ರಸಾದ-ಜಾಯೀ ಬ್ರಹ್ಮಾ ರುದ್ರಶ್ ಚ ಕ್ರೋಧ-ಸಂಭವಃ । ೧೫೧೪೦ ।

ಟೀಕು॥ ಅವನ (ಅಂದರೆ ನಾರಾಯಣನ) ಪ್ರಸಾದದಿಂದ ಬ್ರಹ್ಮನು ಹುಟ್ಟಿದನು, ಅವನ ಕ್ರೋಧದಿಂದ ರುದ್ರನು ಉಂಟಾದನು.—

ಆದರೆ ಇದಕ್ಕೆ ವಿರೋಧವಾಗಿ ಮಹಾಭಾರತದ ಅನುಶಾಸನ-ಪರ್ವದಲ್ಲಿ ಶಿವನು ಆದಿಕರ್ತನೆಂತ ಹೇಳಿ ಅದೆ, ಏನಂದರೆ —

ಸೋಽಸೃಜದ್ ದಕ್ಷಿಣಾದ್ ಅಂಗಾದ್ ಬ್ರಹ್ಮಾಣಂ ಲೋಕ-ಸಂಭವಂ।
ವಾಮ-ಪಾರ್ಶ್ವಾತ್ ತಥಾ ವಿಷ್ಣುಂ ಲೋಕ-ರಕ್ಷಾರ್ಥಮ್ ಈಶ್ವರಃ
॥ ೮೪೦ ॥

ಟೀಕು॥ ಈಶ್ವರನು (ಅಂದರೆ ಶಿವನು) ತನ್ನ ಬಲಪಾರ್ಶ್ವದಿಂದ ಲೋಕಗಳ ತಂದೆಯಾದ ಬ್ರಹ್ಮನನ್ನೂ, ಎಡಪಾರ್ಶ್ವದಿಂದ, ಲೋಕಗಳ ರಕ್ಷಣಾರ್ಥಕ್ಕಾಗಿ, ವಿಷ್ಣುವನ್ನೂ ಸೃಷ್ಟಿಸಿದನು.—

ಆದರೆ ಹರಿ-ವಂಶದ ಪ್ರಕಾರ ಬ್ರಹ್ಮನು ಶಿವನನ್ನು ಸೃಷ್ಟಿಸಿದನು, ಹ್ಯಾಗಂದರೆ —

ತತೋಽಸೃಜತ್ ಪುನರ್ ಬ್ರಹ್ಮಾ ರುದ್ರಂ ರೋಷಾತ್ಮ-ಸಂಭವಂ । ೪೩ ।

ಟೀಕು॥ ಆ ಮೇಲೆ ಬ್ರಹ್ಮನು ತನ್ನ ಕೋಪದ ಮಗನಾದ ರುದ್ರನನ್ನು ಸೃಷ್ಟಿಸಿದನು.—

ಮತ್ತು ಆ ಶ್ರಿಮೂರ್ತಿಯವರು ಪರಮಾತ್ಮನ ಮಾಯೆಯಿಂದ ಹುಟ್ಟಿದ ಇನ್ನೊಂದು ರೀತಿಯು ಕಾಣುತ್ತದೆ, ಹ್ಯಾಗಂದರೆ ಮೇಲೆ (ಗಂನೇ

ಪಾನಿನಲ್ಲಿ) ಪ್ರಕೃತಿಯ ವಿಷಯವಾದ ಒಂದು ಶ್ಲೋಕವನ್ನು ಮತ್ಸ್ಯ-ಪು
ರಾಣದಿಂದ ತೆಗೆದು ಹೇಳಿದೆನು, ಅದಕ್ಕಿಂತ ಈಚೆಯ ಶ್ಲೋಕವೇನಂದರೆ —

ಗುಣೇಭ್ಯಃ ಕ್ಷ್ಣೀಭೃಮಾನೇಭ್ಯಸ್ ತ್ರಯೋ ದೇವಾ ವಿಜಜ್ಞಿರೇ।
ವಿಕಾ ಮೂರ್ತಿಸ್ ತ್ರಯೋ ದೇವಾ ಬ್ರಹ್ಮ-ವಿಷ್ಣು-ಮಹೇಶ್ವರಾಃ॥

ಟೀಕು॥ (ಪರಮಾತ್ಮನ ಮಾಯೆಯೊಡನೆ) ಉಕ್ಕ್ಯೇರುವ (ಮೂರು) ಗುಣ
ಗಳಿಂದ ಮೂರು ದೇವರುಗಳು ಹುಟ್ಟಿದರು,—ಒಂದೇ ಮೂರ್ತಿಯು,
ಮೂರು ದೇವರುಗಳು—(ರಜಸಾದ) ಬ್ರಹ್ಮ (ಸತ್ತ್ವವಾದ) ವಿಷ್ಣು (ತಮ
ಸಾದ) ಮಹೇಶ್ವರ. —

ಈ ದೇವರುಗಳು, ತಮ್ಮಾ, ಮಾಯೆಯು ಸಹ ಆಗಿರುವ ಆ ದೇವರ ಅಥ
ವಾ ಅವನ ಶ್ರಿಗುಣವುಳ್ಳ ಮಾಯೆಯ ಚಾಚ್ಚಲುಮಕ್ಕಳು; ಈ ತನ್ನ
ಚಾವದ ಮಕ್ಕಳ ನಡತೆಯಿಂದ ಆ ಪರಮಾತ್ಮನು ಕೀರ್ತಿ ಹಾಂದಲಿಲ್ಲ
ವೆಂತ, ಹಿಂದು ದೇಶದ ಸಕಲ ಜನರು ಹೇಳುತ್ತಾರೆ;

ಯಥಾ ದೇಶಸ್ ತಥಾ ಚಾಷಾ ಯಥಾ ರಾಜಾ ತಥಾ ಪ್ರಜಾ।
ಯಥಾ ಮಾತಾ ತಥಾ ಕನ್ಯಾ ಯಥಾ ಬೀಜಂ ತಥಾಂಕುರಂ॥

ಎಂಬ ಗಾದೆಯ ಪ್ರಕಾರ ಅವರು ತಂದೆಯಿಂದ ಪಡಕಾಂಡ ಅಜ್ಞಾನ
ವೆಂಬ ಮಾಯೆಯಿಂದ ಮರುಳಾಗಿ ನಡಕಾಂಡರೆಂತ ಹೇಳುತ್ತದೆ;
ಹಿಂದು ವೇದ ಶಾಸ್ತ್ರಗಳ ಅನೇಕ ಕಥೆಗಳು ಆ ಶ್ರಿಮೂರ್ತಿಯ (ಅ
ಥವಾ ಆ ಶ್ರಿಮೂರ್ತಿಯಾಗಿರುವ ಪರಮಾತ್ಮನ) ನೀಚತನವನ್ನು ಹೇ
ಳುತ್ತವೆ*; ಆ ಶಾಸ್ತ್ರಗಳ ಪ್ರಕಾರ ಪರಮಾತ್ಮನಿಂದ ಬಂದ ಬೇರೆ ಮ
ಕ್ಕಳಲ್ಲಿ ಕೃಷ್ಣನು ಮುಖ್ಯನೆನ್ನಿಸಿ ಕಾಳ್ಳುತ್ತಾನೆ; ಇವನಿಗಾದರೂ ಆ ತಂದೆ
ಯು ಒಳ್ಳೇ ಗುಣಗಳನ್ನು ಕಾಟ್ಟಿನಾ, ತಮ್ಮಾ? ನಾರಾಯಣನ ಒಂ
ದು ಕಪ್ಪು ರಾಮದಿಂದ ಹುಟ್ಟಿದ ಕೃಷ್ಣನು † ಹರಿ-ವಂಶದ ಪ್ರಕಾರವೂ
ಚಾಗವತ-ಪುರಾಣದ ಪ್ರಕಾರವೂ ನಾರದ-ಪಂಚ-ರಾತ್ರದ ಪ್ರಕಾರವೂ
ಅತ್ಯಶುದ್ಧನಾಗಿ ನಡೆದನು; ಚಾಗವತ-ಪುರಾಣದ ೧೦ನೇ ಸ್ಕಂಧದ

* ಉಪಸ್ಕಂಧದ ೪, ೬, ೭ನೇ ಅಂಕೆಯದನ್ನು ನಾಡಿರಿ.
† ಉಪಸ್ಕಂಧದ ೯ನೇ ಅಂಕೆಯದನ್ನು ನಾಡಿರಿ.

೩೫ನೇ ಅಧ್ಯಾಯದ ಪ್ರಕಾರ ಪರೀಕ್ಷಿದ್ ರಾಯನು ಶುಕ ಮುನಿಯ ಬಳಿಯಲ್ಲಿ ಕೃಷ್ಣನ ದುಷ್ಕೃತ್ಯಗಳ ವಿಷಯವಾಗಿ ತಾನು ಪಡುವ ಸಂಶಯವನ್ನು ಹೇಳಲಾಗಿ ಈ ಮುನಿಯು ಉತ್ತರವಾಗಿ ಮಾಡಿದ ವ್ಯರ್ಥ ನೆವನವುಳ್ಳ ದೂಷ್ಯ ಪ್ರಸಂಗದಲ್ಲಿ ಈ ಮಾತು ಶಿಕ್ಕುತ್ತದೆ, ಏನಂದರೆ —

ಈಶ್ವರಾಣಾಂ ವಚಃ ಸತ್ಯಂ ತಥೈವಾಚರಿತಂ ಕ್ವಚಿತ್ । ೩೨ ।

ಟೀಕು॥ (ಕೃಷ್ಣಾದಿ) ಈಶ್ವರರುಗಳ ಮಾತು ಸತ್ಯವಾಗಿದೆ, ಆಗಿಂದಾಗ್ಯೆ ಅವರ ನಡತೆಯು ಸಹ (ಸತ್ಯವಾದೀತು).—

ಹೀಗೆ, ರಂಗಾ, ಆ ಮುನಿಯು ತಾನೇ, ಉಳಿದ ದೇವರುಗಳ ನಡತೆಯಂತೆ ಕೃಷ್ಣನದು ಸಹ ಕೆಟ್ಟದ್ದಾಗಿತ್ತೆಂತ, ಅರಿಕೆ ಮಾಡಿದನು.

ಆಗ ರಂಗನು ಹೇಳಿದ್ದೇನಂದರೆ — ಅದು ನೀಚ ಮಾತೇ; ಅಣ್ಣಾ, ಈಶ್ವರರುಗಳ ಮೂರು ಸತ್ಯವಾಗಿದೆಂಬದು ಸಹ ಆ ಪುರಾಣವನ್ನು ರಚಿಸಿದ ಪಂಡಿತನ ವ್ಯರ್ಥ ನೆವನದ ಮಾತೆಂತ, ನಾನು ನಮ್ಮಿಬ್ಬರಿಗೆ ನಡೆದ ಸಂಜಾಷಣೆಯ ಮೇಲೆ ತಿಳುಕಾಂಡಿದ್ದೇನೆ; ನೀವು ಹೀಗೆ ನೆನಸುವದಿಲ್ಲವೋ? — ಸುಚಿತ್ತಿಯು ಅಂದದ್ದೇನು — ನೀವು ತಿಳುಕಾಂಡದ್ದೇ ಸರಿ, ನಿಶ್ಚಯ! ನಾನು ಈ ವರಿಗೆ ಗ್ರಂಥಗಳನ್ನು ತೆಗೆದು ಹೇಳುತ್ತಾ ಬಂದ ವೇದ ಶಾಸ್ತ್ರಗಳು ದೇವರಿಗೆ ದೂಷಿಸುವದರಿಂದ ಸುಳ್ಳಾಗಿವೆ, ಮತ್ತು ಅವನ್ನು ರಚಿಸಿದವರು ಯಾರಾದರೂ ಜ್ಞಾನಹೀನತ್ವದಿಂದಲಾಗಲಿ ದೇವರ ಅಚಯದಿಂದಲಾಗಲಿ ಸುಳ್ಳಾಡಿದರು; ಹ್ಯಾಗಾದರೂ, ದೇವರ ಮಕ್ಕಳು ಸುಳ್ಳುಗಾರರಾಗಿ ಸಹ ಹುಟ್ಟಿದರೆಂತ, ವೇದವು ಹೇಳುತ್ತದೆ; ಹ್ಯಾಗಂದರೆ ಶುಕ್ಲ-ಯಜುರ್-ವೇದದ ಶತಪಥ-ಬ್ರಾಹ್ಮಣದ ೧ನೇ ಕಾಂಡದ ೫ನೇ ಅಧ್ಯಾಯದ ೧ನೇ ಬ್ರಾಹ್ಮಣದಲ್ಲಿರುವದೇನಂದರೆ —

ದೇವಾಶ್ ಚ ಅಸುರಾಶ್ ಚ ಉಭಯೇ ಪ್ರಾಚಾಪತ್ಯಾಃ ಪ್ರಜಾಪತೇಃ ಪಿತುರ್ ದಾಯಮ್ ಉಪೇಯುರ್ ವಾಚಮ್ ವಿವ ಸತ್ಯಾಽನೃತೇ ಸತ್ಯಂ ಚೈವ ಅನೃತಂ ಚ । ತೇ ಉಭಯೇ ವಿವ ಸತ್ಯಮ್ ಅವದನ್ನ್ ಉಭಯೇಽನೃತಂ । ೩೨ ।

ಟೀಕು॥ ಪ್ರಜಾಪತಿಯ ಮಕ್ಕಳಾದ ದೇವರುಗಳೂ ಅಸುರರೂ ಇವರಿಬ್ಬರು ತಂದೆಯಾದ ಪ್ರಜಾಪತಿಯ ಬಾಧ್ಯತೆಯಾಗಿರುವ ಸತ್ಯವೂ ಸು

ಳ್ಳೂ ಆದಂಥ ವಾಕ್ಯವನ್ನು-ಸತ್ಯ ಸುಳ್ಳುಗಳನ್ನೇ-ಹೊಂದಿದರು; ಅವರಿಬ್ಬರು ಸತ್ಯವನ್ನೂ ಅವರಿಬ್ಬರು ಸುಳ್ಳನ್ನೂ ಆಡಿದರು.—

ಶಿವನೆಂಬವನು ಸುಳ್ಳಾಡಿದನೆಂಬದಕ್ಕೆ ಒಂದು ಸ್ಪಷ್ಟ ಸಾಕ್ಷಿಯನ್ನು ಕೇಳಿರಿ; ಹ್ಯಾಗಂದರೆ ಪದ್ಮ-ಪುರಾಣದ ಉತ್ತರ-ಖಂಡದ ಕಡೆಯಲ್ಲಿ ಶಿವನ ಮತ್ತು ಪಾರ್ವತಿಯ ಒಂದು ಸಂಜಾಷಣೆಯು ಅದೆ; ವಿಜ್ಞಾನ-ಭಿಕ್ಷುವು ರಚಿಸಿ ಕಲ್ಕತ್ತದಲ್ಲಿ ಛಾಪೆಯಾದ ಸಾಂಖ್ಯ-ಪ್ರವಚನ-ಭಾಷ್ಯದ ಮೂರನೇ ಪಾನು ಮೊದಲ್ಗೊಂಡ ಪಾನುಗಳಲ್ಲಿ ಆ ಸಂಜಾಷಣೆಯ ಒಂದು ಅಂಶವು ಉಂಟು, ಇದರಲ್ಲಿಯ ಎರಡು ಶ್ಲೋಕಗಳು ಯಾವವಂದರೆ—

ಮಾಯಾ-ವಾದಮ್ ಅಸಚ್-ಛಾಸ್ತ್ರಮ್ ಪ್ರಚ್ಛನ್ನಂ ಬೌದ್ಧಮ್ ಏವ ಚ।
ಮಯೈವ ಕಥಿತಂ ದೇವಿ ಕಲೌ ಬ್ರಾಹ್ಮಣ-ರೂಪಿಣಾ॥
ವೇದಾರ್ಥ-ವನ್ ಮಹಾ-ಶಾಸ್ತ್ರಂ ಮಾಯಾ-ವಾದಮ್ ಅವೈದಿಕಂ।
ಮಯೈವ ಕಥಿತಂ ದೇವಿ ಜಗತಾಂ ನಾಶ-ಕಾರಣಾತ್॥

ಟೀಕು॥ನಾನೇ, ದೇವಿಯೇ (ಅಂದರೆ ಪಾರ್ವತಿಯೇ), ಒಬ್ಬ ಬ್ರಾಹ್ಮಣನ ರೂಪ ಧರಿಸಿ ಕೊಂಡು, ಮಾಯಾವಾದವೂ ವೇಷ ಹಾಕಿ ಕೊಂಡ ಬೌದ್ಧ ಬೋಧನೆಯೂ ಆಗಿರುವಂಥ ಸುಳ್ಳು ಶಾಸ್ತ್ರವನ್ನು ಕಲಿಯುಗದಲ್ಲಿ ತಿಳಿಸಿದೆನು; ನಾನೇ, ದೇವಿಯೇ, ವೇದಾರ್ಥದ ಹಾಗೆ ಕಾಣಿಸುವಂಥ, ಆದರೆ ವೇದಗಳಿಗೆ ಅನುಸಾರವಲ್ಲದಂಥ (??), ಕೊಡ್ಡ ಶಾಸ್ತ್ರವನ್ನು, ಲೋಕಗಳನ್ನು ನಾಶನ ಮಾಡುವದಕ್ಕಾಗಿ, ತಿಳಿಸಿದೆನು.—

ಪರಮಾತ್ಮನು, ತಮ್ಮಾ, ಅಂಥಾ ದುರ್ಜನವದವರನ್ನು ತಾನಾಗಿರುವ ಪ್ರಕೃತಿಯಿಂದ ಅಂಥವರಾಗಿಯೇ ಸೃಷ್ಟಿಸಿದನೆಂಬ ಹಿಂದು ಬಾಧೆಯೂ, ಆ ಕೆಟ್ಟ ತ್ರಿಮೂರ್ತಿಯವರಾದಿ ದೇವತೆಗಳು ಮತ್ತು ಪರಮಾತ್ಮನು ಒಂದೇ ಎಂಬ ಹಿಂದು ಬಾಧೆಯೂ ಒಂದೇ ದೂಷಣಾರ್ಥವುಳ್ಳವಾಗಿವೆ; ಆ ಕಡೇ ಬಾಧೆಗೆ ಕೆಲವು ಸಾಕ್ಷೀ ಮಾತುಗಳನ್ನು ಕೇಳಿರಿ; ಅಥರ್ವ-ವೇದದ ಕೈವಲ್ಯ-ಉಪನಿಷತ್ತಿನ ಏನೇ ಶ್ಲೋಕದ ಕಡೇ ಮಾತೇನಂದರೆ—

ಸ ಬ್ರಹ್ಮಾ ಸ ಶಿವಃ ಸೇಽನ್ದ್ರಃ ಸಾಽಕ್ಷರಃ ಪರಮಃ ಸ್ವರಾಟ್। ೭।

ಟೀಕು॥ ಅವನು (ಅಂದರೆ ರುದ್ರ ಅಥವಾ ನೀಲಕಂಠನೆಂಬ ಪರಮಾತ್ಮನು) ಬ್ರಹ್ಮನೂ ಶಿವನೂ ಇಂದ್ರನೂ ಕ್ಷರವಾಗದಂಥ ಪರಮ ಸ್ವರಾಜನೂ ಆಗಿದ್ದಾನೆ.—

ಮತ್ತು ಕೃಷ್ಣ-ಯಜುರ್-ವೇದದ ತೈತ್ತಿರೀಯ-ಆರಣ್ಯಕದ ೧೦ನೇ ಅಧ್ಯಾಯದ ೧೩ನೇ ಅನುವಾಕದ ೧೨ನೇ ಶ್ಲೋಕದ ಕಡೇ ಮಾತೇನಂದರೆ —

ಸ ಬ್ರಹ್ಮಾ ಸ ಶಿವಃ ಸ ಹರಿಃ ಸೇಽನ್ದ್ರಃ ಸಾಽಕ್ಷರಃ ಪರಮಃ ಸ್ವರಾಟ್।೭।

ಟೀಕು॥ ಅವನು (ಅಂದರೆ ನಾರಾಯಣನೆಂಬ ಪರಮಾತ್ಮನು) ಬ್ರಹ್ಮನೂ ಶಿವನೂ ಹರಿಯೂ ಇಂದ್ರನೂ ಕ್ಷರವಾಗದಂಥ ಪರಮ ಸ್ವರಾಜನೂ ಆಗಿದ್ದಾನೆ.—

ಅವೇ ಮಾತು ಅಥರ್ವ-ವೇದದ ಮಹಾ-ಉಪನಿಷತ್ತಿನ ಳನೇ ಅನುವಾಕದಲ್ಲಿ ಅವೆ; ಪರಮಾತ್ಮನ ಸ್ವಭಾವವುಳ್ಳಂಥ, ಅವನೇ ಆಗಿರುವಂಥ ಎಲ್ಲಾ ದೇವರುಗಳ ನಡತೆಯು ಬಹಳ ದೂಷ್ಯವಾದದ್ದೆಂದು ವೇದ ಶಾಸ್ತ್ರಗಳಲ್ಲಿ ಕಾಣಿಸಿದ ಮೇಲೆ, ಅವರನ್ನು ಸುಳ್ಳೆಂತ ತೃಜಿಸಿ ಬಿಡಿರಿ, ಉತ್ತಮ ಗೃಹಸ್ಥರೇ! ಎಂಬಹಾಗಿ ಹಿಂದು ಜನರಿಗೆ ಅಪ್ಪಣೆಯಾಯಿತಾ? ಅಕಟಾ, ಇಲ್ಲ; ಹ್ಯಾಗಂದರೆ ಮಹಾಭಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವದೇನಂದರೆ —

ಕೃತಾನಿ ಯಾನಿ ಕರ್ಮಾಣಿ ದೈವತೈರ್ ಮುನಿಭಿಸ್ ತಥಾ।
ನ ಚರೇತ್ ತಾನಿ ಧರ್ಮಾತ್ಮಾ ಶ್ರುತ್ವಾ ಚಾಪಿ ನ ಕುತ್ಸಯೇತ್
॥೧೦೮೫೯॥

ಟೀಕು॥ ದೇವತೆಗಳೂ ಮುನಿಗಳೂ ಮಾಡಿದ ಕರ್ಮಗಳನ್ನು ಧರ್ಮಾತ್ಮನು (ಅಧರ್ಮವೆಂತ) ನಡಿಸನೆ ಇರಲಿ, ಮತ್ತು ಅವುಗಳ ವಿಷಯವಾಗಿ ಕೇಳಿದರೂ ಬೈಯದೆ ಇರಲಿ! (ಮತ್ತು ಆ ಅಸಹ್ಯ ಮೂರ್ತಿಗಳ ಪೂಜೆ ಮಾಡಲಿ! ಎಂಬಂತೆ).—

ನಿಮಗೇನು ತಾ೧ಚುತ್ತದೆ, ತಮ್ಮಾ? ನೀವು ಧೈರ್ಯವಾಗಿ ಪರಮಾತ್ಮನು ಅಶುದ್ಧನೆಂಬ ಹಿಂದು ಬಾ೧ಥನೆಯು ಬರೇ ಸುಳ್ಳೆಂದಿರಿ; ಅದೇ ಪ್ರಕಾರ, ಹಿಂದು ಜನರರಿಯದ ಪರಿಶುದ್ಧ ಜಾವದ ಪರಮಾತ್ಮನಿಂದ ಶುದ್ಧ ಜಾವದ ಮಕ್ಕಳು ಮಾತ್ರ ನಿರ್ಮಾ೧ವಾಗ ಬಹುದಾದ್ದರಿಂದ, ಆ ದೇವತೆಗಳೆಲ್ಲರ ವಿಷಯವಾದ ಬಾ೧ಥನೆಯು ಸಹ ಬರೇ ಸುಳ್ಳೆಂತ, ಒಡಂಬಡುತ್ತೀರಾ೧? — ಆಗ ಅವನ ತಮ್ಮನು, ಪೂರಾಗಿ ಒಡಂಬಡುತ್ತೇನೆಂದು, ಉತ್ತರ ಕಾಡಾ೧ ಸುಚಿತ್ತಿಯು ಮತ್ತಿಂತೆಂದನು — ಹಿಂದು ಗ್ರಂಥಗಳು ದೇವರು ಎಲ್ಲಾ ಅಶುದ್ಧತ್ವದ ಶೆಲೆಯೂ ಕಾರ೧ವೂ ಎನ್ನುವಂಥಾದ್ದು ಅವುಗಳು ದೇವರು ಪಿಶಾಚರುಗಳ ತಂದೆಯೆಂತ ಪ್ರಸಂಗಿಸುವದರಿಂದಲೂ ಗಾ೧ಚರವಾಗುತ್ತದೆ; ಇವರನ್ನೂ ಮುಂತಾದ್ದನ್ನೂ ಹುಟ್ಟಿಸಲಿಕ್ಕೆ ಪರಮಾತ್ಮನು ಬ್ರಹ್ಮನಾದನಂತೆ*; ಹ್ಯಾಗಂದರೆ ಮಹಾ-ಚಾರತದ ಪನ-ಪರ್ವದಲ್ಲಿ ಬರೆದಿರುವದೇನಂದರೆ —

ತತಶ್ ಚತುರ್-ಮುಖೋ ಬ್ರಹ್ಮಾ ನಾಭಿ-ಪದ್ಮಾದ್ ವಿನಿಸೃತಃ
॥ ೧೫೮೨೧೧ ॥

ಶೂನ್ಯಂ ದೃಷ್ಟ್ವಾ ಜಗತ್ ಕೃತ್ಸ್ನಂ ಮಾನಸಾನ್ ಆತ್ಮನಃ ಸಮಾನ್।
ತತೋ ಮರೀಚಿ-ಪ್ರಮುಖಾನ್ ಮಹ-ರ್ಷೀನ್ ಅಸೃಜನ್ ನಮಃ
॥ ೧೫೮೨೧೨ ॥

ತೇ೭ಸೃಜನ್ ಸರ್ವ-ಭೂತಾನಿ ತ್ರಸಾನಿ ಸ್ಥಾವರಾ೧ ಚ।
ಯಕ್ಷ-ರಾಕ್ಷಸ-ಭೂತಾನಿ ಪಿಶಾಚಾ೭ರಗ-ಮಾನುಷಾನ್ ॥ ೧೫೮೨೧೩ ॥

ಟೀಕು॥ ತರುವಾಯ ನಾಲ್ಕು ತಲೆಯುಳ್ಳ ಬ್ರಹ್ಮನು (ನಾರಾಯ೧ನ) ನಾಭಿಯ ಪದ್ಮದಿಂದ (ಅಂದರೆ ಪ್ರಕೃತಿಯಿಂದ) ಹೊರಟು, ಜಗತ್ತೆಲ್ಲಾ ಶೂನ್ಯವಾಗಿರುವದನ್ನು ನೋಡಿ, ಬಳಿಕ ಮರೀಚಿ ಮುಂತಾದ ಬಂಭತ್ತು ಮಂದಿಯಾದಂಥ, (ತನ್ನ) ಮನಸ್ಸುಳ್ಳಂಥ, ತನಗೆ ಹೋಲುವಂಥ ಮಹಾ ಋಷಿಗಳನ್ನು ಸೃಷ್ಟಿಸಿದನು; ಇವರು ಜಂಗಮವಾದ ಮತ್ತು ಸ್ಥಾವರವಾದ ಎಲ್ಲಾ ಭೂತಗಳನ್ನು — (ಅಂದರೆ) ಯೆಕ್ಷರನ್ನೂ ರಾಕ್ಷಸರನ್ನೂ ಪಿಶಾಚರುಗಳನ್ನೂ ಸರ್ಪಗಳನ್ನೂ ಮನುಷ್ಯರನ್ನೂ ಸೃಷ್ಟಿಸಿದರು. —

---

* ಈ ಗ್ರಂಥದ ೩೦ನೇ ಪಾನಿನಲ್ಲಿ ವಿಷ್ಣುಪುರಾ೧ದ್ದನ್ನು ನೋಡಿರಿ.

ಇದೇ ವಿವರವು ಮನು-ಧರ್ಮ-ಶಾಸ್ತ್ರದ ೧ನೇ ಅಧ್ಯಾಯದಲ್ಲಿ ೩೪ನೇ ಶ್ಲೋಕದಿಂದ ೩೭ನೇ ಶ್ಲೋಕದ ವರೆಗೆ ಶಿಕ್ಕುತ್ತದೆ; ಇಂಥಾ ಬಾಧನೆಯುಳ್ಳ ಶಾಸ್ತ್ರಗಳು ಅಬದ್ಧವೆಂದು, ಚಿಕ್ಕ ಮಕ್ಕಳು ತಿಳುಕಾಂಡಾರಲ್ಲ, ತಮ್ಮಾ? — ಇವನು — ಸಂಶಯವಿಲ್ಲ! ಅಯ್ಯಯ್ಯಾ! ಇನ್ನೇನು ಹೇಳಲಿ? ಎಂತ ಒದರಿದಾಗ ಸುಚಿತ್ತಿಯು ಮತ್ತು ಹೀಗೆ ವಿವರಿಸಿದನು-ನಿಮ್ಮಂಥವರು, ತಮ್ಮಾ, ತಮ್ಮ ಮಕ್ಕಳು ಎಂದೆಂದಿಗೂ ಬದುಕಿ ಬಾಳಲಿ! ಎಂದು ಅಪೇಕ್ಷಿಸುತ್ತಾರೆ, ಅಲ್ಲವೋ? ಆದರೆ ಹಿಂದು ಶಾಸ್ತ್ರಗಳ ಪ್ರಕಾರ ದೇವರು, ನಮ್ಮ ಅಮಿತ ಕರುಣೆಯುಳ್ಳ, ಜೀವವಾಗಿರುವ ದೇವರು, ತನ್ನ ಮಕ್ಕಳನ್ನು, ಕಾರಣವಿಲ್ಲದೆ ಕಾಂದು ಬಿಡಲಿಕ್ಕಾಗಿ, ಹುಟ್ಟಿಸುತ್ತಾನೆ; ಹಿಂದು ಶಾಸ್ತ್ರಗಳ ಪ್ರಕಾರ ಸ್ವಯಂಭುವು ಮರಣದಶೆಲೆಯೇ! ಹ್ಯಾಗಂದರೆ ಸಾಮ-ವೇದದ ವಂಶ-ಬ್ರಾಹ್ಮಣದ ೨ನೇ ಖಂಡದಲ್ಲಿ ಹೇಳಿರುವದೇನಂದರೆ —

ಅಗ್ನಿರ್ ಇನ್ದ್ರಾದ್ ಇನ್ದ್ರೋ ವಾಯೋರ್ ವಾಯುರ್ ಮೃತ್ಯೋರ್ ಮೃತ್ಯುಃ ಪ್ರಜಾಪತೇಃ ಪ್ರಜಾಪತಿರ್ ಬ್ರಹ್ಮಣೋ ಬ್ರಹ್ಮಾ ಸ್ವಯಮ್ಭೂಃ ॥೬೦॥

ಟೀಕು॥ ಅಗ್ನಿಯು ಇಂದ್ರನಿಂದ, ಇಂದ್ರನು ವಾಯುವಿನಿಂದ, ವಾಯು ಮೃತ್ಯುವಿನಿಂದ, ಮೃತ್ಯುವು ಪ್ರಜಾಪತಿಯಿಂದ, ಪ್ರಜಾಪತಿಯು ಬ್ರಹ್ಮನಿಂದ (ಹುಟ್ಟೋ[illegible]ವಾಯಿತು); ಬ್ರಹ್ಮನು (ಅಥವಾ ಬ್ರಹ್ಮವು) ಸ್ವಯಂಭುವಾಗಿದ್ದಾನೆ —

ಅದಲ್ಲದೆ ಋಗ್-ವೇದದ ಐತರೇಯ-ಬ್ರಾಹ್ಮಣದ ೨ನೇ ಆರಣ್ಯಕದ ೪ನೇ, ೫ನೇ, ೬ನೇ ಅಧ್ಯಾಯಗಳಾದ ಐತರೇಯ-ಉಪನಿಷತ್ತಿನ ೧ನೇ ಅಧ್ಯಾಯದ ೧ನೇ ಖಂಡದ ೨ನೇ ಶ್ಲೋಕವು ಹೇಳುವದೇನಂದರೆ —

ಸ ಇಮಾಲ್ ಲೋಕಾನ್ ಅಸೃಜತ ಅಮ್ಭೋ ಮರೀಚೀರ್ ಮರಮ್ ಆಪಃ***ಪೃಥಿವೀ ಮರಃ। ೨। ಶಾಂಕರ-ಭಾಷ್ಯೇ ಪೃಥಿವೀ ಮರಾ ಮ್ರಿಯನ್ತೇzಸ್ಮಿನ್ ಋತಾನೀzತೀzತಿ।

ಟೀಕು॥ ಅವನು (ಅಂದರೆ ಪರಮಾತ್ಮನು) ಈ ಲೋಕಗಳನ್ನು—(ಮೇಲಿರುವ) ನೀರಿನ ಲೋಕವನ್ನೂ ಕಿರಣಗಳ ಲೋಕವನ್ನೂ ಮರಣದ ಲೋಕವನ್ನೂ (ಕೆಳಗಿರುವ) ನೀರುಗಳ ಲೋಕವನ್ನೂ ಸೃಷ್ಟಿಸಿದನು; ಪೃಥ್ವಿಯು ಮರಣದ ಲೋಕವಾಗಿದೆ.—ಶಂಕರಾಚಾರ್ಯನ ಭಾಷ್ಯದಲ್ಲಿ—ಪೃಥ್ವಿಯು ಮರಣದ ಲೋಕವಾಗಿದೆ. (ದೇವರಿಂದ) ಹುಟ್ಟಿದವರು ಅದರಲ್ಲಿ ಸಾಯುತ್ತಾರೆಂಬ ಶ್ರುತಿಯೆದೆಂತ, ಹೇಳಿ ಅದೆ.—

ಮತ್ತು ಶುಕ್ಲ-ಯಜುರ್-ವೇದದ ಶತಪಥ-ಬ್ರಾಹ್ಮಣದ ೧೦ನೇ ಕಾಂಡದ ೧ನೇ ಅಧ್ಯಾಯದ ೩ನೇ ಬ್ರಾಹ್ಮಣದಲ್ಲಿರುವದೇನಂದರೆ—

ಪ್ರಜಾಪತಿಃ ಪ್ರಜಾ ಅಸೃಜತ। ಸ ಉಪ್ಪ್ರ್ಯೇಭ್ಯ ಏವ ಪ್ರಾಣೇಭ್ಯೋ ದೇವಾನ್ ಅಸೃಜತ ಯೇಽವಾಂಚಃ ಪ್ರಾಣಾಸ್ತೇಭ್ಯೋ ಮರ್ತ್ಯಾಃ ಪ್ರಜಾಃ। ಅಥಾಽರ್ಧ್ವಮ್ ಏವ ಮೃತ್ಯುಮ್ ಪ್ರಜಾಭ್ಯೋಽತ್ತಾರಮ್ ಅಸೃಜತ॥೧॥ತಸ್ಯ ಹ ಪ್ರಜಾಪತೇರ್ ಅರ್ಧಮ್ ಏವ ಮರ್ತ್ಯಮ್ ಆಸೀದ್ ಅರ್ಧಮ್ ಅಮೃತಂ। ತದ್ ಯದ್ ಅಸ್ಯ ಮರ್ತ್ಯಮ್ ಆಸೀತ್ ತೇನ ಮೃತ್ಯೋರ್ ಅಬಿಭೇತ್। ಸ ವಿಭ್ಯದ್ ಇಮಾಮ್ ಪ್ರಾವಿಶದ್।೨।

ಟೀಕು॥ ಪ್ರಜಾಪತಿಯು (ಅಂದರೆ ಬ್ರಹ್ಮವು) ಪ್ರಜೆಗಳನ್ನು ಸೃಷ್ಟಿಸಿದನು; ಅವನು ತನ್ನ ಮೇಲಿನ ಶ್ವಾಸಗಳಿಂದ ದೇವರುಗಳನ್ನೂ ಕೆಳಗಿನ ಶ್ವಾಸಗಳಿಂದ (ತಮ್ಮ ತಂದೆಯ ಸ್ವಭಾನದಂತೆ) ಮರಣಸ್ಥರಾಗಿರುವ ಪ್ರಜೆಗಳನ್ನೂ (ಅಂದರೆ ಮನುಷ್ಯಾದಿಗಳನ್ನೂ) ಸೃಷ್ಟಿಸಿದನು; ಮತ್ತು ಪ್ರಜೆಗಳಿಗೀಚೆಯಾಗಿ ನುಂಗುವಂಥ ಮೃತ್ಯುವನ್ನೇ ಸೃಷ್ಟಿಸಿದನು. ಆ ಪ್ರಜಾಪತಿಯ ಒಂದು ಅರ್ಧವು ಮರ್ತ್ಯವಾದದ್ದೂ ಮತ್ತೊಂದು ಅರ್ಧವು ಅಮೃತವಾದದ್ದೂ ಆಗಿತ್ತು, ನಿಶ್ಚಯ! ತನ್ನ ಮರ್ತ್ಯವಾದ ಅರ್ಧದಿಂದ (ತನ್ನ ಮಗನಾದ) ಮೃತ್ಯುವಿಗೆ ಭಯ ಪಟ್ಟನು; ಅವನು ಭಯ ಪಟ್ಟು, ಇದರೊಳಗೆ (ಅಂದರೆ ಈ ಪೃಥಿವಿಯೊಳಗೆ) ಹೊಕ್ಕೊಂಡನು.—

ತಮ್ಮಾ, ಕೇವಲ ನಿತ್ಯಜೀವವಾಗಿರುವ ಪರಮಾತ್ಮನು, ಜನರನ್ನು ಕಾಲ್ಲಲಿ ಎಂತ, ಮೃತ್ಯುವನ್ನೂ, ಜನರಿಗೆ ಮರಣದ ಸ್ಥಳವಾಗಿರಲಿ ಎಂತ, ಪೃಥ್ವಿಯನ್ನೂ, ಜನರು ಸಾಯಲಿ ಎಂತ, ಅವರನ್ನು ಮರಣಸ್ಥರಾಗಿಯೂ ಸೃಷ್ಟಿಸಿ

ಬಿಡುವದುಂಟೇ? ಆದಲ್ಲದೆ ಕರಡಿಯಾದರೂ ತನ್ನ ಮರಿಗಳು ಸಾಯದ ಹಾಗೆ ನೋಡಿ ಕಾಳ್ಕತ್ತದಲ್ಲವಾ? ಆದರೆ ತಾನು ಮರಣವುಳ್ಳವನೂ ಮರಣಕ್ಕೆ ಅಂಜುವವನೂ ಆದ ಅಂಥಾ ಹಿಂದು ದೇವರು ಏನಾದರೂ ಮಾಡ ಬಹುದು.

ಕೇಳಿರಿ, ರಂಗಾ, ಈಗ ದೇವರ ನಿರ್ಮಾಣವಾಗಿರುವ ಮನುಷ್ಯರ ವಿಷಯವಾಗಿ ಹೆಚ್ಚು ಮಾತಾಡಾಣ; ದೇವರು ಅವರನ್ನು ಮರಣಕ್ಕೆ ನಿರ್ಮಿಸಿದನೆಂಬದು ಹಿಂದು ಬಾಧೆನೆಯಾಗಿ ಗಾತ್ರಾಯಿತು; ಈ ಬಾಧೆನೆಯನ್ನೂ ದುರ್ಗುಣಗಳುಳ್ಳ ದೇವತೆಗಳೂ ಪಿಶಾಚರುಗಳೂ ದೇವರಿಂದ ಸೃಷ್ಟಿಯಾದರೆಂಬ ಬಾಧೆನೆಯನ್ನೂ ಹೇಳಿದವರು ಮನುಷ್ಯರ ದುರ್ಗುಣ ದುಷ್ಕರ್ಮಗಳು ಸಹ ದೇವರಿಂದ ಬಂದವೆಂತಲೂ ದೇವರುಗಳಾಗಿವೆಂತಲೂ ಹೇಳಲಕ್ಕೆ ಲಜ್ಜೆ ಪಡಲಿಲ್ಲವೆಂದು ಮುಂದಾಗಿ ನೆನಸ ಬಹುದು; ರಜಸು ತಮಸುಗಳುಳ್ಳ ಜಾವದ ದೇವರು ಸೃಷ್ಟಿ ಮಾಡಿದನೆಂತ ವೇದ ಶಾಸ್ತ್ರಗಳಲ್ಲಿ ಹೇಳಿದವರು ತನ್ನ ನೀಚಜಾವದ ಪ್ರಕಾರವಾಗಿಯೇ ಮನುಷ್ಯರನ್ನು ಸೃಷ್ಟಿಸಿದನೆಂತ ಬಾಧಿಸಿದ್ದನ್ನು ನಿಮಗೆ ವಿವರಿಸೈನು; ಹ್ಯಾಗಂದರೆ ಮಹಾಭಾರತದ ಭೀಷ್ಮ-ಪರ್ವದ ಭಗವದ್-ಗೀತೆಯಲ್ಲಿ ಕೃಷ್ಣನು ಹೇಳುವದೇನಂದರೆ—

ಪ್ರಕೃತಿಂ ಸ್ವಾಮ್ ಅವಷ್ಟಭ್ಯ ವಿಸೃಜಾಮಿ ಪುನಃ ಪುನಃ।
ಭೂತ-ಗ್ರಾಮಮ್ ಇಮಂ ಕೃತ್ಸ್ನಮ್ ಅವಶಂ ಪ್ರಕೃತೇರ್ ವಶಾತ್
॥೮೦೭೭॥

ಟೀಕು॥ನನ್ನ ಪ್ರಕೃತಿಯಲ್ಲಿ ನಿಂತು ಕೊಂಡು, (ನನ್ನ ರಜಸು ತಮಸು ಗುಣಗಳುಳ್ಳಂಥ, ಅಜ್ಞಾನವೂ ಅವಿದ್ಯೆಯೂ ಆದಂಥ) ಪ್ರಕೃತಿಯ ವಶದಲ್ಲಿರುವದರಿಂದ ಅವಶವಾದ (ಅಂದರೆ ಏನೂ ಸ್ವತಂತ್ರವಿಲ್ಲದ್ದಾದ) ಈ ಭೂತಗಳ (ಅಂದರೆ ಮನುಷ್ಯಾದಿಗಳ) ಸಮೂಹವೆಲ್ಲವನ್ನು ತಿರಿಗಿ ತಿರಿಗಿ ಸೃಷ್ಟಿಸುತ್ತೇನೆ.—

ಆದೇ ಪ್ರಕಾರ ಕೃಷ್ಣನು ಆದೇ ಗೀತೆಯಲ್ಲಿ ಹೇಳುವದೇನಂದರೆ —

ಯೇ ಚೈವ ಸಾತ್ವಿಕಾ ಭಾವಾ ರಾಜಸಾಸ್ ತಾಮಸಾಶ್ ಚ ಯೇ।
ಮತ್ತ ಏವೇತಿ ತಾನ್ ವಿದ್ಧಿ ನ ತ್ವ ಅಹಂ ತೇಷು ತೇ ಮಯಿ॥೮೦೭೪॥

ಟೀಕು॥ಸತ್ತ್ವವುಳ್ಳ, ರಜಸುಳ್ಳ, ತಮಸುಳ್ಳ ಎಲ್ಲಾ ಭಾವಗಳು ನನ್ನಿಂದಲೇ ಎಂತ ತಿಳುಕೋ; ಆದರೆ ನಾನು ಅವುಗಳಲ್ಲಿ ಇರುವದಿಲ್ಲ (ವ್ಯರ್ಥ ನೆವನ), ಅವು ನನ್ನಲ್ಲಿ ಅವೆ!—

ಅದರಂತೆಯೇ ಮಹಾಭಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವದೇನಂದರೆ —

ಮೂಲ-ಸ್ಥಾಯೀ ಮಹಾ-ದೇವಾೀ ಭಗವಾನ್ ಸ್ವೇನ ತೇಜಸಾ।
ತತ್-ಸ್ಥಃ ಸೃಜತಿ ತಾನ್ ಭಾವಾನ್ ನಾನಾ-ರೂಪಾನ್ ಮಹಾ-ಮನಾಃ॥೧೦೦೬೭॥

ಟೀಕು॥ದೊಡ್ಡ ದೇವರಾದ ಭಗವಂತನು (ಅಂದರೆ ನಾರಾಯಣನು) ಸ್ವಂತ ಶಕ್ತಿಯೊಡನೆ ಮೂಲದಲ್ಲಿ (ಅಂದರೆ ಪ್ರಕೃತಿಯಲ್ಲಿ) ನಿಲ್ಲುವವನಾಗಿದ್ದಾನೆ; ಅದರಲ್ಲಿ ನಿಲ್ಲುವವನಾಗಿ, ಆ ದೊಡ್ಡ ಮನಸುಳ್ಳವನು (ಸತ್ತ್ವ ರಜಸು ತಮಸುಗಳ ಸಂಬಂಧವಾದ) ಆ ನಾನಾ ರೂಪವುಳ್ಳ ಭಾವಗಳನ್ನು* ಸೃಷ್ಟಿಸುತ್ತಾನೆ.—

ಮತ್ತು ಕಲ್ಕತ್ತದಲ್ಲಿ ಥಾಪೆಯಾದ ಧರ್ಮ-ರಾಜ-ದೀಕ್ಷಿತನ ವೇದಾಂತ-ಪರಿಚಾಷೆಯ ೩೬ನೇ ಪಾನಿನಲ್ಲಿ ಹೇಳಿರುವದೇನಂದರೆ —

ಷಮಾನಿ ಭೂತಾನಿ ತ್ರಿ-ಗುಣ-ಮಾಯಾ-ಕಾರ್ಯಾಣ್ಯೆ ಅತಸ್ ತ್ರಿ-ಗುಣಾತ್ಮಕಾನಿ।

ಟೀಕು॥ಈ ಭೂತಗಳು (ಅಂದರೆ ಮನುಷ್ಯಾದಿಗಳು) ಮೂರು (ಅಂದರೆ ಸತ್ತ್ವ ರಜಸು ತಮಸು) ಗುಣಗಳುಳ್ಳ ಮಾಯೆಯಿಂದ (ದೇವರ ಮುಖಾಂತ್ರವಾಗಿ) ಮಾಡಲ್ಪಟ್ಟವರಾಗಿದ್ದಾರೆ; ಆದ್ದರಿಂದ ಮೂರು ಗುಣಗಳುಳ್ಳವರಾಗಿದ್ದಾರೆ.—

ಬೇರೆ ಕಡೆಯಲ್ಲಿ, ತಮ್ಮಾ, ದೇವರು ಸತ್ತ ರಜಸು ತಮಸು ಎಂಬ ಗುಣಗಳನ್ನು ಸೃಷ್ಟಿಸಿ ಜನರಿಗೆ ಜ್ಞಾಪಿಸಿ ಕಾಟ್ಟನೆಂತ, ಹೆಚ್ಚು ವಿವರವಾಗಿ ಬರುತ್ತದೆ: ಹ್ಯಾಗಂದರೆ ಮನು-ಧರ್ಮ-ಶಾಸ್ತ್ರದ ೧ನೇ ಅಧ್ಯಾಯದಲ್ಲಿ ಹೇಳಿರುವದೇನಂದರೆ —

ತಪಾೀ ವಾಚಂ ರಯಿಂ ಚೈವ ಕಾಮಂ ಚ ಕ್ರಾೀಥಮ್ ಏವ ಚ।

*ಈ ಗ್ರಂಥದ ೧೪ನೇ ಪಾನಿನಲ್ಲಿ ಮಹಾಭಾರತದ್ದನ್ನು ನೋಡಿರಿ.

ಸೃಷ್ಟಿಂ ಸಸರ್ಜ ಚೈವೇಽಮಾಂ ಸ್ರಷ್ಟುಮ್ ಇಚ್ಛನ್ ಇಮಾಃ ಪ್ರಜಾಃ
॥ ೨೫॥
ಹಿಂಸ್ರಾಽಹಿಂಸ್ರೇ ಮೃದು-ಕ್ರೂರೇ ಧರ್ಮಾಽಧರ್ಮಾವ್ ಋತಾಽನೃತೇ।
ಯದ್ ಯಸ್ಯ ಸಾಽದಧಾತ್ ಸರ್ಗೇ ತತ್ ತಸ್ಯ ಸ್ವಯಮ್ ಆವಿಶೇತ್
॥ ೨೬॥

ಟೀಕು॥ ಅವನು (ಅಂದರೆ ನಾರಾಯಣನ ಪ್ರಕೃತಿಯುಳ್ಳ ಬೀಜದೊಳಗಿಂದ ಹೊರಟು, ಅವನ ಪ್ರಕೃತಿಯ ಮುಖ್ಯ ಶಕ್ತಿಯೂ ಅವನೂ ಆದ ಬ್ರಹ್ಮನು) ಈ ಪ್ರಜೆಗಳನ್ನು ಸೃಷ್ಟಿಸಲಿಕ್ಕೆ ಇಚ್ಛೆಯುಳ್ಳವನಾಗಿ, ತಪಸ್ಸನ್ನೂ ವಾಕ್ಯವನ್ನೂ ರತಿಯನ್ನೂ ಕಾಮವನ್ನೂ ಕ್ರೋಧವನ್ನೂ—ಈ ಸೃಷ್ಟಿಯನ್ನು ಸಹ ಸೃಷ್ಟಿಸಿದನು; ಹಿಂಸೆ ಅಹಿಂಸೆಗಳು, ಮೃದು ಕ್ರೂರಗಳು, ಧರ್ಮ ಅಧರ್ಮಗಳು, ಸತ್ಯ ಅಸತ್ಯಗಳು ಎಂಬ ದ್ವಂದ್ವಗಳಲ್ಲಿ (ಅಂದರೆ ಕೆಟ್ಟದ್ದೂ ಒಳ್ಳೇದೂ ಜೋಡಾಗಿರುವವುಗಳಲ್ಲಿ) ಅವನು ಯಾವದನ್ನು ಯಾವನ ಸೃಷ್ಟಿಯಲ್ಲಿ ಇಟ್ಟನೋ, ಅದೇ ಅವನೊಳಗೆಯೇ (ಅಂದರೆ ಆ ಮನುಷ್ಯನೊಳಗೆಯೇ) ತನ್ನಿಂದ ತಾನೇ ಪ್ರವೇಶಿಸುವದು.—

ಮತ್ತು ಮಹಾಭಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ವ್ಯಾಸ ಮುನಿಯು ಅದೇ ಪ್ರಕಾರ ಹೇಳುತ್ತಾನೇನಂದರೆ—

ತತಃ ಸ ಸೃಜತಿ ಬ್ರಹ್ಮಾ ದೇವ-ರ್ಷಿ-ಪಿತೃ-ಮಾನವಾನ್। ೨೩೨।
ತೇಷಾಂ ಯೇ ಯಾನಿ ಕರ್ಮಾಣಿ ಪ್ರಾಕ್-ಸೃಷ್ಟ್ಯಾಂ ಪ್ರತಿಪೇದಿರೇ।
ತಾನ್ಯೇವ ಪ್ರತಿಪದ್ಯಂತೇ ಸೃಜ್ಯಮಾನಾಃ ಪುನಃ ಪುನಃ॥ ೨೩೩॥
ಹಿಂಸ್ರಾಽಹಿಂಸ್ರೇ ಮೃದು-ಕ್ರೂರೇ ಧರ್ಮಾಽಧರ್ಮಾವ್ ಋತಾಽನೃತೇ।
ತದ್-ಭಾವಿತಾಃ ಪ್ರಪದ್ಯಂತೇ ತಸ್ಮಾತ್ ತತ್ ತಸ್ಯ ರಾತಿತೇ ॥ ೨೩೪॥

ಟೀಕು॥ ಆ ಮೇಲೆ ಆ ಬ್ರಹ್ಮನು ದೇವರುಗಳನ್ನೂ ಋಷಿಗಳನ್ನೂ ಪಿತೃಗಳನ್ನೂ ಮನುಷ್ಯರನ್ನೂ ಸೃಷ್ಟಿಸುತ್ತಾನೆ; ಅವರಲ್ಲಿ ಯಾರು ಮುಟ್ಟಿಮೊದಲಿನ ಸೃಷ್ಟಿಯಲ್ಲಿ ಯಾವ ಕರ್ಮಗಳನ್ನು (ದೇವರಿಂದ) ಹೊಂದಿದರೋ, ಅವರೇ ಅವುಗಳನ್ನೇ, ತಿರಿಗಿ ತಿರಿಗಿ ಸೃಷ್ಟಿಸಲ್ಪಡುವವರಾಗಿ, ಹೊಂದುತ್ತಾ ಇರುತ್ತಾರೆ; (ಅವೇ ಕರ್ಮಗಳನ್ನು ತಿರಿಗಿ ತಿರಿಗಿ

ಹೊಂದುತ್ತಾ ಇರುವ) ಅಂಥ ಭಾವದವರಾದ ಅವರು ಹಿಂಸೆ ಅಹಿಂಸೆ, ಮೃದು ಕ್ರೂರ, ಧರ್ಮ ಅಧರ್ಮ, ಸತ್ಯ ಅನತ್ಯ ಎಂಬ ದ್ವಂದ್ವಗಳನ್ನು (ದೇವರಿಂದ) ಹೊಂದುತ್ತಾ ಇದ್ದಾನೆ; ಅದರ ಜೆನೆಯಿಂದ ಅದದು ಅವನವನಿಗೆ ರುಚಿಕರವಾಗಿರುವದು.—

ಅದಕ್ಕೆ ಅದೇ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವ ದೇನಂದರೆ —

ಏವಂ ದ್ವನ್ದ್ವಾನ್ಯ್ ಅಥೈzತಾನಿ ಸಮಾಪತ್ತ್ಯನ್ತಿ ನಿತ್ಯಶಃ। ೧೩೨೪೮।

ಟೀಕು॥ ಹಾಗಾದರೆ ಇವುಗಳು (ಅಂದರೆ ಮನುಷ್ಯಾದಿ ಭೂತಗಳು) ಈ ಪ್ರಕಾರವಾಗಿ ನಿತ್ಯದಲ್ಲಿ ದ್ವಂದ್ವವುಳ್ಳವುಗಳಾಗಿವೆ.—

ರಂಗನು ಇಷ್ಟು ಕೇಳಿದ ಮೇಲೆ ಛೀ! ಛೀ! ಎಂದು, ತನ್ನ ಅಸಮಾಧಾನ ತೋರಿಸಿದನು. —ಆದರೆ ಸುಚಿತ್ತಿಯು ಮತ್ತಿಂತೆಂದನು — ನೀವು ಸುಳ್ಳೆಂತ ಶಿಳುಕಾಳ್ಳುವ ಹಿಂದು ಕಲ್ಪನಾದೇವರನ್ನು ವೇದವು ಕಾಂಡಾಡುತ್ತದೆ; ಹ್ಯಾಗಂದರೆ ಶ್ವೇತಾಶ್ವತರ-ಉಪನಿಷತ್ತಿನ ೫ನೇ ಅಧ್ಯಾಯದಲ್ಲಿ ಹೇಳಿರುವದೇನಂದರೆ —

ಸರ್ವಮ್ ಏತದ್ ವಿಶ್ವಮ್ ಅಧಿತಿಷ್ಠತ್ಯ್ ಏಕೋ ಗುಣಾಂಶ್ ಚ ಸರ್ವಾನ್ ವಿನಿಯೋಜಯೇದ್ ಯಃ॥ ೫॥

ತದ್ ವೇದ-ಗುಹ್ಯೋzಪನಿಷತ್ಸು ಗೂಢಮ್ ಇತ್ಯಾದಿ।

ಟೀಕು॥ ಏಕನಾಗಿ ಈ ವಿಶ್ವವನ್ನು ಆಳುತ್ತಾ ಎಲ್ಲಾ ಗುಣಗಳನ್ನು (ಅಂದರೆ ರಜಸು ತಮಸು ಎಂಬವುಗಳನ್ನು ಸಹ ಜನರಿಗೆ) ಹಂಚಿ ಕೊಡುತ್ತಾ ಯಾವನು ಇದ್ದಾನೋ, ಅವನೇ (ಅಂದರೆ ಬ್ರಹ್ಮವೆಂಬ ಆ ರುದ್ರನೇ) ವೇದಗಳಲ್ಲಿ ಅಡಗಿರುವ ಉಪನಿಷತ್ತುಗಳಲ್ಲಿ ಗುಪ್ತನಾಗಿದ್ದಾನೆ.—

ಹಾಗಾದರೆ, ತಮ್ಮಾ, ಹಿಂದು ಮತದವರಲ್ಲಿ ಒಬ್ಬನು —ಈ ಲೌಕದಲ್ಲಿ ನಾವು ಕಷ್ಟ ಪಡುವ ಈ ಅಜ್ಞಾನವೂ ಅವಿದ್ಯೆಯೂ ಸುಳ್ಳೂ ದುರ್ಜನವಗಳೂ ದುಷ್ಕೃತ್ಯೆಗಳೂ ಇವುಗಳಿಂದ ಬರುವ ಇಹದ ಮತ್ತು ಪರದ ಸಂಕಟವೂ ಎಲ್ಲಿಂದ? ಎಂತ, ತನ್ನ ಶಾಸ್ತ್ರಗಳನ್ನು ಶೋಧಿಸಿ ನೋಡಿದರೆ, ಕೃಷ್ಣನು ಮಹಾಭಾರತದ ಭೀಷ್ಮ-ಪರ್ವದ ಭಗವದ್-ಗೀತೆಯಲ್ಲಿ ಉತ್ತರ ಕಾಡುವದೇನಂದರೆ —

ತ್ರಿಭಿರ್ ಗುಣ-ಮಯೈರ್ ಭಾವೈರ್ ಏಭಿಃ ಸರ್ವಮ್ ಇದಂ ಜಗತ್।
ಮೋಹಿತಂ ನಾಽಭಿಜಾನಾತಿ ಮಾಮ್ ಏಭ್ಯಃ ಪರಮ್ ಅವ್ಯಯಂ
॥೧೩೨೪॥
ಈಶ್ವರಃ ಸರ್ವ-ಭೂತಾನಾಂ ಹೃದ್-ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವ-ಭೂತಾನಿ ಯನ್ತ್ರಾರೂಢಾನಿ ಮಾಯಯಾ
॥೧೩೨೫॥
ಉಕ್ತಂ ಚ ಶಾಂತಿ-ಪರ್ವಣಿ॥
ಈಶ್ವರಾಯೇ ಹಿ ಜಗತ್-ಸ್ರಷ್ಟಾ ಪ್ರಭುರ್ ನಾರಾಯಣಾಖ್ಯಾಯೇ ವಿರಾಟ್।
ಭೂತಾನ್ತರಾತ್ಮಾ ವರ-ದಃ ಸ-ಗುಣಾಖ್ಯಾಯೇ ನಿರ್-ಗುಣಾಖ್ಯಾಽಪಿ ಚ
॥೧೩೨೬॥

ಟೀಕು॥ (ನನ್ನ ಮಾಯೆಯ ಮೂರು) ಗುಣಗಳಿಂದ ವ್ಯಾಪಿಸಲ್ಪಟ್ಟ ಈ ಮೂರು (ಅಂದರೆ ಸತ್ತ್ವ ರಜಸು ತಮಸುಗಳುಳ್ಳ) ಭಾವಗಳಿಂದ ಈ ಜಗತ್ತೆಲ್ಲವು (ನನ್ನಂತೆ) ಮರುಳಾಗಿ, (ನಿರ್ಗುಣನಾದ ಪಕ್ಷದಲ್ಲಿ) ಅವುಗಳಿಗೆ ಮೇಲಾದ, ನಿತ್ಯನಾದ ನನ್ನನ್ನು ತಿಳುಕೊಳ್ಳುವದಿಲ್ಲ (ದೇವರು ತಾನೇ ಅಜ್ಞಾನವೆಂಬ ತನ್ನ ಪ್ರಕೃತಿಯಿಂದ ಜನರು ಮೋಕ್ಷ ಹೊಂದುವದಕ್ಕೆ ಅಡ್ಡಿ ಮಾಡುತ್ತಾನೆಂಬ ಹಾಗೆ). (ನಾನಾಗಿರುವ) ಈಶ್ವರನು ಯಂತ್ರವೇರಿಸಲ್ಪಟ್ಟ (ಅಂದರೆ ಯಂತ್ರದ ಬೊಂಬೆಗಳಾದ) ಎಲ್ಲಾ ಭೂತಗಳನ್ನು (ಅಂದರೆ ಮನುಷ್ಯಾದಿಗಳನ್ನು) ಮಾಯೆಯಿಂದ ಭ್ರಮೆಗೊಳ್ಳಿಸುತ್ತಾ, ಎಲ್ಲಾ ಭೂತಗಳ ಹೃದಯದೊಳಗೆ ನಿಂತಿದ್ದಾನೆ, ಅರ್ಜುನನೇ!—ಮತ್ತು ಶಾಂತಿ-ಪರ್ವದಲ್ಲಿ ಹೇಳಿರುವದೇನಂದರೆ, ಈಶ್ವರನು ಜಗತ್ತಿನ ಸೃಷ್ಟಿಕರ್ತನೂ, ಪ್ರಭುವೂ, ನಾರಾಯಣನೂ, ವಿರಾಟನೂ, ಭೂತಗಳೊಳಗಿರುವ ಆತ್ಮನೂ (ಅಂದರೆ ಜೀವಾತ್ಮನೂ), ವರಗಳನ್ನು ಕೊಡುವವನೂ, (ಒಂದು ಕಾಲದಲ್ಲಿ ಸತ್ತ್ವ ರಜಸು ತಮಸು) ಗುಣವುಳ್ಳವನೂ, (ಮತ್ತೊಂದು ಕಾಲದಲ್ಲಿ ಯೋಗದ ಬಲದಿಂದ ಅವುಗಳ ವಶದಿಂದ ತನ್ನನ್ನು ಬಿಡಿಸಿ ಕೊಂಡ ಪಕ್ಷದಲ್ಲಿ—ಅಥರ್ವ-ವೇದದ ಧ್ಯಾನ-ವಿಂದು-ಉಪನಿಷತ್ತಿನ ೧ನೇ ೨ನೇ ಶ್ಲೋಕವನ್ನು ನೋಡಿರಿ—) ಗುಣವಿಲ್ಲದವನೂ (ಅಂದರೆ ಗುಣಗಳ ಭ್ರಮೆಯಿಂದ ಬಿಡಿಸಿ ಕೊಂಡವನೂ) ಸಹ ಆಗಿದ್ದಾನೆ.—

ಮತ್ತು ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವದೇನಂದರೆ—

ಪ್ರಕೃತ್ಯಾ ಸರ್ವಮ್ ಏವೇಽದಂ ಜಗದ್ ಅನ್ಧೀ-ಕೃತಂ ವಿಜ್ಞಾ।
ರಜಸಾ ತಮಸಾ ಚೈವ ವ್ಯಾಪ್ತಂ ಸರ್ವಮ್ ಅನೇಕಧಾ॥೧೦೨೬॥
ಸತ್ತ್ವೇನ ರಜಸಾ ಚೈವ ತಮಸಾ ಚೈವ ಮೋಹಿತಾಃ।
ಚಕ್ರ-ವತ್ ಪರಿವರ್ತನ್ತೇ ಹ್ಯ್ ಅಜ್ಞಾನಾಜ್ ಜನ್ತವೋ ಮೃಶಂ॥೧೦೨೭॥
ಅಜ್ಞಾನ-ಸಾಗರೋ ಘೋರೋ ಹ್ಯ್ ಅಪ್ಯಕ್ತೋಽಗಾಧ ಉಚ್ಯತೇ।
ಅಹನ್ಯ್ ಅಹನಿ ಮಜ್ಜನ್ತಿ ಯತ್ರ ಭೂತಾನಿ ಭಾರತ॥೧೦೨೮॥

ಟೀಕು॥(ದೇವರಾಗಿರುವಂಥ ಅಥವಾ ದೇವರದ್ದಾದಂಥ) ಪ್ರಕೃತಿಯಿಂದ ಈ ಜಗತ್ತೆಲ್ಲವೂ ಅಂಧಕಾರವುಳ್ಳದ್ದಾಗಿ ಮಾಡಲ್ಪಟ್ಟಿದೆ, ಅರಸನೇ; ಎಲ್ಲವೂ (ಆ ಪ್ರಕೃತಿಯ ಗುಣಗಳಾದ) ರಜಸಿನಿಂದಲೂ ತಮಸಿನಿಂದಲೂ ಅನೇಕ ಪ್ರಕಾರವಾಗಿ ವ್ಯಾಪಿಸಲ್ಪಟ್ಟಿದ್ದಾಗಿದೆ. ಸತ್ತ್ವದಿಂದಲೂ ರಜಸಿನಿಂದಲೂ ತಮಸಿನಿಂದಲೂ ಮರುಳಾದ ಜನರು (ದೇವಾತ್ಮಶಕ್ತಿಯಾದ) ಅಜ್ಞಾನದ ದೆಸೆಯಿಂದ ಒಂದು ಚಕ್ರದಂತೆ ವ್ಯರ್ಥವಾಗಿ ತಿರುಗುತ್ತಾರೆ, ನಿಶ್ಚಯ! ಅಘೋರವಾದಂಥ (ದೇವಾತ್ಮಶಕ್ತಿಯೆಂಬ) ಅಜ್ಞಾನದ ಸಾಗರವು ಅವ್ಯಕ್ತವುಳ್ಳದ್ದೂ (ಅಂದರೆ ದೇವರಾಗಿರುವಂಥ ಅಥವಾ ದೇವರದ್ದಾಗಿರುವಂಥ ಪ್ರಕೃತಿಯುಳ್ಳದ್ದೂ) ಅಗಾಧವಾದದ್ದೂ ಎನ್ನಿಸುತ್ತದೆ, ನಿಶ್ಚಯ; ಅದರಲ್ಲಿ, ಭಾರತನೇ, ಭೂತಗಳು (ಅಂದರೆ ಮನುಷ್ಯಾದಿಗಳು) ದಿನದಿನಕ್ಕೆ ಮುಳುಗುತ್ತಾರೆ!—

ಇದನ್ನೇ ಪ್ರಮಾಣ ಮಾಡಲಿಕ್ಕಾಗಿ ಶಂಕರಾಚಾರ್ಯನು ತನ್ನ ಶ್ವೇತಾಶ್ವತರ-ಉಪನಿಷದ್-ಭಾಷ್ಯದ ಒಟ್ಟಲನೇ ಪಾನಿನಲ್ಲಿ ಲಿಂಗ-ಪುರಾಣದಿಂದಲೂ ವಿಷ್ಣು-ಪುರಾಣದಿಂದಲೂ ತೆಗೆದೆತೆಗೆದು ಬರೆದ ಅರ್ಥ ಶ್ಲೋಕವೇನಂದರೆ —

ತಸ್ಮಾದ್ ಅಜ್ಞಾನ-ಮೂಲಾ ಹಿ ಸಂಸಾರಃ ಸರ್ವ-ದೇಹಿನಾಂ।

ಟೀಕು॥ಅದರ ದೆಸೆಯಿಂದ ಎಲ್ಲಾ ದೇಹಿಗಳ (ಅಂದರೆ ಮನುಷ್ಯಾದಿಗಳ) ಸಂಸಾರವು (ಅಂದರೆ ಈ ಲೋಕದಲ್ಲಿರುವದೂ ನಡೆಯುವದೂ ಮಾಡುವದೂ ಅನುಭವಿಸುವದೂ ಇತ್ಯಾದಿ) ನಿಶ್ಚಯವಾಗಿ (ದೇವಾತ್ಮಶಕ್ತಿಯಾದ) ಅಜ್ಞಾನದಲ್ಲಿ ಬೇರು ಇರುವಂಥಾದ್ದಾಗಿದೆ. —

(ಸತ್ವಗುಣದಿಂದಲಾಗುವ ಪುಣ್ಯವು ಸಹ ಅಜ್ಞಾನದ್ದಾಗಿದೆಂಬ ಹಿಂದು ಪುಬ್ಬಾರ್ಥನೆಯು ಈ ಕಡೇ ಶ್ಲೋಕಗಳಲ್ಲಿ ತಿರಿಗಿ ಸ್ಪಷ್ಟವಾಗಿ ಕಾಣಿಸುತ್ತದೆ).

ಆಗ ರಂಗನು ಅಂದದ್ದೇನು — ದೇವರ ಪರಿಶುದ್ಧತ್ವವನ್ನೂ ನೀತಿಯನ್ನೂ ಕರುಣೆಯನ್ನೂ ಕೆಡಿಸಿ ಬಿಡಲಿಕ್ಕೆ ಯತ್ನೈಸುವಂಥ ಈ ಬ್ರಾಥನೆಯು ಹಿಂದು ವೇದ ಶಾಸ್ತ್ರಗಳಲ್ಲಿ ಉಂಟೆಂದು ನಾನು ಈ ವರೆಗೆ ತಿಳುಕಾಂಡಿದ್ದೇ ಇಲ್ಲ; ಆ ವೇದ ಶಾಸ್ತ್ರಗಳನ್ನು ಓದಿವ ನನ್ನ ಮತಸ್ಥರು ಅದನ್ನು ನನಗೆ ಯಾಕೆ ಹೇಳಲಿಲ್ಲ? ಹೇಳಿದ್ದರೆ ಹಿಂದು ಮತವನ್ನು ಬಿಟ್ಟು ಬಿಡುತ್ತಿದ್ದೆನು; ಅವರು ಅಂಥಾ ಬ್ರಾಥನೆಯನ್ನು ಬರೇ ಕಸವೆಂತ ಯಾಕೆ ಬಿಡಲಿಲ್ಲ? ಈಗಲಾದರೂ ಯಾಕೆ ಬಿಡುವದಿಲ್ಲ? — ಅದಕ್ಕೆ ಸುಚಿತ್ತಿಯು ಉತ್ತರ ಕಾಟ್ಟಿದ್ದೇನಂದರೆ — ಹಿಂದು ವೇದ ಶಾಸ್ತ್ರಗಳನ್ನು ಬಲ್ಲವರಲ್ಲಿ ಅನೇಕರು ಯುಧಿಷ್ಠಿರನ ವಿಪರೀತವಾದ ಲಘು ಮನಸುಳ್ಳವರಾಗಿದ್ದಾರೆ; ಬೇರೆ ಅವರು, ಯಥೇಚ್ಛೆ ತಮ್ಮ ಮಾನಸದ ಇಚ್ಛೆ ಆಶೆಗಳನ್ನು ತೀರಿಸಿ ಕಾಳ್ಳುವದಕ್ಕಾಗಿ, ಪಾಪಾತ್ಪ್ರತ್ಯಿಯು ದೇವರಿಂದಲೇ ಆಯಿತೆಂತ ನಾಚಿಕೆಯೆಲ್ಲಾ ತೃಜಿಸಿ, ದೇವರು ಕಾಟ್ಟಿ ಮನಸಾಪ್ಷಿಯ ಶಿಕ್ಷೆ ದಿಕ್ಷೆ ತಳ್ಳಿ ಬಿಡುತ್ತಾರೆ; ಮತ್ತಾತ್ಕಬ್ಬರು ಶಾಸ್ತ್ರಾದಿಗಳು ಅಬದ್ಧವೆಂತ ತಿಳುಕಾಂಡಿದ್ದರೂ, ಅವು ಏನಾದರೂ ಹೇಳಲಿ! ನಮಗೆ ಅವೇ ಬೇಕೆಂದು, ಪ್ರಾಣನಾಶಕರವಾದ ಒಂದು ಹುಚ್ಚು ಗರ್ವ ಹಿಡುಕಾಂಡು, ಅವುಗಳನ್ನೂ ಅವುಗಳು ಪ್ರಬಲವಾಗಿರುವ ಸಚಿಯನ್ನೂ ಬಿಡದೆ, ದ್ವೇಷಕ್ಕಾಳಗಾಗಿದ್ದಾರೆ; ಅನೇಕರು ಶಾಸ್ತ್ರಾದಿಗಳನ್ನು ಓದಿದರೂ ಶ್ರಾಥನೆಯ ಮನಸ್ಸಿಲ್ಲದೆ, ಅವುಗಳ ಅರ್ಥವು ದೇವರಿಗೆ ವಿರ್ರಾಥವಾದದ್ದೆಂತ, ತಿಳುಕಾಳ್ಳುವದಿಲ್ಲ; — ಆದರೆ ಅವರೆಲ್ಲರೂ ಸತ್ಯದ ವೈರಿಯಾದ ವಿಶ್ವಾಚನ ವಶದಲ್ಲಿದ್ದಾರೆ; ಅವರು ಆ ಕೆಡಕನ ಬಂಧಗಳಾಳಗಿಂದ ಬಿಡಿಸಲ್ಪಡುವ ಹಾಗೆ, ನಾವು ದೇವರಿಗೆ ಪ್ರಾರ್ಥನೆ ಮಾಡ ಬೇಕು, ತಮ್ಮಾ! ಯಾಕಂದರೆ ಪಾಪಾತ್ಪ್ರತ್ಯಿಯು ದೇವರಿಂದ ಆಯಿತೆಂಬ ವೇದಶಾಸ್ತ್ರದುಬ್ಬಾರ್ಥನೆಯು ಅಚಿವೃದ್ಧಿಯಾಗಿರುವ ಜನರ ದೇಶದಲ್ಲಾ ಗಲಿ ಗೃಹಗಳಲ್ಲಾ ಗಲಿ ಕಾಣಿಕೆಗಳಲ್ಲಾ ಗಲಿ ಹೃದಯಗಳಲ್ಲಾ ಗಲಿ ದೇವರ ಆಶೀರ್ವಾ

ದವೂ ಸತ್ಯದ ಬಲವೂ ಕೀರ್ತಿಯೂ ಶಾಂತಿಯೂ ಸುಚಾಗ್ಯವೂ ಇರ
ಕೂಡದ್ದಲ್ಲದೆ ಅವರಲ್ಲಿ ಯಾರೂ ಪರಿಶುದ್ಧ ದೇವರ ಸಹವಾಸಕ್ಕೆ ಹಾಗೆ
ಗುವದಿಲ್ಲ. — ಪಾಪಾತ್ಪತ್ತಿಯನ್ನು ದೇವರಲ್ಲಿಡುವ ಹಿಂದು ಗ್ರಂಥಗಳು
ಜನರ ಮನಸ್ಸಿನ ಸ್ವಸ್ಥ ಲಕ್ಷಣವನ್ನು ವರ್ಣಿಸುವ ಒಂದು ಮಾತನ್ನು
ಎಂದಾದರೂ ಕೇಳಿದಿರಾ, ತಮ್ಮಾ? ಮಹಾಭಾರತದ ಶಾಂತಿ-ಪರ್ವದ
ರಾಜಧರ್ಮದಲ್ಲಿ ಹೇಳಿರುವದೇನಂದರೆ —

ಸತ್ವಂ ರಜಸ್ತಮ ಇತಿ ಮಾನಸಾಃ ಸ್ಯುಸ್ ತ್ರಯೋ ಗುಣಾಃ।
ತೇಷಾಂ ಗುಣಾನಾಂ ಸಾಮ್ಯಂ ಯತ್ ತದ್ ಆಹುಃ ಸ್ವಸ್ಥ-ಲಕ್ಷಣಂ
॥ ೪೪ ॥

ಟೀಕು॥ ಸತ್ವ್ವ ರಜಸು ತಮಸು ಎಂಬ ಮೂರು ಗುಣಗಳು ಮನಸ್ಸಿನ
ಸಬಂಧದವುಗಳಾಗಿರಲಿ; ಈ ಗುಣಗಳು ಸಮವಾಗಿ (ಅಂದರೆ ಒಂದೇ
ಹಾಳತೆಯಲ್ಲಿ) ಇರುವಂಥಾದ್ದು (ಮನಸ್ಸಿನ) ಸ್ವಸ್ಥ ಲಕ್ಷಣವೆಂತ ಹೇ
ಳುತ್ತಾರೆ.—

ಅದಕ್ಕೆ ರಂಗನು — ಅಕಟಾ, ಅಣ್ಣಾ, ಅದು ರಾಗದ ಲಕ್ಷಣವೇ!
ದುರ್ಗುಣಗಳೂ ದುರ್ಗಾವಗಳೂ ದುಷ್ಕೃತ್ಯೆಗಳೂ ವ್ಯರ್ಥ ಲೀಲೆಯ
ದೇವರಿಂದ ಬಂದವುಗಳೆಂತ ಬಾಳ್ಗಿಸುವ ಆ ಗ್ರಂಥಗಳಲ್ಲಿ ದೇವರು
ಪುಣ್ಯಕ್ಕೆ ಒಳ್ಳೇದನ್ನೂ ಪಾಪಕ್ಕೆ ಶಿಕ್ಷೆಯನ್ನೂ ಕಾಡುತ್ತಾನೆಂಬದು ಇರುವ
ದಿಲ್ಲವೆಂಬ ಹಾಗೆ ನನಗೆ ಕಾಣುತ್ತದೆಂತ, ಹೇಳಲಾಗಿ ಸುಚಿತ್ತಿಯು ಮ
ತ್ತಿಂತೆಂದನು — ಮೂಢರನ್ನು ಬೆದರಿಸುವದಕ್ಕೆ ಅದು ಆ ಶಾಸ್ತ್ರಗಳಲ್ಲಿ
ಶಕ್ಕೀತು, ಆದರೆ ಅದು ಹಿಂದು ಪಂಡಿತರಿಗೆ ಸಿದ್ಧಾಂತವಲ್ಲ; ಹ್ಯಾಗಂ
ದರೆ, ಭಗವದ್-ಗೀತೆಯಲ್ಲಿ ಕೃಷ್ಣನೆಂಬವನು ಹೇಳುವದೇನಂದರೆ —

ನಾಽದತ್ತೇ ಕಸ್ಯ-ಚಿತ್ ಪಾಪಂ ನ ಚೈವ ಸುಕೃತಂ ವಿಭುಃ।(೧೫೫)

ಟೀಕು॥ ವಿಭುವು (ಅಂದರೆ ಕೃಷ್ಣನೆಂಬ ಪರಮಾತ್ಮನು) ಯಾವನೊಬ್ಬನ
ಪಾಪವನ್ನಾಗಲಿ ಸುಕೃತವನ್ನಾಗಲಿ (ಲೆಖ್ಖಕ್ಕೆ) ತಕ್ಕೊಳ್ಳುವದಿಲ್ಲ.—

ಆ ಶಾಸ್ತ್ರಗಳು — ದೇವರಾಗಿರುವಂಥ, ದೇವಾತ್ಮಶಕ್ತಿಯಾಗಿರುವಂಥ,
ದೇವರು ಜನರಿಗೆ ಕಾಟ್ಟಿಂಥ ಮಾಯೆಯು ಸಕಲ ಗುಣಗಳ ಮತ್ತು

ಸಕಲ ಕ್ರಿಯೆಗಳ ಮೂಲವೆಂತಲೂ, ದೇವರು ತಾನು ಮಾಯೆಯು ಸಹ ಎಂತಲೂ, ಮಾಯೆಯುಳ್ಳವನೂ ಮಾಯೆಯಿಂದ ಮರುಳಾಗುವವನೂ ಎಂತಲೂ ಪ್ರಸಂಗಿಸಿದ ಮೇಲೆ, ದೇವರು ಜನರ ಪಾಪ ಪುಣ್ಯಗಳನ್ನು ನ್ಯಾಯ ನ್ಯಾಯ ತೀರಿಸುವಂಥವನೆಂತ ಬ್ಯಾಧಿಸ ಕೂಡದು; ಆದರೆ, ಅಜ್ಞಾನವಾಗಿ ಪಾಪ ಮಾಡಿದರೆ ಪಾಪದಲ್ಲಿ ಕಾಡಿಸುವಂಥ ಸ್ವಭಾವವಿರುವದು ಎಂತ, ಬ್ಯಾಧಿಸುತ್ತವೆ: ಹ್ಯಾಗಂದರೆ ಅಕೃತಾತ್ಮನು ಅಂದರೆ ದೇವರ ಮಾಯೆಯ ವಿಷಯವಾಗಿ ತಕ್ಕಷ್ಟು ಬುದ್ಧಿ ಹಾಯದೆ, ತನ್ನ ಕೆಟ್ಟ ಕ್ರಿಯೆಗಳು ಸಹ ದೇವರ ಮಾಯೆಯವುಗಳೆಂದು ಪೂರಾಗಿ ತಿಳುಕಾಳ್ಳದೆ ಇರುವಂಥವನು ಸಹಜವಾದ (ಅಂದರೆ ದೇವರು ಜನ್ಮದಲ್ಲಿ ಕಾಟ್ಟ) ದ್ವೇಷಗಳಿಂದ (ದೇವರ ಮೂಲವಾಗಿ) ನಾಶವಾಗುತ್ತಾನೆ; ಆದರೆ ಆ ಮಾಯೆಯ ವಿಷಯವಾಗಿ ಜ್ಞಾನಿಯಾದವನು ಮನಸ್ಸು ಬಂದ ಹಾಗೆ ಮಾಡಿದರೂ ಏನೂ ಚಿಂತೆಯಿಲ್ಲ; ಶಾಂತಿ-ಪರ್ವದಲ್ಲಿ ಅಂಥಾ ಅಕೃತಾತ್ಮನ ವಿಷಯವಾಗಿ ಹೇಳಿರುವದೇನಂದರೆ —

ವಿನಾಶಯತಿ ಸಮ್ಮೂಢಮ್ ಅಯಃ-ಸ್ಮಯಮ್ ಅಯಾೋ ಯಥಾ।
ತಥಾzಕೃತಾತ್ಮಾ ಸಹಜೈರ್ ದ್ವೇಷ್ಯೈರ್ ನಶ್ಯತಿ ತಾಮಸೈಃ॥ ೨೨೪॥

ಟೀಕು॥ ಕಬ್ಬಿಣದಲ್ಲಿ ಹುಟ್ಟಿದ ತುಕ್ಕು ಕಬ್ಬಿಣವನ್ನು ಹ್ಯಾಗೆ ನಾಶನ ಮಾಡುತ್ತದೋ, ಹಾಗೆಯೇ ಅಕೃತಾತ್ಮನು ಸಹಜವಾದ (ಅಂದರೆ ದೇವರು ಜನ್ಮದಲ್ಲಿ ಕೊಟ್ಟ) ತಮಸುಳ್ಳ ದೋಷಗಳಿಂದ ನಾಶವಾಗುತ್ತಾನೆ. (ಹಿಂದು ಶಾಸ್ತ್ರಗಳ ಪ್ರಕಾರ ಜೀವಾತ್ಮನು ಅಥವಾ ಮನುಷ್ಯನು ಆದ ದೇವರು ತಾನೇ ನಾಶವಾಗುತ್ತಾನೆಂಬಂತೆ). —

ಮತ್ತು ದೇವರ ಮಾಯೆಯು ಎಲ್ಲಾ ಕರ್ಮಗಳನ್ನು ಮಾಡುತ್ತ ದೆಂದು ತಿಳುಕೊಳ್ಳದವನನ್ನೂ ತಿಳುಕಾಂಡ ಜ್ಞಾನಿಯನ್ನೂ ಕುರಿತು ಕೃಷ್ಣನು ಭಗವದ್-ಗೀತೆಯಲ್ಲಿ ಹೇಳಿರುವದೇನಂದರೆ —

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ।
ಅಹಂ-ಕಾರ-ವಿಮೂಢಾzತ್ಮಾ ಕರ್ತಾzಹಮ್ ಇತಿ ಮನ್ಯತೇ ॥೯೭॥
ತತ್ತ್ವೆzವಂ ಸತಿ ಕರ್ತಾರಮ್ ಆತ್ಮಾನಂ ಕೇವಲಂ ತು ಯಃ।
ಪಶ್ಯತ್ಯೆ ಅಕೃತ-ಬುದ್ಧಿತ್ವಾನ್ ನ ಸ ಪಶ್ಯತಿ ದುರ್ಮತಿಃ॥ ೧೪೨೦॥

ಯಸ್ಯ ನಾಽಹಂ-ಕೃತಾಭಾವೋ ಬುದ್ಧಿರ್ ಯಸ್ಯ ನ ಲಿಪ್ಯತೇ।
ಹತ್ವಾಽಪಿ ಸ ಇಮಾಲ್ ಲೋಕಾನ್ ನ ಹನ್ತಿ ನ ನಿಬಧ್ಯತೇ॥ ೧೪೭೧॥
ಸ್ವಭಾವ-ನಿಯತಂ ಕರ್ಮ ಕುರ್ವನ್ ನಾಽಪ್ನೋತಿ ಕಿಲ್ಬಿಷಂ। ೧೮೦೧।
ಸಹಜಂ ಕರ್ಮ ಕೌಂತೇಯ ಸ-ದೋಷಮ್ ಅಪಿ ನ ತ್ಯಜೇತ್। ೧೮೦೨।

ಟೀಕು॥ ಪ್ರಕೃತಿಯ ಗುಣಗಳಿಂದ ಕರ್ಮಗಳು ಒಂದರ ಮೇಲೆ ಒಂದಾಗಿ ಮಾಡಲ್ಪಡುತ್ತವೆ; (ನಾನು ಮಾಡುವವನೆಂಬ ಭಾವದಿಂದ ಅಂದರೆ) ಅಹಂಕಾರದಿಂದ ಮರುಳಾದವನು ನಾನು ಮಾಡುವವನಾಗಿದ್ದೇನೆಂತ ಕಲ್ಪಿಸಿಕೊಳ್ಳುತ್ತಾನೆ. ಹಾಗೆಯೇ ಇರಲಾಗಿ, ತಾನು (ಸುಕೃತಿಯೆಗಳನ್ನಾಗಲಿ ದುಷ್ಕೃತಿಯೆಗಳನ್ನಾಗಲಿ) ಮಾಡುವವನೆಂತ ಯಾವನು ಹಟವಾಗಿ ನೋಡುತ್ತಾನೋ, ಆ ದುರ್ಮತಿಯುಳ್ಳವನು ಅಕೃತವಾದ (ಅಂದರೆ ಪ್ರಕೃತಿಯನ್ನರಿಯದ) ಬುದ್ಧಿಯ ದೆಸೆಯಿಂದ ನೋಡುವದೇ ಇಲ್ಲ (ಅಂದರೆ ಕುರುಡನಾಗಿದ್ದಾನೆ). (ನನ್ನಿಂದ ಏನಾದರೂ ಮಾಡಲ್ಪಡುವದಿಲ್ಲ ಅಥವಾ) ನಾನು ಮಾಡುವವನಲ್ಲ (ದೇವಾತ್ಮಶಕ್ತಿಯಾದ ಪ್ರಕೃತಿಯು ಎಲ್ಲಾನೂ ಮಾಡುವಂಥಾದ್ದು) ಎಂಬ ಭಾವವು ಯಾವನಿಗೆ ಉಂಟೋ, ಯಾವನ ಬುದ್ಧಿಯು (ನಾನು ಮಾಡುವವನೆಂಬ ಭಾವದಿಂದ) ಮುಟ್ಟಿಲ್ಪಡುವದಿಲ್ಲವೋ, ಅಂಥವನೇ ಈ ಲೋಕದವರೆಲ್ಲರನ್ನು ಕೊಂದರೂ ಕೊಲ್ಲುವದಿಲ್ಲ, ಮತ್ತು (ತನ್ನ ಕರ್ಮದ ಫಲದಿಂದ) ಬಂಧಿಸಲ್ಪಡುವದಿಲ್ಲ (ಹ್ಯಾಗೂ ಮೋಕ್ಷ ಹೊಂದುತ್ತಾನೆಂಬಂತೆ). (ದೇವರು ಜನ್ಮದಲ್ಲಿ ಕೊಟ್ಟ ಮೂರು ಗುಣವುಳ್ಳ) ಸ್ವಭಾವವು ಪ್ರೇರೇಪಿಸಿದ ಕರ್ಮಗಳನ್ನು ಮಾಡುವಂಥವನು (ಪಾಪದ ಕರ್ಮಗಳನ್ನು ಮಾಡಿದರೂ) ಪಾಪವನ್ನು ಹೊಂದುವದಿಲ್ಲ (ಅದೆಲ್ಲಾ ಪ್ರಕೃತಿಗೆ ಹೋಗುತ್ತದೆ ಎಂಬಂತೆ). ಸಹಜವಾದ (ಅಂದರೆ ದೇವರು ಜನ್ಮದಲ್ಲಿ ಕೊಟ್ಟ) ಕರ್ಮವನ್ನು, ಅದು ದೋಷವುಳ್ಳದ್ದಾಗಿದ್ದರೂ, ಒಬ್ಬನು ಬಿಟ್ಟು ಬಿಡ ಬಾರದು (ದೇವರು ಕೊಟ್ಟ ರಜಸು ತಮಸು ಗುಣಗಳಿಂದಲೂ ನಡಿಸಿ ಕೊಳ್ಳಬೇಕೆಂಬಂತೆ).—

ದೇವರ ಮಾಯೆಯನ್ನು ತಿಳುಕಾಂಡವರು ದುಷ್ಕೃತಿಯೆಗಳನ್ನೂ ಮಾಡುತ್ತಾ ಹೇಳ ಬೇಕಾದದ್ದು ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿಯದೇನಂದರೆ—

ಪ್ರಕೃತಿಃ ಕುರುತೇ ಕರ್ಮ ಶುಭಾzಶುಭ-ಫಲಾzತ್ಮಕಂ।
ಪ್ರಕೃತಿಶ್ ಚ ತದ್ ಅಶ್ನಾತಿ ತ್ರಿಷು ಲಾಕೇಷು ಕಾಮ-ಗಾ॥ ೧೦೩೦೭॥

ಟೀಕು॥ (ದೇವರಾಗಿರುವಂಥ ಅಥವಾ ದೇವಾತ್ಮಶಕ್ತಿಯಾಗಿರುವಂಥ) ಪ್ರಕೃತಿಯು ಶುಭ ಮತ್ತು ಅಶುಭ ಫಲವುಳ್ಳ ಕರ್ಮವನ್ನು ಮಾಡುತ್ತದೆ; ಮತ್ತು ಮೂರು ಲೋಕಗಳಲ್ಲಿ ಮನಸು ಬಂದಲ್ಲಿಗೆ ಹೋದ (ಅಂದರೆ ಎಲ್ಲಿವನ್ನು ವ್ಯಾಪಿಸಿ ಕೊಂಡ) ಪ್ರಕೃತಿಯು ಅದನ್ನು (ಆ ಫಲವನ್ನು) ತಿನ್ನುತ್ತದೆ (ಇದರ ಪ್ರಕಾರ ಪ್ರಕೃತಿಯೂ ಆಗಿರುವ ಬ್ರಹ್ಮವು ನರಕಾದಿಗಳನ್ನು ಅನುಭವಿಸುತ್ತದೆಂತ ಸಿದ್ಧಾಂತವಾಯಿತು, ಛೀ, ಛೀ!).—

ಮತ್ತು, ತಮ್ಮಾ, ಪ್ರಕೃತಿಯೂ ಆಗಿರುವ ದೇವರು ಎಲ್ಲಾ ಸುಕ್ರಿಯೆಗಳನ್ನೂ ದುಷ್ಕ್ರಿಯೆಗಳನ್ನೂ ಮಾಡುತ್ತಾನೆ ಅಥವಾ ಅವನ ತ್ರಿಗುಣವುಳ್ಳ ಪ್ರಕೃತಿಯು ಅವವುಗಳನ್ನು ಮಾಡುತ್ತದೆ ಎಂಬ ಜ್ಞಾನ ವಿರುವಲ್ಲಿ ಪುಣ್ಯವೂ ಪಾಪವೂ ಪುಣ್ಯವಂತರೂ ಪಾಪವಂತರೂ ಒಂದೇ ಎಂಬುದರ ವಿಷಯವಾಗಿ ನಾನು ಕೆಲವು ವೇದವಾಕ್ಯಗಳನ್ನು ಹೇಳುತ್ತೇನೆ; ಹ್ಯಾಗಂದರೆ ಶುಕ್ಲ-ಯಜುರ್-ವೇದದ ಶತಪಥ-ಬ್ರಾಹ್ಮಣದ ೧೪ನೇ ಕಾಂಡಕ್ಕೆ ಶೇರಿದ ಬೃಹದ್-ಆರಣ್ಯಕ-ಉಪನಿಷತ್ತಿನ ೪ನೇ ಅಧ್ಯಾಯದಲ್ಲಿ ಬರೆದಿರುವದೇನಂದರೆ —

ಅಯಂ ವಿಜ್ಞಾನ-ಮಯಃ**ಪುರುಷಃ**ಉಚ್ಚಾವ ಲೋಕಾವ್ ಅನುಸಂಚರತಿ**। ೭ನೇ ಕಂಡಿಕೆ। ಸ ವಾzಯಂ ಪುರುಷೋ ಜಾಯಮಾನಃ ಶರೀರಮ್ ಅಭಿಸಮ್ಪದ್ಯಮಾನಃ ಪಾಪ್ಮಭಿಃ ಸಂಸೃಜ್ಯತೇ**। ೮ನೇ ಕಂಡಿಕೆ। ಸ್ವಪ್ನಾzನ್ತ ಉಚ್ಚಾzವಚಮ್ ಈಯಮಾನೋ ರೂಪಾಣಿ ದೇವಃ ಕುರುತೇ ಬಹೂನಿ। ಉತೇzವ ಸ್ತ್ರೀಭಿಃ ಸಹ ಮೋದಮಾನೋ ಜಕ್ಷದ್ ಉತೇzವಾzಪಿ ಭಯಾನಿ ಪಶ್ಯನ್॥ ೧೩ನೇ ಕಂಡಿಕೆ॥**ರತ್ವಾ ಚರಿತ್ವಾ ದೃಷ್ಟ್ವೈzವ ಪುಣ್ಯಂ ಚ ಪಾಪಂ ಚ। ಸ ಯತ್ ತತ್ರ ಕಿಂಚಿತ್ ಪಶ್ಯತ್ಯ ಅನನ್ವಾಗತಸ್ (ಅನುಬದ್ಧ ಇತಿ ಶಂಕರಃ) ಭವತ್ಯ ಅಸಂಗೋ ಹ್ಯ ಅಯಂ ಪುರುಷಃ (ಸ್ವಪ್ನ-ಸಂಗ-ಜ್ವರ್ ದೋಷೈರ್ ನ ಲಿಪ್ಯತ ಇವೇzತಿ ಶಂಕರಃ)। ೧೫ನೇ ಕಂಡಿಕೆ। **ಯದ್ ಏವ ಜಾಗ್ರದ್ ಭಯಂ ಪಶ್ಯತಿ ತದ್ ಅ

ತ್ರಾ೩ವಿದ್ಯಯಾ ಮನ್ಯತೇ**। ೨೦ನೇ ಕಂಡಿಕೆ। ಅತ್ರ (ಅವಿದ್ಯಾ-ಕಾಮ-ಕರ್ಮ-ವಿನಿರ್ಮುಕ್ತ್ಯಾಂ ಸ್ಥಿತಾವ್ ಇತಿ ಶಂಕರಃ) ಪಿತಾ ಅಪಿತಾ ಭವತಿ ಮಾತಾ ಅಮಾತಾ ಲೋಕಾ ಅಲೋಕಾ ದೇವಾ ಅದೇವಾ ವೇದಾ ಅವೇದಾಃ। ಅತ್ರ ಸ್ತೇನಾ೩ಸ್ತೇನಾ ಭವತಿ ಭ್ರೂಣ-ಹಾ ಅಭ್ರೂಣ-ಹಾ ಚಾಂಡಾಲಾ೩ಚಾಂಡಾಲಃ ಪೌಲ್ಕಸಾ೩ಪೌಲ್ಕಸಃ ಶ್ರಮಣಾ೩ಶ್ರಮಣಸ್ ತಾಪಸಾ೩ತಾಪಸಾ ನನ್ವಾಗತಂ ಪುಣ್ಯೇನ ಅನ್ವಾಗತಂ ಪಾಪೇನ ಶೀಣ್ಯಾರ್ ಹಿ ತದಾ ಸರ್ವಾನ್ ಶಾ೩ಕಾನ್ ಹೃದಯಸ್ಯ ಭವತಿ॥ ೨೨ನೇ ಕಂಡಿಕೆ; ಈ ಕಂಡಿಕೆಗಳು ಳನೇ ಅಧ್ಯಾಯದ ೩ನೇ ಬ್ರಾಹ್ಮಣದೊಳಗಿನವು॥ ಸ ವಾ ಏಷ ಮಹಾನ್ ಅಜ ಆತ್ಮಾ**ಸರ್ವಸ್ಯಾ೩ಧಿಪತಿಃ ಸ ನ ಸಾಧುನಾ ಕರ್ಮಣಾ ಭೂಯಾನ್ ನೋ ಏವಾ೩ಸಾಧುನಾ ಕನೀಯಾನ್***ಸ ಆತ್ಮಾ**ಅಸಂಗೋ ನ ಹಿ ಸಜ್ಯತೇ**ನ ಪೃಥತೇ ನ ರಿಷ್ಯತ್ಯೈ ಖಿತಮ್ ಉ ಹ್ಯೇ೩ವೈತೇ ನ ತರತ ಇತಿ। ಅತಃ ಪಾಪಮ್ ಅಕರವಮ್ ಇತ್ಯೈ ಅತಃ ಕಲ್ಯಾಣಮ್ ಇತ್ಯೈ ಉಚೇ ಉ ಹ್ಯೇ೩ವೈಷ ಏತೇ ತರತಿ ನೈ೩ನಂ ಕೃತಾ೩ಕೃತೇ ತಪತಃ॥ ೨೩ನೇ ಕಂಡಿಕೆ॥ ತದ್ ಏತದ್-ಋಚಾ೩ಭ್ಯುಕ್ತಮ್ ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ನ ವರ್ಧತೇ ಕರ್ಮಣಾ ನೋ ಕನೀಯಾನ್ ತಸ್ಯೈ೩ವ ಸ್ಯಾತ್ ಪದವಿತ್ ತಂ ವಿದಿತ್ವಾ ನ ಲಿಪ್ಯತೇ ಕರ್ಮಣಾ ಪಾಪಕೇನೇ೩ತಿ॥ ೨೩ನೇ ಕಂಡಿಕೆ; ಈ ಕಂಡಿಕೆಗಳು ಳನೇ ಅಧ್ಯಾಯದ ಳನೇ ಬ್ರಾಹ್ಮಣದೊಳಗಿನವು॥

ಟೀಕು॥ ವಿಜ್ಞಾನವಾಗಿರುವ ಈ ಪುರುಷನು (ಅಂದರೆ ಮಾಯೆಯುಳ್ಳ ಆ ಪರಮಾತ್ಮನು ಇಲ್ಲವೆ ಹಿಂದು ಬೋಧನೇ ಪ್ರಕಾರ ಅವನೇ ಆಗಿರುವ ಜೀವಾತ್ಮನು) ಎರಡು ಲೋಕಗಳಲ್ಲಿ (ಬೇರೆ ಬೇರೆ ಜನ್ಮಗಳನ್ನು ಎತ್ತುತ್ತಾ) ಸಂಚಾರ ಮಾಡುತ್ತಾನೆ (ಸಂಸಾರದೊಳಗಿದ್ದಾನೆಂಬಂತೆ); ಈ ಪುರುಷನು (ಅಂದರೆ ಮೇಲೆ ಹೇಳಿದವನು) ಹುಟ್ಟುವಾಗಲೂ (ಅಂದರೆ ಮನುಷ್ಯನೂ ಮುಂತಾದ್ದೂ ಆಗುವಾಗಲೂ) ಶರೀರವನ್ನು ಪಡಕೊಳ್ಳುವಾಗಲೂ ಪಾಪಗಳಿಗೆ ಕೂಡಿಸಲ್ಪಡುತ್ತಾನೆ; ಸ್ವಪ್ನದೊಳಗೆ (ಅಂದರೆ ಜಾಗರೂಕತನದ ಹಾಗೆ ಕಾಣಿಸುತ್ತಿದ್ದರೂ ಬರೇ ನಿದ್ರೆಯ ಕನಸಾಗಿರುವ ಮಾಯಾ ಸಂಸಾರದೊಳಗೆ; ಮಾಯೆಯು ನಿದ್ರೆಯಾಗಿದೆಂಬದಕ್ಕೆ ಈ ಗ್ರಂಥದ

ನೇ ಪಾನು ನೋಡಿರಿ) ದೇವರು (ಅಂದರೆ ಮೇಲೆ ಗೊತ್ತು ಮಾಡಿದವನು) ಉತ್ತಮವಾದದ್ದನ್ನೂ ನೀಚವಾದದ್ದನ್ನೂ (ಅಂದರೆ ಅಂಥ ಎರಡು ತರದ ಭಾವಗಳನ್ನು) ತಕ್ಕೊಂಡು, (ಕ್ರಿಯಾದಿಗಳ ಉತ್ತಮವಾದ ಮತ್ತು ನೀಚವಾದ) ಬಹಳ ರೂಪಗಳನ್ನು ಮಾಡುತ್ತಾನೆ; ನಿಶ್ಚಯವಾಗಿಯೇ, ಅವನು ಸ್ತ್ರೀಯರ ಸಂಗಡ ವಿಲಾಸ ಪಡುತ್ತಾ (ಈ ಗ್ರಂಥದ ೩೩ನೇ ಪಾನು ನೋಡಿರಿ), ನಗುತ್ತಾ, ನಿಶ್ಚಯವಾಗಿಯೇ (ತನ್ನ ದುಷ್ಕ್ರಿಯಾದಿಗಳಿಂದ) ಭಯ ನೋಡುತ್ತಾ ಇದ್ದಾನೆ; ವಿಲಾಸ ಪಡುತ್ತಾ, ಚರಿಸುತ್ತಾ, ಪುಣ್ಯವನ್ನೂ ಪಾಪವನ್ನೂ ನೋಡುತ್ತಾ ಇದ್ದು (ಅಂದರೆ ಅವನು ಮಾಡುವ ಪುಣ್ಯ ಪಾಪಗಳು ಕನಸಿನಲ್ಲಿ ನೋಡುವ ಬರೇ ಮಾಯೆಯೇ ಎಂಬಂತೆ), ಅದರಲ್ಲಿ (ಅಂದರೆ ಒಳ್ಳೇ ಮತ್ತು ಕೆಟ್ಟ ಕ್ರಿಯೆಗಳುಳ್ಳ ಬರೇ ಕನಸಾದ ಸಂಸಾರದಲ್ಲಿ) ನೋಡುವ ಯಾವದರಿಂದಲೂ (ಮೋಕ್ಷವು ತಪ್ಪಿ ಹೋಗುವ ಹಾಗೆಯೂ ಶಿಕ್ಷೆಯು ಬರುವ ಹಾಗೆಯೂ) ಬಂಧಿಸಲ್ಪಡುವದಿಲ್ಲ, ಹ್ಯಾಗಂದರೆ ಈ ಪುರುಷನು (ಅಂದರೆ ಮೇಲೆ ಹೇಳಿದವನು) ಏನೂ ಹತ್ತದಂಥವನಾಗಿದ್ದಾನೆ (ಅವನಲ್ಲ ಅವನ ಪ್ರಕೃತಿಯೇ ಎಲ್ಲಾ ಕ್ರಿಯೆಗಳನ್ನು ಮಾಡಿ, ಅವುಗಳ ಫಲವನ್ನು ಸಹ ತಿನ್ನುತ್ತದೆ ಎಂಬಂತೆ; ಶಂಕರಾಚಾರ್ಯನು—ಸಂಸಾರವೆಂಬ—ಸ್ವಪ್ನದಲ್ಲಿರುವ ಅವನಿಂದ ಹುಟ್ಟುವ ದೋಷಗಳು ಅವನಿಗೆ ಹತ್ತುವದೇ ಇಲ್ಲ ಎಂತ, ಟೀಕು ಮಾಡುತ್ತಾನೆ); ಎಚ್ಚತ್ತವನಾದ (ಅಂದರೆ ಸಂಸಾರವೆಂಬ ಕನಸಿನೊಳಗೆ ಕಾಣುವಂಥಾದ್ದು ನಿಜವಾಗಿದ್ಧೀತೆಂದು ಮನಸ್ಸಾಕ್ಷಿಯ ಮೇಲೆ ತಿಳುಕೊಂಡವನಾದ) ಅವನು ನೋಡುವ ಭಯವನ್ನು ಅವಿದ್ಯೆಯಿಂದ ಕಲ್ಪಿಸಿ ಕೊಳ್ಳುತ್ತಾನೆ;—ಅಲ್ಲಿ (ಅಂದರೆ ಶಂಕರಾಚಾರ್ಯನ ಭಾಷ್ಯದ ಪ್ರಕಾರ—ಮಾಯೆಯಾದ—ಅವಿದ್ಯೆಯಿಂದಲೂ,—ಪ್ರಕೃತಿಯಲ್ಲ ನಾನೇ ಮಾಡಿದನೆಂಬ ಮಾಯೆಯೆ—ಕಾಮದಿಂದಲೂ ಕರ್ಮಗಳಿಂದಲೂ ಅವನು ವಿಮುಕ್ತನಾದ ಸ್ಥಿತಿಯಲ್ಲಿ) ತಂದೆಯು ತಂದೆಯಲ್ಲ (ಛೀ! ಛೀ!), ತಾಯಿಯು ತಾಯಿಯೆಲ್ಲ (ಛೀ! ಛೀ!), ಲೋಕಗಳು ಲೋಕಗಳಲ್ಲ, ದೇವರುಗಳು ದೇವರುಗಳಲ್ಲ, ವೇದಗಳು ವೇದಗಳಲ್ಲ * (ಅಂದರೆ ನಾಮ ರೂಪ ಕ

* ಉಪಗ್ರಂಥದ ೧೯ನೇ ಅಂಕೆಯದನ್ನು ನೋಡಿರಿ.

ರ್ಮಗಳ ಸಂಬಂಧದ್ದಾದ ಅವೆಲ್ಲಾ ಬರೇ ಮಾಯೆಯೂ ಸುಳ್ಳೂ ಆಗಿ ವೆ); ಅಲ್ಲಿ (ಅಂದರೆ ಆ ಸ್ಥಿತಿಯಲ್ಲಿ) ಕಳ್ಳನು ಕಳ್ಳನಲ್ಲ, ಕೂಸುಗಳನ್ನು ಕೊಂದವನು ಕೂಸುಗಳನ್ನು ಕೊಂದವನಲ್ಲ, ಚಾಂಡಾಲನು ಚಾಂಡಾಲನಲ್ಲ, ಪೌಲ್ಕಸನು (ಅಂದರೆ ಕ್ಷತ್ರಿಯರ ಹೆಂಗಸಿನ ಮತ್ತು ಶೂದ್ರರ ಗಂಡಸಿನ ಮುಖದಿಂದ ಹುಟ್ಟಿದವನು) ಪೌಲ್ಕಸನಲ್ಲ, ತಿರಕನು ತಿರಕನಲ್ಲ, ತಪಸ್ವಿಯು ತಪಸ್ವಿಯಲ್ಲ (ಅಂಥವರ ಕರ್ಮಗಳೂ ನಾಮಗಳೂ ಲೆಖ್ಖ ಒಪ್ಪಿಸ ಬೇಕಾಗದ ಬರೇ ಮಾಯೆಯೇ ಎಂಬಂತೆ); ಅದು (ಅಂದರೆ ಆ ನಾಮ ರೂಪ ಕರ್ಮಗಳನ್ನು ಸುಳ್ಳೆಂಬ ಜ್ಞಾನದಿಂದ ದಾಟಿದ ಮೋಕ್ಷ ಸ್ಥಾನವು) ಪುಣ್ಯದ ಸಂಬಂಧವಾದದ್ದಲ್ಲ, ಪಾಪದ ಸಂಬಂಧವಾದ್ದಲ್ಲ (ಅಂದರೆ ಬರೇ ನೀಚ ಮಾಯೆಯಾದ ಇವೆರಡು ಅಲ್ಲಿ ಹ್ಯಾಗೂ ಶೇರುವದಿಲ್ಲ); ಆವಾಗ್ಯೆ (ಅಂದರೆ ಕರ್ಮಾದಿಗಳನ್ನು ಸುಳ್ಳೆಂತ ತಿಳುಕೊಂಡಾಗ್ಯೆ) ಅವನು (ತನ್ನ ಕರ್ಮಗಳಿಂದ ಹುಟ್ಟಿದ) ಹೃದಯ ಶೋಕಗಳನ್ನೆಲ್ಲಾ ದಾಟುವವನಾಗಿದ್ದಾನೆ (ಹ್ಯಾಗಂದರೆ ಶಿಕ್ಷೆಗೆ ಅಂಜುವದು ಯಾತಕ್ಕೆ? ಶಿಕ್ಷೆಯೆಲ್ಲಾ ಪ್ರಕೃತಿಗೆ ಹೋಗುತ್ತದೆ, ಪಾಪಕ್ಕೆ ಹಗೆ ಮಾಡಿ ಪಾಪಿಷ್ಟರಿಗೆ ಶಿಕ್ಷೆ ಕೊಡುವಂಥ ದೇವರಿಲ್ಲವೆಂಬಂತೆ);—ಈ ಮಹಾನ್ತನಾದಂಥ, ಹುಟ್ಟಿದಿರುವಂಥ ಆತ್ಮನು (ಅಂದರೆ ಮೇಲೆ ಗೊತ್ತು ಮಾಡಿದ ಪರಮಾತ್ಮನು ಇಲ್ಲವೆ ಜೀವಾತ್ಮನು ಅಂದರೆ ಮನುಷ್ಯನು) ಎಲ್ಲಾದರ ಅಧಿಪತಿಯಾಗಿದ್ದಾನೆ (ಅಂದರೆ ತಾನು ಮಾಡಿದ ಮತ್ತು ಮಾಡುವ ಕರ್ಮಗಳ ಲೆಖ್ಖವನ್ನು ಯಾರಿಗೂ ಒಪ್ಪಿಸ ಬೇಕಾಗದೆ ಯಾರಿಂದಲೂ ಯಾತರಿಂದಲೂ ಶಿಕ್ಷೆ ದಿಕ್ಷೆ ಮಾನ ಅವಮಾನ ಪಡ ಬೇಕಾಗದೆ ಇರುವಂಥವನಾಗಿದ್ದಾನೆ), (ಆದ್ದರಿಂದ) ಅವನು (ತಾನು ಮಾಡಿದ ಮತ್ತು ಮಾಡುವ) ಒಳ್ಳೇ ಕರ್ಮದಿಂದ ಹೆಚ್ಚಾಗುವದಿಲ್ಲ (ತಾನು ಮಾಡಿದ ಮತ್ತು ಮಾಡುವ) ಕೆಟ್ಟ ಕರ್ಮದಿಂದ ಕಡಿಮೆಯಾಗುವದಿಲ್ಲ (ಅಂದರೆ ಅವನು ಯಥೇಚ್ಛೆ ಯಾವ ಕರ್ಮಗಳನ್ನಾದರೂ, ಯಾರ ಭಯವೂ ಯಾತರ ಭಯವೂ ಇಲ್ಲದೆ, ನಡಿಸ ಬಹುದು, ಎಲ್ಲಾ ಭಯವು ಮಾಯಾಭ್ರಾಂತಿಯಾಗಿದೆ; ಈ ಗ್ರಂಥದ ೬ನೇ ಪಾನು ನೋಡಿರಿ); ಆ ಆತ್ಮನು ಏನೂ ಹತ್ತದಂಥವನಾಗಿದ್ದಾನೆ, ಹ್ಯಾಗಂದರೆ ಅವನಿಗೆ (ಅವನ ಕ್ರಿಯೆಗಳಲ್ಲಿಯೂ ಇವುಗಳ ಫಲದಲ್ಲಿ

ಯೂ) ಯಾವದೂ ಹತ್ತುವದಿಲ್ಲ (ಅದೆಲ್ಲಾ ಮಾಯೆಗೆ ಹೋಗುತ್ತದೆಂತ ತನ್ನ ಜ್ಞಾನಯೋಗದ ಮೇಲೆ ಬಲ್ಲನೆಂಬಂತೆ); ಅವನು (ತನ್ನ ಒಳ್ಳೇ ಮತ್ತು ಕೆಟ್ಟ ಕ್ರಿಯೆಗಳಿಂದ ಸುಖ ದುಖ್ಖವೆಂಬ) ವ್ಯಥೆ ಪಡುವದಿಲ್ಲ, (ತನ್ನ ದುಷ್ಕ್ರಿಯೆಗಳಿಂದ) ನಾಶ ಪಡುವದಿಲ್ಲ; ಇವೆರಡು (ಪಾಪವೂ ಪುಣ್ಯವೂ) ಅವನ (ತಲೆಯ) ಮೇಲೆ ಬರುವದಿಲ್ಲ (ಅಂದರೆ ಅವನು ತನ್ನ ಒಳ್ಳೇ ಕ್ರಿಯೆಗಳಿಂದ ಸುಖಕ್ಕೊಳಗಾಗುವದಿಲ್ಲ, ಮತ್ತು ತನ್ನ ಕೆಟ್ಟ ಕ್ರಿಯೆಗಳಿಂದ ಭಯಕ್ಕೊಳಗಾಗುವದಿಲ್ಲ); ಆದ್ದರಿಂದ ಅವನು (ತಾನು ಪಾಪ ಮಾಡಿದ್ದರೆ) ನಾನು ಪಾಪ ಮಾಡಿದೆನೆಂತಲೂ (ತಾನು ಪುಣ್ಯ ಮಾಡಿದ್ದರೆ) ನಾನು ಪುಣ್ಯ ಮಾಡಿದೆನೆಂತಲೂ ಚಿಂತಿಸುವದಿಲ್ಲ; ಅವನು ಇವೆರಡರ (ತಲೆಯ) ಮೇಲೆ ಹೋಗುತ್ತಾನೆ (ಅಂದರೆ ಅವೆರಡನ್ನು ಮಾಡುವ ಅಧಿಪತಿಯಾಗಿ, ಅವುಗಳಿಂದ ಬರುವ ಸುಖಕ್ಕೂ ಭಯಕ್ಕೂ ಶಿಕ್ಷೆಗೂ ಒಳಗಾಗುವದಿಲ್ಲ); (ಅವನು ಮಾಡಿದ ಮತ್ತು ಮಾಡುವ) ಸುಕ್ರಿಯೆಗಳೂ ದುಷ್ಕ್ರಿಯೆಗಳೂ ಅವನಿಗೆ ಮನಸ್ತಾಪ ಹುಟ್ಟಿಸುವದಿಲ್ಲ (ಅವು ಸುಳ್ಳೆಂತ ಬಲ್ಲನೆಂಬಂತೆ);—ಅದೇ ಈ ಋಗ್ವೇದದ ಶ್ಲೋಕದಲ್ಲಿ ಹೇಳಿಯಬೆ ಏನಂದರೆ—ಬ್ರಹ್ಮವಾದವನ (ಅಂದರೆ ತಾನು ಬ್ರಹ್ಮವಾಗಿದ್ದೇನೆಂತ ತಿಳುಕೊಂಡವನ) ಈ ನಿತ್ಯ ಮಹಿಮೆಯು (ಅವನು ಮಾಡುವ ಒಳ್ಳೇ) ಕರ್ಮದಿಂದ ವೃದ್ಧಿಯಾಗುವದಿಲ್ಲ, ಮತ್ತು (ಅವನು ಮಾಡುವ ಕೆಟ್ಟ ಕರ್ಮದಿಂದ) ಕಡಿಮೆಯಾಗುವದಿಲ್ಲ; ಅದರ (ಅಂದರೆ ತಾನು ಬ್ರಹ್ಮವಾಗಿರುವ ಮಹಿಮೆಯ) ಅರ್ಥವನ್ನು ತಿಳುಕೊಂಡವನಾಗಿರಲಿ; ಅದನ್ನು (ಅಂದರೆ ತಾನು ಸರ್ವಾಧಿಪತಿಯಾಗಿ ಯಾರಿಗೂ ತನ್ನ ಕರ್ಮಗಳ ಲೆಖ್ಖ ಒಪ್ಪಿಸಬೇಕಾಗದ ಆ ಮಹಿಮೆಯನ್ನು) ತಿಳುಕೊಂಡರೆ, (ಅವನು ಮಾಡುವ) ಪಾಪವುಳ್ಳ ಕರ್ಮಗಳು ಅವನಿಗೆ ಹತ್ತುವದಿಲ್ಲ.—

ಮತ್ತು, ತಮ್ಮಾ, ಕೃಷ್ಣ-ಯಜುರ್-ವೇದದ ತೈತ್ತಿರೀಯ-ಉಪನಿಷತ್ತಿನ ಏನೇ ಅಧ್ಯಾಯವಾಗಿರುವ ಬ್ರಹ್ಮಾನಂದ-ವಲ್ಲಿಯ ಏನೇ ಅನುವಾಕವೇನಂದರೆ—

***ಆನನ್ದಂ ಬ್ರಹ್ಮಣೋ ವಿದ್ವಾನ್। ನ ಬಿಭೇತಿ ಕುತಶ್ ಚನ। ತಂ ಹ ವಾವ ನ ತಪತಿ। ಕಿಮ್ ಅಹಂ ಸಾಧು ನಾಕರವಂ। ಕಿಮ್

ಅಹಂ ಪಾಪಮ್ ಅಕರಮಮ್ ಇತಿ। ಸ ಯ ಏವಂ ವಿದ್ವಾನ್ ಏತೇ ಆ
ತ್ಮಾನಂ ಸ್ಪೃಣುತೇ। ಉಭೇ ಹ್ಯೆ ಏವೈಷ ಏತೇ ಆತ್ಮಾನಂ ಸ್ಪೃಣು
ತೇ। ಯ ಏವಂ ವೇದ। ಇತ್ಯೆ ಉಪನಿಷತ್॥೯ನೇ ಅನುವಾಕ॥

ಟೀಕು॥(ತಾನಾಗಿರುವ) ಬ್ರಹ್ಮದ ಆನಂದವನ್ನು ತಿಳುಕೊಂಡವನು (ಅಂದ
ರೆ ಬ್ರಹ್ಮವಾಗಿರುವ ತಾನು ಬರೇ ಮಾಯಾಲೀಲೆಯಾಗಿರುವ ತನ್ನ ಕೈ
ಯೆಗಳಿಂದ ಹತ್ತಲ್ಪಡದೆ ತನ್ನ ಕೈಯೆಗಳು ಎಂಥವುಗಳಾಗಿದ್ದರೂ ತಾನು
ಆನಂದದಲ್ಲಿರ ತಕ್ಕಂಥವನೆಂದು ತಿಳುಕೊಂಡವನು) ಒಂದಕ್ಕಾದರೂ ಭ
ಯ ಪಡುವದಿಲ್ಲ; ಒಳ್ಳೆಯದನ್ನು ನಾನು ಯಾಕೆ ಮಾಡಲಿಲ್ಲ? ಪಾಪವನ್ನು
ನಾನು ಯಾಕೆ ಮಾಡಿದೆನು? ಎಂಬದು ಅವನಿಗೆ ಮನಸ್ತಾಪವನ್ನು ಹು
ಟ್ಟಿಸುವದಿಲ್ಲ, ನಿಶ್ಚಯ! ಹೀಗೆ (ಅಂದರೆ ಮೇಲೆ ಹೇಳಿದಂತೆ) ತಿಳುಕೊಂ
ಡವನು ಈ ಎರಡರಿಂದ (ಅಂದರೆ ಒಳ್ಳೆಯದರಿಂದಲೂ ಪಾಪದಿಂದಲೂ, ಬರೇ
ಮಾಯಾಲೀಲೆಯೆಂದು,) ತನ್ನನ್ನು ಬಿಡಿಸಿ ಕೊಳ್ಳುತ್ತಾನೆ (ಅಂದರೆ ತನ್ನ
ಜ್ಞಾನಯೋಗವೆಂಬದರ ಮುಖಾಂತರದಿಂದ ಅವನ್ನು ಅತ್ತಲಾಗೆ ಪ್ರಕೃತಿ
ಯೆ ಕಡೆಗೆ ಹಾಕುತ್ತಾನೆ); ಹೀಗೆ ತಿಳುಕೊಂಡವನು ಈ ಎರಡರಿಂದ ತನ್ನನ್ನು
ಬಿಡಿಸಿ ಕೊಳ್ಳುತ್ತಾನೆ, ನಿಶ್ಚಯ! ವೇದದ ಬೋಧನೆಯು ಇದೇ*.—

ಮತ್ತು, ತಮ್ಮಾ, ಭಾಗವತ-ಪುರಾಣದ ೧೦ನೇ ಸ್ಕಂಧದ ೩೩ನೇ ಅ
ಧ್ಯಾಯದಲ್ಲಿರುವದೇನಂದರೆ (ಈ ಗ್ರಂಥದ ೩೯ನೇ ಪಾನು ನಾೞಿರಿ) —

ಪರೀಕ್ಷಿದ್-ರಾಜಾ ಉವಾಚ॥

ಸ ಕಥಂ ಧರ್ಮ-ಸೇತೂನಾಂ ವಕ್ತಾ ಕರ್ತಾಽಭಿರಕ್ಷಿತಾ।
ಪ್ರತೀಪಮ್ ಆಚರದ್ ಬ್ರಹ್ಮನ್ ಪರ-ದಾರಾಽಭಿಮರ್ಷಣಂ॥೨೮॥
ಆಪ್ತ-ಕಾಮೋ ಯದು-ಪತಿಃ ಕೃತವಾನ್ ವೈ ಜುಗುಪ್ಸಿತಂ।
ಕಿಮ್ ಅಭಿಪ್ರಾಯ ಏತಂ ನಃ ಸಂಶಯಂ ಛಿನ್ಧಿ ಸುವ್ರತ॥೨೯॥

ಶುಕ-ಮುನಿರ್ ಉವಾಚ॥

ಧರ್ಮ-ವ್ಯತಿಕ್ರಮೋ ದೃಷ್ಟ ಈಶ್ವರಾಣಾಂ ಚ ಸಾಹಸಂ।
ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವ-ಭುಜೋ ಯಥಾ॥೩೦॥
ಯೋಗ-ಪ್ರಜಾಪತಿ-ವಿಧುತಾಽಖಿಲ-ಕರ್ಮ-ಬಂಧಾಃ।

* ಉಪಸ್ಕಂಧದ ೧೦ನೇ ಅಂಕೆಯದನ್ನು ನಾೞಿರಿ.

ಸ್ವೈರಂ ಚರನ್ತಿ ಮುನಯೋಽಪಿ ನ ನಹ್ಯಮಾನಾಸ್
ತನ್ಯೋಽಚ್ಛಯಾತ್ತ-ವಪುಷಃ ಕುತ ಏವ ಬನ್ಧಃ ॥೩೫॥
ಗೋಪೀನಾಂ ತತ್-ಪತೀನಾಂ ಚ ಸರ್ವೇಷಾಮ್ ಏವ ದೇಹಿನಾಂ।
ಯೋಽನ್ತಶ್ ಚರತಿ ಸೋಽಧ್ಯಕ್ಷಃ ಕ್ರೀಡನೇನೇಽಹ ದೇಹ-ಭಾಕ್ ॥೩೬॥

ಟೀಕು॥ ಪರಿಕ್ಷಿದ್-ರಾಜನು ಕೇಳಿದ್ದೇನಂದರೆ—ಧರ್ಮಸೇತುವೆಗಳನ್ನು ಹೇಳುವವನೂ ಉಂಟು ಮಾಡುವವನೂ ರಕ್ಷಿಸುವವನೂ ಆದ ಅವನು (ಅಂದರೆ ಕೃಷ್ಣನು; ಎಲೇ, ಪರಿಕ್ಷಿದ್-ರಾಯನೇ, ಅವನೆಲ್ಲಿಯಾದರೂ ನಿಜ ಧರ್ಮದ ಮಾರ್ಗ ಹೇಳಿದನೋ? ಉಂಟು ಮಾಡಿದನೋ? ರಕ್ಷಿಸಿದನೋ?) ವಿರೋಧವಾದದ್ದನ್ನು ಅಂದರೆ ಪರರ ಹೆಂಡರನ್ನು ಕೆಡಿಸುವದನ್ನು ಯಾಕೆ ನಡಿಸಿದನು, ಬ್ರಾಹ್ಮಣನೇ? ಎಲ್ಲಾ ಕಾಮಾರ್ಥವನ್ನು ಹೊಂದಿದ ಯದುಗಳ ಪತಿಯು (ಅಂದರೆ ಕೃಷ್ಣನು) ದೂಷಣೆಯುಳ್ಳದ್ದನ್ನೇ ಮಾಡಿದನು; ಇದಕ್ಕೇನು ಅಭಿಪ್ರಾಯ? ಸುವ್ರತವುಳ್ಳವನೇ, ಈ ನನ್ನ ಸಂಶಯವನ್ನು ಪರಿಹರಿಸು!—ಅದಕ್ಕೆ ಶುಕ-ಮುನಿಯು ಅಂದನು—ಈಶ್ವರರುಗಳಲ್ಲಿ (ಅಂದರೆ ಕೃಷ್ಣಾದಿ ದೇವರುಗಳಲ್ಲಿಯೂ ತಾವು ಬ್ರಹ್ಮವೆಂತ ತಿಳುಕೊಂಡ ಜನರಲ್ಲಿಯೂ) ಕಾಣ ಬರುವ, ಧರ್ಮಕ್ಕೆ ವಿರೋಧವಾದ ನಡತೆಯೂ ಭಯವರಿಯದ ಕೆಲಸವೂ ಆ ಶಕ್ತಿಯುಳ್ಳವರಿಗೆ ದೋಷವಾಗುವದಿಲ್ಲ (ಛೀ! ಛೀ!), ಎಲ್ಲಾನ್ನೂ ತಿನ್ನುವಂಥ ಅಗ್ನಿಗೆ ದೋಷವಾಗದಂತೆ (ಆದರೆ ನಿಜ ದೇವರ ಕೋಪಾಗ್ನಿಯು ಕೃಷ್ಣಾದಿ ಸಕಲ ಪಾಪಿಷ್ಟರನ್ನು ದಹಿಸಿ ಬಿಸ ಬೇಕಲ್ಲವೋ?); ಬುದ್ಧಿವಂತರಾದರೂ ಯೋಗದ ಬಲದಿಂದ (ಅಂದರೆ ತಾವಲ್ಲ ಮಾಯೆಯು ಎಲ್ಲಾ ಕರ್ಮಗಳನ್ನು ಮಾಡುತ್ತ ದೆಂಬ ತಮ್ಮ ಜ್ಞಾನಯೋಗದಿಂದ) ಸಕಲ ಕರ್ಮಗಳ ಬಂಧಗಳನ್ನು ಝಾಡಿಸಿ ಬಿಟ್ಟು, (ಕಾಡುಮೃಗಗಳಂತೆ) ಕಟ್ಟಿಸಿಕೊಳ್ಳದೆಯಶೀಚ್ಛೆ ನಡೆಯುತ್ತಾರಲ್ಲ? ಹಾಗಾದರೆ ಇಚ್ಛೇ ಮೇಲೆ ದೇಹ ತಕ್ಕೊಂಡಂಥ ಅವನಿಗೆ (ಅಂದರೆ ಕೃಷ್ಣನಿಗೆ) ಯಾಕೆ ಬಂಧವು? ಗೋಪಿಗಳ ಮತ್ತು ಇವರ ಗಂಡಂದ್ಯಾರ ಮತ್ತು ಸಕಲ ದೇಹವುಳ್ಳವರ ಒಳಗಡೆಯಲ್ಲಿ ಚರಿಸುವಂಥವನಾದ ಅವನು ಅವರ ಅಧಿಪತಿಯೂ ಈ ಲೋಕದಲ್ಲಿ ಕ್ರೀಡೆಯಿಂದ ದೇಹಗಳನ್ನು

ತಕ್ಕೊಳ್ಳುವವನೂ ಆಗಿದ್ದಾನೆ (ಅಂದರೆ ನೀತಿ ನ್ಯಾಯಗಳನ್ನು ಮಾತ್ರ ಲಕ್ಷಿಸುವದಿಲ್ಲವೆಂಬಂತೆ).—

ಮತ್ತು, ತಮ್ಮಾ, ಶಂಕರಾಚಾರ್ಯನು ಶ್ವೇತಾಶ್ವತರ-ಉಪನಿಷತ್ತನ್ನು ಕುರಿತು ರಚಿಸಿದ ಭಾಷ್ಯದ ಶೀಲನೇ ಪಾನಿನಲ್ಲಿರುವ ಲಿಂಗ-ಪುರಾಣದ ಒಂದು ಶ್ಲೋಕವೇನಂದರೆ—

ಜ್ಞಾನಿನಃ ಸರ್ವ-ಕರ್ಮಾಣಿ ಜೀರ್ಯ್ಯನ್ತೇ ನಾತ್ರ ಸಂಶಯಃ।
ಕ್ರೀಡನ್ ಅಪಿ ನ ಲಿಪ್ಯೇತ ಪಾಪೈರ್ ನಾನಾ-ವಿಧೈರ್ ಅಪಿ॥

ಟೀಕು॥(ಪ್ರಕೃತಿಯ ವಿಷಯವಾದ) ಜ್ಞಾನಿಯ ಎಲ್ಲಾ ಕರ್ಮಗಳು (ಅಂದರೆ ಒಳ್ಳೆಯವುಗಳೂ ಕೆಟ್ಟವುಗಳೂ) ಹಾಳಾಗುತ್ತವೆ, ಇದರಲ್ಲಿ ಸಂಶಯವಿರುವದಿಲ್ಲ; ಅವನು (ಅಂದರೆ ಅಂಥಾ ಜ್ಞಾನಿಯು ಪಾಪಗಳಲ್ಲಿ) ಕ್ರೀಡೆಯನ್ನು (ಅಂದರೆ ತನ್ನ ದೇವರಂತೆ ಲೀಲೆಯನ್ನು) ಮಾಡಿದರೂ ಪಾಪಗಳಿಂದ—ಅವು ನಾನಾ ವಿಧವಾಗಿದ್ದರೂ—ಮೈಲಿಗೆಯಾಗುವದಿಲ್ಲ.—

ಕೇಳಿದಿರಾ, ತಮ್ಮಾ? ಮತ್ತು ಈಗ ನಾವು ಈ ವರೆಗೆ ಮಾತಾಡಿದ್ದರ ಸಾರಾಂಶವೇನಂದರೆ, ಹಿಂದು ವೇದ ಶಾಸ್ತ್ರಗಳು—ದೇವರು ತಾನು ಅಶುದ್ಧನೆಂತಲೂ, ಅವನು ಅಶುದ್ಧತ್ವದ ಶೆಲೆಯೆಂತಲೂ, ಅವನು ಪಾಪಾತ್ಪತ್ತಿಕರ್ತನೆಂತಲೂ, ಅವನು ಜನರ ನಿಜ ಸುಖಕ್ಕೂ ನಿಜ ಮೋಕ್ಷಕ್ಕೂ ವಿರೋಧಿಯೆಂತಲೂ, ಮರಣ ನರಕಾದಿಗಳ ಕಾರಣವೆಂತಲೂ, ನ್ಯಾಯಕರ್ತನಲ್ಲವೆಂತಲೂ, ದೇವರನ್ನು ಕುರಿತು ಹೇಳಿ,—ಮನುಷ್ಯರು, ಕಾಲೆಗಾರರೂ ಕಳ್ಳರೂ ಪಟಿಂಗರೂ ಇತ್ಯಾದಿ ಆಗುವದಕ್ಕೆ, ಕೆಟ್ಟ ಸ್ವಭಾವದವರಾಗಿ ದೇವರಿಂದ ಸೃಷ್ಟಿಯಾದರೆಂತಲೂ, ಆದ್ದರಿಂದ ಪಾಪಿಷ್ಠರಾಗಿರುವ ಅವರು ದೇವರ ಶಿಕ್ಷೆಗೆ ಭಯ ಪಡಬೇಕಾಗುವದಿಲ್ಲವೆಂತಲೂ, ತಮ್ಮಿಂದಲ್ಲ ದೇವರಿಂದ ಅಥವಾ ಇವನ ಪ್ರಕೃತಿಯಿಂದ ಎಲ್ಲಾ ಕ್ರಿಯೆಗಳು ಆಗುತ್ತವೆಂದು ಅವರು ಕಾಲೆ ಮುಂತಾದ ದೋಷವುಳ್ಳ ಕಾರ್ಯಗಳನ್ನು ದೇವರ ಶಿಕ್ಷೆ ಇಲ್ಲದೆಯೂ ದೇವರ ಐಕ್ಯ ತಪ್ಪದೆಯೂ ಮಾಡಬಹುದೆಂತಲೂ, ಮನುಷ್ಯರನ್ನು ಕುರಿತು ಹೇಳುತ್ತವೆ.—ಹೀಗೆ ಸುಚಿತ್ತಿಯು ಬಹಳ ಮನಸ್ತಾಪದಿಂದ

ವಿವರಿಸಿದಂದು ರಂಗನು ಅತ್ತು, ನುಡಿದ್ದೇನಂದರೆ — ಸುಚಿತ್ತಿಯೇ, ಇಂ
ಥಾ ವಾದವು ವೇದ ಶಾಸ್ತ್ರಗಳಲ್ಲಿಯೂ ಗುರುಗಳ ಬಾಯಿಯಲ್ಲಿ
ಯೂ ಅಲ್ಲ, ನಮ್ಮಲ್ಲಿಯ ಪಾಕರಿ ಜನರ ಬಾಯಿಯಲ್ಲಿ ಮಾತ್ರ ಉಂ
ಟೆಂದು ತಕ್ಕ ಶಾಧನೆಯಿಲ್ಲದೆಯೂ ತಕ್ಕ ಅಚ್ಚಾಸವಿಲ್ಲದೆಯೂ ನೆನಸಿ,
ನಿಜ ದೇವರ ಚಕ್ತನಾಗಿರೆನ್ನುವ ನಿಮಗೆ — ದೇವರು ಎಲ್ಲರಿಗೆ ಒಬ್ಬನೇ,
ಆದಿನಾರಾಯಣನೆಂತ, ಮುಂಚೆ ಆಗಿಂದಾಗ್ಗೆ ಎದುರಾಡಿದನು; ಇದಕ್ಕಾ
ಗಿ ದೇವರೂ ನೀವೂ ನನಗೆ ಕ್ಷಮೆ ಮಾಡ ಬೇಕು; ಇನ್ನು ಮುಂದೆ ಬ್ರಿ
ಹ್ಮ ನಾರಾಯಣ ರುದ್ರ ಕೃಷ್ಣ ಇತ್ಯಾದಿ ಹೆಸರುಗಳು ನನಗೆ ಬಹಳ ಅಸ
ಹ್ಯವಾಗಿರುವವು; ಮತ್ತು ದೇವರ ನೀತಿ ನ್ಯಾಯಗಳಿಗೆ ವಿರೋಧವಾದ
ಅಂಥಾ ವೇದ ಶಾಸ್ತ್ರಗಳೂ ಅಂಥ ದೇವದೂಷಣೆಯುಳ್ಳ ಬಾಧನೆ
ಯೂ ಪ್ರಬಲವಾದ ನೇಮವಾಗಿರುವ ಜನರಲ್ಲಿ ನಾನು ದೇವರನ್ನು ಬ
ಹಳ ಅಪಮಾನ ಪಡಿಸದಲೇ ಇನ್ನೂ ಇರ ಕೂಡದೆಂದು ತಿಳುಕಾಂಡು,
ನಿಮ್ಮ ಹಾಗೆ ಕ್ರೈಸ್ತನಾದೇನು; ನನಗಿಂತ ಬಹಳ ಹೆಚ್ಚು ಬುದ್ಧಿವಂತನಾ
ದ ನೀವು ಹಾಟ್ಟೇ ಚಿಂತೆಯೇನೂ ಇಲ್ಲದೆ ಕ್ರೈಸ್ತನಾಗಿದ್ದೀರಿ, ನಿಮ್ಮ ನಡ
ತೆ ಮುಂಚಿನದಕ್ಕಿಂತ ನೆಟ್ಟಗೆ, ನನಗೆ ಮುಂಚಿಗಿಂತ ಹೆಚ್ಚು ಪ್ರೀತಿ ಮಾ
ಡುತ್ತೀರಿ, ನಿಮ್ಮ ಮಾತೆಲ್ಲಾ ದೇವರ ಮಹಿಮೆಗೆಯೇ, ನಿತ್ಯ ಜೀವದ
ಚರಪಸವುಳ್ಳವನಾಗಿ ಕಾಣಿಸಿ ಕಾಳ್ಳುತ್ತೀರಿ, — ಇಷ್ಟೆಲ್ಲಾ ನಾಪಿ, ನಿ
ಮ್ಮ ಹಾಗೆ ಮಾಡುವದಕ್ಕೆ ಏನು ಅಡ್ಡಿ? — ಸುಚಿತ್ತಿಯು ಪ್ರತ್ಯುತ್ತರ
ವಾಗಿ, ನೀವು ದೇವರ ವಾಕ್ಯವನ್ನು ಪ್ರಾರ್ಥನೆಯಿಂದ ಓದಿರೆಂತ ಹೇ
ಳಾಗ ರಂಗನು ಸಂತಾಷದಿಂದ ಒಡಂಬಟ್ಟು, ಕೇಳಿದ್ದೇನಂದರೆ — ಅ
ಣ್ಣಾ, ಇನ್ನು ಒಂದು ಪ್ರಶ್ನೆಗೆ ಉತ್ತರವನ್ನು ದಯೆ ಮಾಡಿರಿ; ನಮ್ಮ
ಹಿಂದು ಜನರು ದೇವರು ಪರಂಜ್ಞಾತಿಯೆಂತ ಹೇಳುತ್ತಾರೆ, ಅದು ಹ್ಯಾ
ಗೆ? — ಅದಕ್ಕೆ ಅವನ ಅಣ್ಣನು ಇಂತೆಂದನು — ಖರೆ, ಆದರೆ ಒಂದು ಕಥೆ
ಯನ್ನು ಹೇಳ್ಕೇನು, ಏನಂದರೆ — ಒಬ್ಬ ಧಾರೆಯು ಒಂದು ಹಳ್ಳಿಗೆ ಬಂ
ದು, ಚಾವಡಿಯ ಮುಂದೆ ನಿಂತಿರುವ ಒಬ್ಬ ಒಕ್ಕಲಿಗನ ಹತ್ತರ, ನಿ
ಮ್ಮ ಗವುಡನು ಎಂಥವನಪ್ಪಾ? ಎಂತ ಕೇಳಲಾಗಿ ಇವನು — ಸ್ವಾಮಿ,
ನಮ್ಮ ಗವುಡರು ಬಹಳ ಒಳ್ಳೆಯವರು, ಮಾತ್ರ ವೋಸಗಾರನೂ ಪಟಿಂಗ

ನೂ ಆಗಿದ್ದಾರೆ ಎಂತ ಸಲಾಮು ಕಾಟ್ಟು ಹೇಳಿದನು; ಅದೇ ಪ್ರಕಾರ ಹಿಂದು ಜನರು ಪರಂಜ್ಯೋತಿಯೆನ್ನುವ ವಿಷಯವು; ಅವರು ದೇವರನ್ನು ಪರಂಜ್ಯೋತಿಯೆಂತ ಕಾಂಡಾಡಿದ ಮೇಲೆ ಪರಾಂಧಕಾರವೆಂತ ಅವನಿಗೆ ಬೈಯುತ್ತಾರೆ; ಹ್ಯಾಗಂದರೆ ಶುಕ್ಲ-ಯಜುರ್-ವೇದದ ಬೃಹದ್-ಆರಣ್ಯಕ-ಉಪನಿಷತ್ತಿನ ಳನೇ ಅಧ್ಯಾಯದ ಳನೇ ಬ್ರಾಹ್ಮಣದ ೫ನೇ ಕಂಡಿಕೆಯಲ್ಲಿ ಹೇಳಿರುವದೇನಂದರೆ —

ಸ ವಾ ಅಯಮ್ ಆತ್ಮಾ ಬ್ರಹ್ಮ ಮನಾೀ-ಮಯಃ ಪ್ರಾಣ-ಮಯಶ್ ಚಕ್ಷುರ್-ಮಯಃ ಶ್ರಾೀತ್ರ-ಮಯಃ ಪೃಥಿವೀ-ಮಯ ಆಪಾೀ-ಮಯಾೀ ವಾಯು-ಮಯ ಆಕಾಶ-ಮಯಸ್ ತೇಜಾೀ-ಮಯಾೀzತೇಜಾೀ-ಮಯಃ ಕಾಮ-ಮಯಾೀzಕಾಮ-ಮಯಃ ಕ್ರಾೀಧ-ಮಯಾೀzಕ್ರಾೀಧ-ಮಯಾೀ ಧರ್ಮ-ಮಯಾೀzಧರ್ಮ-ಮಯಃ ಸರ್ವ-ಮಯಃ। ೫।

ಟೀಕು॥ ಬ್ರಹ್ಮವಾಗಿರುವ ಈ ಆತ್ಮನು (ಅಂದರೆ ಪರಮಾತ್ಮನು) ಮನಸ್ಸುಳ್ಳವನೂ ಪ್ರಾಣವುಳ್ಳವನೂ ಕಣ್ಣುಳ್ಳವನೂ ಕಿವಿಯುಳ್ಳವನೂ ಪೃಥ್ವಿಯುಳ್ಳವನೂ ನೀರುಳ್ಳವನೂ ಭೂಳಿಯುಳ್ಳವನೂ ಆಕಾಶವುಳ್ಳವನೂ ತೇಜವುಳ್ಳವನೂ ಅಂಧಕಾರವುಳ್ಳವನೂ ಕಾಮವುಳ್ಳವನೂ ಅಕಾಮವುಳ್ಳವನೂ ಕ್ರೋಧವುಳ್ಳವನೂ ಅಕ್ರೋಧವುಳ್ಳವನೂ ಧರ್ಮವುಳ್ಳವನೂ ಅಧರ್ಮವುಳ್ಳವನೂ ಸರ್ವವು (ಅಂದರೆ ಎಲ್ಲಾ ದ್ವಂದ್ವಗಳು ಅಥವಾ ಎಲ್ಲಾ ಒಳ್ಳೇದೂ ಎಲ್ಲಾ ಕೆಟ್ಟದ್ದೂ) ಉಳ್ಳವನೂ ಆಗಿದ್ದಾನೆ.—

ಮತ್ತು, ರಂಗಾ, ರಾಮಾಯಣದ ಯುದ್ಧ-ಕಾಂಡದ ೧೧೯ನೇ ಸರ್ಗದಲ್ಲಿ ಮಹಾದೇವ (ಅಂದರೆ ಶಿವ), ಬ್ರಹ್ಮ ಇತ್ಯಾದಿಯವರು ರಾಮನ * ವಿಷಯವಾಗಿ ಹೇಳುವದೇನಂದರೆ —

ಯತ್ ಪರಂ ಶ್ರೂಯತೇ ಜ್ಯಾೀತಿರ್ ಯತ್ ಪರಂ ಶ್ರೂಯತೇ ತಮಃ।
ಯತ್ ಪರಮ್ ಪರತಶ್ ಚೈzವ ಪರಮಾತ್ಮೇzತಿ ಕಥ್ಯನೇ॥ ೨೯॥

ಟೀಕು॥ ಪರವಾದ ಜ್ಯೋತಿಯೆನ್ನಿಸುವಂಥಾದ್ದೂ ಪರವಾದ ತಮಸು (ಅಂದರೆ ಅಂಧಕಾರ) ಎನ್ನಿಸುವಂಥಾದ್ದೂ ಪರಕ್ಕಿಂತ ಪರವಾದಂಥಾದ್ದೂ (ಅಂದರೆ ಶೂನ್ಯವಾದದ್ದೂ) ಆಗಿರುವ ನೀನು ಪರಮಾತ್ಮನೆಂತ ಹೇಳ್ಳುತ್ತಾರೆ.—

* ಉಪಗ್ರಂಥದ ೧೧ನೇ ಅಂಕೆಯದನ್ನು ನಾಡಿರಿ.

ಅದಕ್ಕೆ ರಂಗನು — ತಿಳಿಯಿತು, ಅಣ್ಣಾ, ತಿಳಿಯಿತು; ನಿಶ್ಚಯವಾಗಿ ಅಂಥ ದೂಷಣೆಯು ನನಗೆ ಸಾಕಾಯಿತು; ಅಣ್ಣಾ, ತನ್ನ ಸುತ್ತಲಿನ ನಾಡಿನ ಲಕ್ಷಣಗಳನ್ನು ನಾನಿದರಿಯದ ಕುರುಡನ ಹಾಗೆ ಈ ವರಿಗೆ ಬದುಕುತ್ತಾ ಬಂದೆನೆಂದು, ನನಗೆ ಗಾತ್ತಾಯಿತು; ಹ್ಯಾಗಂದರೆ ಹಿಂದು ವೇದ ಶಾಸ್ತ್ರಗಳನ್ನು ಯಥಾರ್ಥವಾಗಿ ಕೇಳದಿದ್ದರೂ ನಾನು ನನ್ನ ಮತದವರ, ವಿಶೇಷವಾಗಿ ನನ್ನ ಗುರುವಿನ, ನುಡಿನಡೆಯನ್ನು ಚಂದಾಗಿ ಲಕ್ಷಿಸಿದ್ದರೆ, ಪುಣ್ಯಮಿತ್ರನೂ ಪಾಪವೈರಿಯೂ ಆಗಿರುವ ನಿಜ ದೇವರ ಜಯವನ್ನು ಹುಟ್ಟಿಸುವಂಥ ಸದ್ಭಾವನೆಯು ಅವರಿಗೆ ಇಲ್ಲವೆಂಬದಾಗಿ, ಈ ಕಾಲಕ್ಕೆ ಮುಂಚೆ ತಿಳುಕಾಳ್ಳ ಬಹುದಾಗುತ್ತಿತ್ತು; ನಾನಿದ್ದ ಮತಸ್ಥರಲ್ಲಿ ಹಲವರಿಗೆ, ಮುಖ್ಯವಾಗಿ ಮೂಢರಿಗೆ, ತಮ್ಮ ಕಲ್ಪನಾದೇವರ ಒಂದು ತರದ ಜಯವುಂಟು, ಹೌದು; ಆದರೆ ದೇವರು ಪರಿಶುದ್ಧನಾಗಿದ್ದಾನೆ ಅಂದರೆ ಅನೀತಿಗೆ ಹಗೆ ಮಾಡಿ ನೀತಿಗೆ ಪ್ರೀತಿ ಮಾಡುವವನಾಗಿದ್ದಾನೆ ಎಂಬ ಸದ್-ಜ್ಞಾನದಿಂದ ಅವರದು ಆ ಜಯವು ಹುಟ್ಟಲಿಲ್ಲ; ದೇವರು ವೃಥ್ಥ ಲೀಲೆಯವನು, ತನ್ನ ಲೀಲೆಯಲ್ಲಿ ವೃಥ್ಥವಾಗಿ ಜನರನ್ನು ಕಾಂದು, ಕೆಡಿಸಿ, ಮೋಕ್ಷಕ್ಕೆ ಅಡ್ಡಿ ಮಾಡುತ್ತಾನೆಂಬ ಮಿಥ್ಯಾಜ್ಞಾನದಿಂದಲೇ ಅದು ಹುಟ್ಟಿ ಅದೆ; ಆ ಜಯವು ಪ್ರೀತಿಯೂ ನ್ಯಾಯವೂ ಇಲ್ಲದ ದೇವರಿದ್ದಾನೆಂಬ ಕಲ್ಪನೆಯ ಫಲವೇ! ಅವರು ಅಂಥಾ ದೇವರ ವೃಥ್ಥ ಲೀಲೆಯು ತಮ್ಮ ಅದೃಷ್ಟವೂ ಹಣೇ ಬರಹವೂ ಎಂತ ನಿರಾಶೆಯಾಗಿ ಹೇಳಿ, ತಾವು ಅವನ ಕರುಣೆಯೂ ನೀತಿಯೂ ಇಲ್ಲದ ಆಟದ ಬಾಂಬೆಗಳೆಂದು, ನಿತ್ಯ ಅಂಜಿಕೆಯಾಗಿದ್ದಾರೆ; ನಿಜ ಪ್ರಾರ್ಥನೆಯನ್ನರಿಯರು; ಅವರು ಪಾಪ ಮಾಡಿದರೆ — ಅದು ದೇವರ ಚಿತ್ತ, ಇದು ಅವನು ನಿರ್ಮಿಸಿದ ಕಲಿಯುಗವಲ್ಲವೋ? ಎಂತ, ಹೇಳುತ್ತಾರೆ; ಪಾಪವನ್ನು ಬಿಡಿರಿ, ಪುಣ್ಯವನ್ನು ಮಾಡಿರಿ ಎಂದು, ಕ್ರೈಸ್ತರು ಅವರಿಗೆ ಹೇಳಿದರೆ — ಪುಣ್ಯವೇನು? ಪಾಪವೇನು? ದೇವರು ಎರಡನ್ನೂ ಮಾಡುತ್ತಾನೆಂತ, ಅವರು ಹಾಸ್ಯದ ಮಾತಾಡುತ್ತಾರೆ; ದೇವರು ನೀತಿಯುಳ್ಳ ನ್ಯಾಯಕರ್ತನಾಗಿದ್ದಾನೆಂತ ಪ್ರಸಂಗಿಸುವ ಕ್ರೈಸ್ತರ ಮುಂದೆ ತಮ್ಮ ಮನಸ್ಸಾಕ್ಷಿಯ ಶಬ್ದವನ್ನು ಅಡಗಿಸಿ ನಗುತ್ತಾರೆ, ಹ್ಯಾಗಂದರೆ

ಅಂಥ ಜ್ಞಾನವು ಪಾಪಕ್ಕೆ ಪ್ರೀತಿ ಮಾಡುವ ತಮಗೆ ಅಸಹ್ಯವಾದ ಬಹಳ ನಾನು ಮಾಡೀತು; — ಅಯ್ಯಾ, ಹಿಂದು ಮತಗಳಲ್ಲಿ ನಿಜ ದೇವರ ಜ್ಞಾನವು ಇಲ್ಲದಿರುವದೂ ದೇವರಿಗೆ ಸುಳ್ಳುಬಾಧನೆಯಿಂದ ಅಪಮಾನವಾಗುವದೂ ಅವುಗಳ ಪ್ರತ್ಯಕ್ಷ ದುಃಸ್ಥಿತಿಗೆ ಕಾರಣವೆಂತ, ಈಗ ಬಲ್ಲೆನು; ಅವುಗಳಲ್ಲಿಯ ಶಾಕ್ತರೂ ಯಥೇಚ್ಛೆ ಮಾಡ ಬಹುದಾದ ಗುರುಗಳೂ ಪರರ ತನು ಮನ ಧನ ಕೇಳಿ ಕಾಳ್ಳುವ ಗಾಸ್ವಾಮಿಗಳೂ ಸೇವಾದಾಸಿಗಳೂ ಎಲ್ಲಮ್ಮನ ಚಕ್ತರೂ ಬಸವಿಗಳೂ ಜೈರವಿಗಳೂ ನಾಟಿಕಗಳೂ ಮುಂತಾದವರು ಎಲ್ಲಿಂದ? ಜಾತಿಯ ಹಾಟ್ಟೇ ಕಿಚ್ಚು ಎಲ್ಲಿಂದ? ಅನೇಕ ಲೋಚಿಗಳೂ ವೋಸಗಾರರೂ ಪೃಚಿಚಾರಿಗಳೂ ಪಟಿಂಗರೂ ಎಲ್ಲಿಂದ? ಮಡಿವೆಯಾದವರ ಜಗಳವೆಲ್ಲಿಂದ? ಮಕ್ಕಳ ಅವಿಧೇಯತ್ವವು ಎಲ್ಲಿಂದ? ಈ ಮುಂತಾದ ಕೇಡೆಲ್ಲಾ ಎಲ್ಲಿಂದ? ಅಸಹ್ಯ ಮೂರ್ತಿಪೂಜೆಯು ಎಲ್ಲಿಂದ? ಹಿಂದು ಮತಗಳಲ್ಲಿ ದೇವದೂಷಣೆಯುಳ್ಳ ವೇದ ಶಾಸ್ತ್ರಗಳು ಇರುವದರಿಂದಲೂ ದೇವರ ಸದ್ವಾಕ್ಯವು ಅವುಗಳಲ್ಲಿ ಇರದ್ದರಿಂದಲೂ ಅಷ್ಟೆಲ್ಲಾ ಪ್ರಬಲವಾಗಿದೆಂತ ತಿಳುಕಾಳ್ಳ ಬೇಕು; ಹಿಂದು ಮತಗಳ ಗುರುಗಳು ತಾವರಿಯದ ಸತ್ಯಕ್ಕೆ ಬದಲಾಗಿ ತಮ್ಮ ಮೂಢ ಚಕ್ತರಿಗೆ ಕೆಲವು ಪೃರ್ಥ ಮಂತ್ರಗಳನ್ನೂ ಆಚಾರಗಳನ್ನೂ ಹೇಳಿ ಬಿಡುತ್ತಾರೆ, ಯಾರಾದರೂ ಕ್ರೈಸ್ತ ಸನ್ಮಾರ್ಗದಲ್ಲಿ ಶೇರದ ಹಾಗೆ ಹಾಟ್ಟೇ ಕಿಚ್ಚಿನಿಂದ ಅಡ್ಡಿ ಮಾಡುತ್ತಾರೆ; — ನಾಯಿರಿ, ಸುಚಿತ್ತಿಯೇ, ನೀವು ಸಂಚಾಷಣೆಯಲ್ಲಿ ವಿವರಿಸಿದ್ದರ ಮೇಲೆ ಅದೆಲ್ಲಾ ನನಗೆ ಸಂಶಯವಿಲ್ಲದೆ ತಿಳಿಯ ಬಂದದೆ; ಕ್ರೈಸ್ತರಿಗಿರುವ ದೇವರ ವಾಕ್ಯವನ್ನು ಇನ್ನು ಮುಂದೆ ಮನಗಾಟ್ಟು ಓದುವೆನು ಎನ್ನಲಿಕ್ಕಾಗಿ ಸುಚಿತ್ತಿಯು ಅದರ ವಿಷಯವಾಗಿ ಅವನಿಗೆ ಬಹಳ ಧೈರ್ಯ ಹೇಳಿ, ನಿಮಗೆ ಅಪೇಕ್ಷೆಯಿದ್ದರೆ ನಾಳೆ ದೇವವಾಕ್ಯದ ಮೇಲೆ ಪಾಪಾತ್ಪತ್ತಿಯನ್ನು ನಿಮಗೆ ವಿವರಿಸೈನು, ಅಷ್ಟರಲ್ಲಿ ದೇವರ ಹತ್ತರ ಸುಬುದ್ಧಿಯನ್ನು ಬೇಡಿ ಕಾಳ್ಳಿರಿ, ತಪ್ಮಾ! ಎಂತ ವಾಗ್ದತ್ತ ಮಾಡಿದಾಗ ಆ ರಾತ್ರಿಗೆ ಅವರ ಸಂಚಾಷಣೆಯು ತೀರಿತು. —

ಎರಡನೇ ಸ್ಕಂಧ
ಕ್ರೈಸ್ತ ಬೋಧನೆಯು

೪ನೇ ಅಧ್ಯಾಯ

ಪಾಪೋತ್ಪತ್ತಿಯ ವಿಷಯವಾಗಿಯೂ ರಕ್ಷಣೆಯ ವಿಷಯವಾಗಿಯೂ ದೇವವಾಕ್ಯವು ಬೋಧಿಸುವ ಅರ್ಥವು

ಪೌರಾಣಿಕ ಶಿಲ್ಪಿಯಲ್ಲಿ ಸುಚಿತ್ತಿಯೂ ರಂಗನೂ ಶಿರಿಗಿ ಅದೇ ಚಂದ್ರಶಾಲೆಯಲ್ಲಿ ಕೂಡಿ ಕೂತು ಕಾಂಡಿರುವಾಗ ಸುಚಿತ್ತಿಯು, ತಾನು ಮಾತು ಕಾಟ್ಟಂತೆ, ತಮ್ಮನಿಗೆ ದೇವರ ವಾಕ್ಯದಲ್ಲಿ ಪಾಪಾತ್ಪತ್ತಿಯ ವಿಷಯವಾಗಿ ಬರೆದಿರುವದನ್ನು ವಿವರಿಸಲಿಕ್ಕೆ ಯತ್ನಿಸಿದನು. ಅವನು ಮೊದಲು ದೇವರನ್ನು ಕುರಿತು ಹೇಳಿದ್ದೇನಂದರೆ — ದೇವರು ಪ್ರಕಟಿಸಿದ ವಾಕ್ಯದ ಮೇಲೆ ದೇವರು ಒಂದೇ ಪ್ರಕಾರದವನೇ; ಈ ಒಂದೇ ಪ್ರಕಾರದಲ್ಲಿ ಎಂದಿಗೂ ಏನೂ ಬದಲಾಗದು (ಯಾಕಾಬನ ಪತ್ರಿಕೆ ೧, ೧೭); ಅದು ಕಾರಣವಾಗಿ ಅವನ ಹೆಸರು ಯೆಹೋವನೆಂಬದು, ಯೆಹೋವನೆಂದರೆ ಇದ್ದ ಹಾಗೆಯೇ ಇರುವವನು (ಮೋಶೆಯ ೨ನೇ ಪುಸ್ತಕ ೩, ೧೪); ನಾನು ಈಗ ಹೇಳುವ ಏಕ ಪ್ರಕಾರದ ದೇವರ ಲಕ್ಷಣಗಳನ್ನೇ ನೀವು ದೇವರ ವಾಕ್ಯದಲ್ಲೆಲ್ಲಿಯೂ ಓದಬಹುದು, ಯಾವವಂದರೆ — ದೇವರು ಏನೇನೂ ಕತ್ತಲೆಯಿಲ್ಲದಂಥ ಬೆಳಕಾಗಿದ್ದಾನೆ (ಯೋಹಾನನ ೧ನೇ ಪತ್ರಿಕೆ ೧, ೫); ಸತ್ಯವಾಗಿದ್ದಾನೆ (ಯೋಹಾನನ ಸುವಾರ್ತೆ ೧೪, ೬; ಕೀರ್ತನೆ ೫೭, ೧೦); ನಿತ್ಯ ಜೀವವಾಗಿದ್ದಾನೆ (ಯೋಹಾನನ ೧ನೇ ಪತ್ರಿಕೆ ೧, ೨೦); ಒಬ್ಬನೇ ಒಳ್ಳೆಯವನಾಗಿದ್ದಾನೆ (ಮತ್ತಾಯನ ಸುವಾರ್ತೆ ೧೯, ೧೭); ಪರಿಶುದ್ಧನಾಗಿದ್ದಾನೆ (ಮೋಶೆಯ ೩ನೇ ಪುಸ್ತಕ ೧೧, ೪೫; ಪೇತ್ರನ ೧ನೇ ಪತ್ರಿಕೆ ೧, ೧೬; ಪ್ರಕಟಣೆ ೪, ೮); ಪಾಪತ್ವಕ್ಕೆ ಹಗೆ

ಮಾಡುವವನಾಗಿದ್ದಾನೆ (ಕೀರ್ತನೆ ೫೫, ೪ — ೫೫; ಕೀರ್ತನೆ ೩೪, ೧೬; ರಾೇ ಮಾಯರ ಪತ್ರಿಕೆ ೧, ೧೮); ಅಪರಾಧಕ್ಕೆ ಮುಯ್ಯಿ ಕಾಡುವವನಾಗಿದ್ದಾನೆ (ಮೋಶೆಯ ೨ನೇ ಪುಸ್ತಕ ೨೦, ೫; ಮೋಶೆಯ ೫ನೇ ಪುಸ್ತಕ ೩೨, ೩೫); ನೀತಿಯುಳ್ಳ ನ್ಯಾಯಕರ್ತನಾಗಿದ್ದಾನೆ (ಕಾರಿಂಥರ ೨ನೇ ಪತ್ರಿಕೆ ೫, ೧೦; ಪೇತ್ರನ ೧ನೇ ಪತ್ರಿಕೆ ೧, ೧೭; ಇಬ್ರಿಯರ ಪತ್ರಿಕೆ ೧೨, ೨೩); ಮಹಿಮೆಯಿಂದ ಶಾೇಭಿಸುವವನಾಗಿದ್ದಾನೆ (ಕೀರ್ತನೆ ೧೦೪, ೧); ಎಲ್ಲಿಯೂ ಸ್ತೋತ್ರವುಳ್ಳವನಾಗಿದ್ದಾನೆ (ಕೀರ್ತನೆ ೪೮, ೧೦); — ಈ ಪ್ರಕಾರ, ತಮ್ಮಾ, — ದೇವರಲ್ಲಿ ಪಾಪವೂ ಪಾಪದ ಸಂಬಂಧವಾದದ್ದೂ ಒಂದೂ ಇಲ್ಲ, ಪಾಪಕ್ಕೂ ಪಾಪದ ಸಂಬಂಧವಾದದ್ದಕ್ಕೂ ಹಗೆ ಮಾಡುವವನಾಗಿದ್ದಾನೆಂಬದೇ ಕ್ರೈಸ್ತ ಬಾೇಧನೆಯಾಗಿದೆ; ದೇವರ ವಾಕ್ಯದಲ್ಲೆಲ್ಲಿಯೂ — ದೇವರು ಎಲ್ಲಾ ವಿಷಯದಲ್ಲಿಯೂ ಪರಿಶುದ್ಧನಾಗಿ, ಎಲ್ಲರಿಂದಲೂ ಎಂದೆಂದಿಗೂ ಕಾಂಡಾಪಿಸಿ ಕಾಳ್ಳ ತಕ್ಕವನು ಎಂಬಂಥ ಒಂದೇ ಅರ್ಥವು ಉಂಟು (ಕೀರ್ತನೆ ೨೨,೨೭; ೩೦, ೪; ೭೨, ೧೯; ೧೦೩, ೧೯ — ೨೨; ೧೦೬,೧ — ೨; ಶಿಮೊಥೆಯನ ೧ನೇ ಪತ್ರಿಕೆ ೧, ೧೭; ಪ್ರಕಟಣೆ ೪, ೮ — ೧೧); ಇದಕ್ಕೆ ವಿರಾೇಧವಾದದ್ದು ಏನಾದರೂ ಅದರಲ್ಲೆಲ್ಲಿಯೂ ಇರುವದಿಲ್ಲ; ನೀವೇ, ತಮ್ಮಾ, ದೇವರ ವಾಕ್ಯವನ್ನು ಓದಿ ಶಾೇಧಿಸಿರಿ; ಸಕಲ ಹಿಂದು ಜನರು ಓದಿ ಶಾೇಧಿಸಲಿ!

ಈಗ ದೇವರು ಮಾಡಿದ ನಿರ್ಮಾಣದ ವಿಷಯವನ್ನು ಕೇಳಿರಿ; ದೇವರು ಪರಿಶುದ್ಧನಾದ ತನ್ನ ಸಾಮೀಪ್ಯದಲ್ಲಿಯೂ ಸೇವೆಯಲ್ಲಿಯೂ ಇರ ತಕ್ಕಂಥ ಎರಡು ಜಾತಿಯವರನ್ನು ನಿರ್ಮಿಸಿದನು, ಯಾರಂದರೆ — ದೂತರೂ ಮನುಷ್ಯರೂ; ಅವನು ಈ ಲಾೇಕವನ್ನು ನಿರ್ಮಿಸುವದಕ್ಕೆ ಮುಂಚೆ ಉಂಟು ಮಾಡಿದ ದೂತರು (ಯಾೇಬನ ಪುಸ್ತಕ ೩೮, ೭) ಎಂಥವರಂದರೆ — ಶರೀರಾತ್ಮಗಳಲ್ಲಿ ಶುದ್ಧತ್ವವುಳ್ಳಂಥವರೂ (ಮತ್ತಾಯನ ಸುವಾರ್ತೆ ೨೫, ೩೧; ಮಾರ್ಕನದು ೮, ೩೮; ಲೂಕನದು ೯, ೨೬) ದೇವರ ಮುಖವನ್ನು ನಾೇಡ ಯಾೇಗ್ಯರಾದಂಥವರೂ (ಮತ್ತಾಯನ ಸುವಾರ್ತೆ ೧೮, ೧೦) ದೇವರ ಸೇವಕರಾದಂಥವರೂ (ಕೀರ್ತನೆ ೩೪, ೭; ೧೦೩, ೨೦; ಮತ್ತಾಯನ ಸುವಾರ್ತೆ ೧೩, ೪೯; ಇಬ್ರಿಯರ ಪತ್ರಿಕೆ ೧, ೧೪); — ದೇವರು

ಈ ಲಾಕವನ್ನು ನಿರ್ಮಿಸಿದ ಮೇಲೆ ತನ್ನ ಸ್ವರೂಪದ ಹಾಗೆ ಅಂದರೆ ತನ್ನ ಪರಿಶುದ್ಧತ್ವ ನಿರ್ಮಲತ್ವ ಸ್ವತಂತ್ರತ್ವ ಇತ್ಯಾದಿ ಲಕ್ಷಣಗಳ ಹಾಗೆ ಮನುಷ್ಯರನ್ನು ಉಂಟು ಮಾಡಿದನು (ಮೋಶೆಯ ೧ನೇ ಪುಸ್ತಕ ೧, ೨೬—೨೭; ಯಾಕೋಬನ ಪತ್ರಿಕೆ ೩, ೯); ಅವರು ಬಹಳ ಒಳ್ಳೆಯ ವರಾಗಿದ್ದರು (ಮೋಶೆಯ ೧ನೇ ಪುಸ್ತಕ ೧, ೩೧; ಪ್ರಸಂಗಿ ೭, ೨೯; ತಿಮೊಥೆಯನ ೧ನೇ ಪತ್ರಿಕೆ ೪, ೪) ಅಂದರೆ ಅವರಲ್ಲಿ ಪಾಪವೂ ಪಾಪದ ಸಂಬಂಧವಾದದ್ದೂ ಏನೂ ಇರಲಿಲ್ಲ; ಆದರೆ, ತಮ್ಮಾ, ಇವರು ನಿರ್ಮಾಣವಾಗುವಾಗ ಪಾಪವು ದೂತರ ಒಂದು ಗುಂಪಿನಲ್ಲಿ ಉತ್ಪತ್ತಿಯಾಗಿತ್ತು;

ಹ್ಯಾಗಂದರೆ ದೂತರಲ್ಲಿ ಜ್ಞಾನೇತಿಧರನೆಂಬ ಒಬ್ಬ ಮುಖ್ಯನಿದ್ದನು (ಏಶಾಯನ ಪುಸ್ತಕ ೧೪, ೧೨); ಇವನು (ಆ ನಾಮವು ಸಹ ಗಾತ್ತು ಮಾಡುವಂತೆ) ನಿರ್ಮಾಣದ ಪ್ರಕಾರ ಸತ್ಯವಂತನಾಗಿದ್ದರೂ ಸತ್ಯದಲ್ಲಿ ನಿಂತು ಕಾಳ್ಳಲಿಲ್ಲ, ಮತ್ತು ಸತ್ಯವನ್ನು ಬಿಟ್ಟವನಾದ ಅವನು ಬೇರೆ ದೂತರನ್ನು, ಅವರು ಪಾಪ ಮಾಡಿ ತಮ್ಮ ಆದಿಸ್ಥಿತಿಯನ್ನು ಕಾಪಾಡದೆ ಸ್ವಂತ ವಾಸಸ್ಥಾನವನ್ನು ಬಿಡುವ ಹಾಗೆ, ಪ್ರೇರೇಪಿಸಿದನು (ಯೋಹಾನನ ಸುವಾರ್ತೆ ೮, ೪೪; ಪೇತ್ರನ ೨ನೇ ಪತ್ರಿಕೆ ೨, ೪; ಯೂದನ ಪತ್ರಿಕೆ ೬); ದೇವದೂತರಲ್ಲಿ ಒಂದು ಗುಂಪಾದ ಆ ದೂತರು ದೇವ ಸತ್ಯದಲ್ಲಿ ನಿಂತು ಕಾಳ್ಳದೆ, ಪಾಪಿಷ್ಟರೂ ಅಶುದ್ಧರೂ ಸತ್ಯ ತೃಜಿಸಿ ಬಿಟ್ಟ ಸ್ಥಿತಿಯಾದ ಅಜ್ಞಾನದವರೂ ಪಿಶಾಚರುಗಳೆನ್ನಿಸುವವರೂ ಆದರು; ನಾೀವಿರಿ, ತಮ್ಮಾ, ಮುಂಚೆ ಪಿಶಾಚರುಗಳೆಂಬವರು ಇರಲೇ ಇಲ್ಲ, ಆದರೆ ಆ ದೂತರೇ ಅಸತ್ಯ ಮಾಡಿ ಪಿಶಾಚರುಗಳಾಗಿದ್ದಾರೆ; ಅವರು ಯಾವ ಸತ್ಯದಲ್ಲಿ ನಿಂತು ಕಾಳ್ಳಲಿಲ್ಲವೆಂಬದಕ್ಕೆ ದೇವರ ವಾಕ್ಯದಲ್ಲಿ ಉತ್ತರವಿಲ್ಲ, ಆದರೆ ದೇವರ ಸನ್ನಿಧಿಯಲ್ಲಿ ತಮಗಿರ ತಕ್ಕ ವಿನಯದಲ್ಲಿ ನಿಂತು ಕಾಳ್ಳಲಿಲ್ಲವೆಂತ ಊಹಿಸ ಬಹುದು; ದೇವರ ವಾಕ್ಯದ ಪ್ರಕಾರ ಅವರಲ್ಲಿ ಲಾೀಚಕ್ಕೆ ಕಾರಣವಾಗ ಬಹುದಾದಂಥಾದ್ದೇನೂ ಇರಲಿಲ್ಲ, ಹೀಗೆ ತಿಳುಕಾಂಡರೆ ಪಾಪಿಷ್ಟರಾದ ಆ ದೂತರನ್ನು ಕುರಿತು ಹಿತಾಪದೇಶದ ಮಿತ್ರ-ಲಾಚದಲ್ಲಿರುವ ಅರ್ಥ ಶ್ಲೋಕವನ್ನು ಹೇಳ ಬಹುದು, ಏನಂದರೆ —

ಲಾಭಾನ್ ಮೋಹಶ್ ಚ ನಾಶಶ್ ಚ ಲಾಭಃ ಪಾಪಸ್ಯ ಕಾರಣಂ।

ಟೀಕು॥ ಲೋಭದಿಂದ ಮೋಹವೂ ನಾಶನವೂ (ಬರುತ್ತವೆ), ಲೋಭವು (ಉಳಿದ) ಪಾಪದ ಕಾರಣವಾಗಿದೆ.—

ತಮ್ಮಾ, ಲಾಭವು ಆ ದೂತರ ಮೊದಲನೇ ಪಾಪವಾಗಿತ್ತು, ಅದು ಉಳಿದ ಪಾಪಕ್ಕೆ ಕಾರಣವಾಯಿತೆಂತ ಹೇಳ ಬಹುದು; ಅವರು ಏನೂ ಲಾಭವಿಲ್ಲದವರಾಗಿ ದೇವರಿಂದ ನಿರ್ಮಾಣವಾದರು, ಆದರೆ ಅವರು ಲಾಭವನ್ನು ಹ್ಯಾಗೂ ಹಿಡುಕಾಳ್ಳ ಕೂಡದಂಥವರಾಗಿರಲಿಲ್ಲ; ಲಾಭವು ತಮ್ಮ ಸ್ಥಿತಿಗತಿಗೆ ಯೋಗ್ಯ ಸ್ವತಂತ್ರವುಳ್ಳ ಆತ್ಮರಾದ ದೂತರ ಸ್ವತಂತ್ರದ ಒಂದು ಕ್ರಿಯೆಯೆಂತ ತಿಳುಕಾಳ್ಳ ಬೇಕು; ಏನೂ ವೃಸನವಿಲ್ಲದೆ ಸ್ವತಂತ್ರಾತ್ಮರಾಗಿದ್ದ ಆ ದೂತರು ಲಾಭ ಹಿಡುಕಾಂಡ ಮೇಲೆ ಸ್ವತಂತ್ರ ತಪ್ಪಿ ಲಾಭಾವಸ್ಥೆಯುಳ್ಳವರಾದರು; ಜ್ಯೋತಿಧರನೆಂಬ ಆ ದೂತನು ದೇವರ ಸನ್ನಿಧಾನದಲ್ಲಿದ್ದು, ನಿರ್ಮಾಣಕರ್ತನಾದ ಇವನ ಅಮಿತ ಮಹಿಮೆಯನ್ನೂ ನಿರ್ಮಿಸಲ್ಪಟ್ಟಿ ತನ್ನ ಮಹಿಮೆಯು ಅದಕ್ಕೆ ಹ್ಯಾಗೂ ಸರಿಯಲ್ಲದಿರುವದನ್ನೂ ಆರಂಭದಿಂದಲೇ ನೋಡುತ್ತಾ ವಿನಯದಿಂದ ದೇವರ ಸೇವೆ ಮಾಡುತ್ತಾ ಬರಲಾಗಿ ಅವನು ಸತ್ಯಸ್ಥಿತಿಯಲ್ಲಿದ್ದನು; ಅವನು ಬಹಳ ಕಾಲ ಈ ಸದ್ಭಾವನೆಯನ್ನು ಹಿಡುಕಾಂಡು ದೇವರ ದಯೆಯನ್ನು ಅನುಭವಿಸುತ್ತಾ ಸಂತುಷ್ಟಿಯಾಗಿ ಇದ್ದಿರಬಹುದು; ಹೀಗಿರಲಾಗಿ, ಅವನು ದೇವರ ಅನುಗ್ರಹದಿಂದ ಹೆಚ್ಚು ಹೆಚ್ಚಾಗುತ್ತಿರುವ ತನ್ನ ದಾಸ್ಯಸ್ಥಿಕೆಯನ್ನು ಕಾಣುವಲ್ಲಿ ನಿರ್ಮಾಣಕರ್ತನೆದುರಾಗಿ ನಿರ್ಮಾಣದವನಾದ ಅವನು ಲಾಭ ಹಿಡುಕಾಳ್ಳ ಬೇಕೆಂಬ ಕಟ್ಟಳೆಯು ಹ್ಯಾಗೂ ಇರಲಿಲ್ಲ; ಆದರೆ ಲಾಭ ಹಿಡುಕಾಳ್ಳ ಕೂಡದಂಥವನು ಅಲ್ಲ, ಸ್ವತಂತ್ರದವನಾದ ಅವನು (ದೇವರ ವಾಕ್ಯವು ಹೇಳುವಂತೆ) ಸತ್ಯದಲ್ಲಿ ಅಥವಾ ತನ್ನ ವಿನಯವುಳ್ಳ ಸದ್ಭಾವನೆಯಲ್ಲಿ ನಿಂತು ಕಾಳ್ಳದೆ, ಲಾಭಲಕ್ಷಣವುಳ್ಳಂಥ ಆಲಾಭೋಚನೆಗಳನ್ನು ಹಿಡುಕಾಂಡು, ಅವುಗಳಿಂದ ವ್ಯಾಪಿಸಿಸಿ ಕಾಂಡು, ಲಾಭಿಯೂ ಸ್ವಾಮಿದ್ರೋಹಿಯೂ ಶಾಪಗ್ರಸ್ತನೂ ಆದನು; ನಿರ್ಮಾಣಿಕನ ಮುಂದೆ ನಿರ್ಮಾಣದವರೆಲ್ಲರಿಗೆ ಎಂದೆಂದಿಗೂ ಇರ ತಕ್ಕ ವಿನಯದ ಕಟ್ಟಳೆಗೆ ಅವಿ

ಧೇಯನಾದದ್ದೇ ಆ ಮುಖ್ಯ ದೂತನ ಆರಂಭಪಾಪವಾಯಿತೆಂದು ಕಾ
ಣಿಸುತ್ತದೆ; ಈ ಪಾಪಕ್ಕೆ ಅವನು ಬೇರೆ ದೂತರನ್ನು ಪ್ರೇರೇಪಿಸಿದ
ನು. — ಅದಕ್ಕೆ ರಂಗನು ಕೇಳಿದ್ದೇನಂದರೆ — ಆದರೆ ದೇವರು ನಿರ್ಮಿಸಿದ
ವರು, ನೀವು ನನ್ನ ಉತ್ತಮ ಸೇವಕರಾಗಿರ್ರಿ ಎಂಬ ಚಿತ್ತವುಳ್ಳ ದೇವರಿಗೆ
ವಿರೋಧವಾಗಿ, ಏನಾದರೂ ಮಾಡುವ ಸ್ವತಂತ್ರವುಳ್ಳವರಾಗಿದ್ದಾರೇ? —
ಆಗ ಸುಚಿತ್ತಿಯು ಅಂದನು — ಹೌದು, ನಿಶ್ಚಯ; ಆ ದೂತರು ಯಂ
ತ್ರವೇರಿಸಲ್ಪಟ್ಟವರಾಗಿರಲಿಲ್ಲ; ದೇವರಿಗೆ ನಿತ್ಯದಲ್ಲಿ ಸೇವೆ ಮಾಡುವದ
ಕ್ಕಾಗಲಿ ಅವನ ಸೇವೆ ಬಿಟ್ಟು ಬಿಡುವದಕ್ಕಾಗಲಿ, ಸತ್ಯದಲ್ಲಿ ನಿಂತು ಕಾ
ಳ್ಳುವದಕ್ಕಾಗಲಿ ಅದನ್ನು ತ್ಯಜಿಸುವದಕ್ಕಾಗಲಿ ಅವರಿಗೆ ಸ್ವತಂತ್ರವಿತ್ತು; ಹು
ಡುಗಿಯ ಕೈಯಲ್ಲಿ ಆಟಕ್ಕಾಗಿ ಇರುವ ಬಾಂಬೆಗಳಂತಾಗಲಿ, ಆಟಗಾರನು
ಪೇಟೆಯಲ್ಲಿ ಆಡಿಸುವ ಬಾಂಬೆಗಳಂತಾಗಲಿ, ಪೇದೆಯು ಬೆತ್ತ ಹಿಡಿದು
ದಾರೀ ಕೆಲಸಕ್ಕೆ ನಡಿಸುವ ಶರೆಯವರಂತಾಗಲಿ ಆ ದೂತರು ದೇವರ ಹ
ತ್ತರ ಇರಲಿಲ್ಲ; ದೇವರು ಆಟಗಾರನಲ್ಲ, ಪೇದೆಯೂ ಅಲ್ಲ; ಆ ದೂತ
ರು, ದೇವರ ಸುಚಿತ್ತಕ್ಕೆ ವಿರುದ್ಧವಾಗಿ, ಸತ್ಯದಲ್ಲಿ ನಿಂತು ಕಾಳ್ಳದೆ ಅಂದರೆ
ತಮ್ಮ ಸ್ವತಂತ್ರದ ದುಷ್ಪ್ರಯೋಗ ಮಾಡಿ, ದೇವರ ವಿನಯವುಳ್ಳ ಸೇವೆ
ಯನ್ನು ಬೇಕೆಂತ ಬಿಟ್ಟರು; ಆದ್ದರಿಂದ ಅವರು ದೇವರ ಶಿಕ್ಷೆಗೆ ಒಳಬಿದ್ದ
ರು, ಆದ್ದರಿಂದ ನಿತ್ಯ ಜೀವವಾಗಿರುವ ಪರಿಶುದ್ಧ ದೇವರು ತನ್ನ ಬೆಳಕನ್ನು
ತಾರಿಸದಂಥ ಅಂಧಕಾರದ ಸ್ಥಳವಾದ ನರಕವು ಅವರಿಗೆ ನೇಮಕವಾ
ಯಿತು (ಪೇತ್ರನ ೨ನೇ ಪತ್ರಿಕೆ ೨, ೪); ಮತ್ತು ಇನ್ನು ಹೆಚ್ಚು ಶಿ
ಕ್ಷೆಯಾಗುವದು (ಪ್ರಕಟಣೆ ೨೦, ೧೦), ಹ್ಯಾಗಂದರೆ ತನ್ನ ಯಜಮಾ
ನನ ಚಿತ್ತವನ್ನು ತಿಳಿದು ಅದರ ಪ್ರಕಾರ ಮಾಡದೆ ಇರುವ ದಾಸನು ಬ
ಹಳ ಪೆಟ್ಟು ತಿನ್ನುವನು (ಲೂಕನ ಸುವಾರ್ತೆ ೧೨, ೪೭ — ೪೮); ದೂ
ತರೆಲ್ಲರು ಆನಂದವುಳ್ಳ ವಿನಯದಲ್ಲಿ ಎಂದಿಗೂ ನನ್ನ ಸಾಮೀಪ್ಯದಲ್ಲಿರ
ಲಿ ಎಂಬದು ದೇವರ ಆಲೋಚನೆಯಾಗಿತ್ತು, ಇದಕ್ಕೆ ಈ ವರೆಗೂ ಸತ್ಯದ
ಲ್ಲಿ ನಿಂತು ಕಾಯಿರುವ ದೂತರು ಸಾಕ್ಷಿಗಳಾಗಿದ್ದಾರೆ; ಅದಲ್ಲದೆ ಪಿಶಾ
ಚರುಗಳಾದವರಿಗೆ ಸತ್ಯದಲ್ಲಿ ನಿಂತು ಕಾಳ್ಳಲಿಕ್ಕೆ ಸಾಕಾಗುವಷ್ಟು ತ್ರಾಣ
ಶಿಕ್ಷುವ ಮಾರ್ಗವಿತ್ತು, ಇದಕ್ಕೂ — ಆ ದ್ಯಾಹಿಯಾದವನ ದುಷ್ಪ್ರೇರೇ

ಪಣಕೆ ನಡೆದಾಗ್ಯೂ — ದೇವರಿಗೆ ವಿಧೇಯರಾಗಿದ್ದು ಒಳ್ಳೇ ದೂತರಾಗಿ ಉಳಿದವರು ಸಾಕ್ಷಿಗಳಾಗಿದ್ದಾರೆ; ಹೀಗಿರಲಾಗಿ, ರಂಗಾ, ಆ ದೂತರು ಬೇಕೆಂತ ತಮ್ಮ ಸ್ವತಂತ್ರದ ದುಷ್ಪಯೋಗ ಮಾಡಿದ್ದರಿಂದಲೇ ಅವರಲ್ಲಿ ಆತ್ಮದ ಅವಿಧೇಯತ್ವವಾಗಿರುವ ಪಾಪವು ಉತ್ಪತ್ತಿಯಾಯಿತು; ಸ್ವಲ್ಪ ತಿಳಿಯ ಬಂತಾ? ಪಾಪದಿಂದ ಕೆಟ್ಟ ಹೀನ ಬುದ್ಧಿಯ ನರರಿಗೆ ಅಷ್ಟೆಲ್ಲಾ ಪೂರಾಗಿ ತಿಳಿಯದಿದ್ದರೂ ಆದದ್ದನ್ನು ನಂಬಿ ಕಾಳ್ಳ ಬೇಕು. — ಅದಕ್ಕೆ ಅವನ ತಮ್ಮನು — ಅದು ಹೌದು, ಆದರೆ ದೇವರು ದೂತರನ್ನು ಸತ್ಯ ಬಿಡ ಕೂಡದಂಥವರಾಗಿ ನಿರ್ಮಿಸದ್ದು ಯಾಕೆ? ಎಂತ ಕೇಳ್ತಾಗ್ಯೂ ಸುಚಿತ್ತಿಯು — ದೇವರು ಬಾಂಬೆಗಳ ದೇವರಾಗಿರಲಿಕ್ಕೆ ಮೆಚ್ಚಲಿಲ್ಲ; ಬಾಂಬೆಗಳಲ್ಲಿ ಪ್ರೀತಿಯೆಂಬ ಸ್ವತಂತ್ರಕ್ರಿಯೆ ಇಲ್ಲ, ಆದರೆ ದೇವರಿಗೆ ಪ್ರೀತಿಯ ಸೇವೆಯು ಬೇಕು! ಈಗ, ರಂಗನೇ, ಮನುಷ್ಯರಲ್ಲಿ ಪಾಪವು ಉತ್ಪತ್ತಿಯಾದ್ದನ್ನು ದೇವರ ವಾಕ್ಯದ ಪ್ರಕಾರ ತಾನೀನ್ಸೈನು, ಹ್ಯಾಗಂದರೆ —

ದೇವರು ಸಕಲ ಜನರ ಮೂಲಪಿತೃಗಳಾದ ಆದಾಮನು, ಹವ್ವಳು ಎಂಬ ಇಬ್ಬರು ಆದಿಮನುಷ್ಯರನ್ನು ತನ್ನ ಸ್ವರೂಪದ ಹಾಗೆ ಉಂಟು ಮಾಡಿದನು. — ಸುಚಿತ್ತಿಯು ಹೀಗೆಂದ ಕ್ಷಣದಲ್ಲಿ ರಂಗನು ಕೇಳಿದ್ದೇನಂದರೆ — ಹಾಗಾದರೆ ದೇವವಾಕ್ಯವು ಅನೇಕ ಜನಜಾತಿಗಳವೆ ಎಂತ ಬಾಧಿಸುವದಿಲ್ಲವಲ್ಲ? — ಸುಚಿತ್ತಿಯು ಇಂತೆಂದು ಉತ್ತರ ಕಾಟ್ಟನು — ಹೌದು; ಹಿಂದು ಪಂಡಿತರು ಸಹ ಹಾಗೆ ಬಾಧಿಸುವದಿಲ್ಲ, ಆದರೆ ಎಲ್ಲಾ ಜಗತ್ತು ಒಂದೇ ಆದ ಬ್ರಹ್ಮವಾಗಿರುವದರಿಂದ ಜಾತಿಭೇದವಿಲ್ಲವೆಂತ ಇವರು ಹೇಳುವ ಕಾರಣವು ಸುಳ್ಳಾಗಿದೆ; ದೇವರು ಬೇರೆ, ಮನುಷ್ಯರು ಬೇರೆ; ದೇವರು ಒಂದೇ ರಕ್ತದಿಂದ ಮನುಷ್ಯರ ಎಲ್ಲಾ ಜನಾಂಗಗಳನ್ನು ಉಂಟು ಮಾಡಿದನು ಎಂಬದೇ ಜಾತಿಭೇದವಿಲ್ಲದ್ದಕ್ಕೆ ನಿಜ ಕಾರಣವಾಗಿದೆ (ಅಪಾಸ್ತಲರ ಚರಿತ್ರ ೧೭, ೨೬). — ಆಗ ರಂಗನು — ದಯೆ ಮಾಡಿ ಆ ಹಿಂದು ಬಾಧನೆಗೆ ಒಂದು ಗ್ರಂಥ ಹೇಳಿರೆಂಬಾಗ್ಯೂ ಸುಚಿತ್ತಿಯು ಅಂದದ್ದೇನು — ಮಹಾಭಾರತದ ಶಾಂತಿ-ಪರ್ವದ ಮೋಕ್ಷ-ಧರ್ಮದಲ್ಲಿ ಹೇಳಿರುವದೇನಂದರೆ —

ನ ವಿಶೇಷೋಽಸ್ತಿ ವರ್ಣಾನಾಂ ಸರ್ವಂ ಬ್ರಹ್ಮಮ್ ಇದಂ ಜಗತ್।
ಬ್ರಹ್ಮಣಾ ಪೂರ್ವ-ಸೃಷ್ಟಂ ಹಿ ಕರ್ಮಭಿರ್ ವರ್ಣತಾಂ ಗತಂ ॥೬೪೪೦॥

ಟೀಕು॥ ವರ್ಣಗಳಲ್ಲಿ ವಿಶೇಷವು ಇರುವದಿಲ್ಲ, (ಯಾಕಂದರೆ) ಈ ಜಗತ್ತೆಲ್ಲಾ ಬ್ರಹ್ಮವಾಗಿದೆ; ಬ್ರಹ್ಮದಿಂದ ಪೂರ್ವದಲ್ಲಿ ಸೃಷ್ಟಿಯಾದ ಅದು (ನಾನಾ) ಕರ್ಮಗಳಿಂದ ವರ್ಣತ್ವವನ್ನು ಪಡಕೊಂಡಿದೆ. (ಭಾಗವತ-ಪುರಾಣದ ೧೦ನೇ ಸ್ಕಂಧದ ೧೪ನೇ ಅಧ್ಯಾಯದ ೪೦ನೇ ಶ್ಲೋಕವು ಅದೇ ಅರ್ಥದ್ದಾಗಿದೆ).—

ಆದರೆ, ತಮ್ಮಾ, ಈಗ ಪಾಪಾತ್ಪತ್ತಿಯನ್ನು ಕುರಿತು ತಿರಿಗಿ ವಿವರಿಸ್ಯೇನು; ದೇವರು ನಿರ್ಮಿಸಿದ ಆ ಆದಿಮನುಷ್ಯರು ಶರೀರಾತ್ಮಗಳಲ್ಲಿ ಬಹು ಒಳೆಯವರಾಗಿದ್ದರು, ಆದರೆ ಅವರು ಸಹ, ದೇವದೂತರ ಒಂದು ಗುಂಪಿನ ಹಾಗೆ, ತಮ್ಮ ಸ್ವತಂತ್ರದ ದುಷ್ಪ್ರಯೋಗದಿಂದ ಪಾಪದವರಾದರು, ಅಕಟಾ! ದೇವರು ತನ್ನ ಸ್ವರೂಪದ ಹಾಗೆ ಆ ಆದಿಮನುಷ್ಯರನ್ನು ಮಾನುಷ್ಯಸ್ಥಿತಿಗತಿಗೆ ತಕ್ಕಾದಷ್ಟು ಸ್ವತಂತ್ರವುಳ್ಳವರಾಗಿ ನಿರ್ಮಿಸಿ, ಗಂದು ಹೆಣ್ಣಾಗಿರುವ ಆ ಇಬ್ಬರನ್ನು ಒಂದು ರಮ್ಯವಾದ ವನಾಂತ್ರದಲ್ಲಿಟ್ಟನು; ಅವರು ದೇವರಿಗೆ ಪ್ರೀತಿಯಿಂದ ಸೇವಿಸುತ್ತಾ ಭೂಮಿಯನ್ನು ಆಳುತ್ತಾ ಎಂದೆಂದಿಗೂ ಆನಂದವಾಗಿರ ಬೇಕು (ಮೋಶೆಯ ೧ನೇ ಪುಸ್ತಕ ೨, ೮, ೨೨; ೧, ೨೬—೩೦); ಆಗ ಮರಣವಿರಲಿಲ್ಲ, ಹ್ಯಾಗಂದರೆ ಮರಣವು ಪಾಪದ ಸಂಬಳವಾಯಿತು (ರೋಮಾಯರ ಪತ್ರಿಕೆ ೬, ೨೩); ಆ ಮನುಷ್ಯರು ದೇವರಿಗೆ ವಿಧೇಯರಾಗಿದ್ದು ಹೆಚ್ಚು ಹೆಚ್ಚಾಗಿ ತಾವಿರುವ ದೇವಾನ್ಯೇನ್ಯದಲ್ಲಿ ಶೇರುತ್ತಾ ಇರ ಬೇಕು; —ಅವರು ನಕ್ಷತ್ರಪ್ರಕಾಶವುಳ್ಳವರಾಗಿದ್ದು, ಬರುತ್ತಾ ಬರುತ್ತಾ ಚಂದ್ರಪ್ರಕಾಶವುಳ್ಳವರು ಆ ಮೇಲೆ ಸೂರ್ಯಪ್ರಕಾಶವುಳ್ಳವರು ಆಗ ಬೇಕು, ಅಥವಾ ಒಂದು ಶಾಲೆಯಲ್ಲಿದ್ದ ಹಾಗೆ ಇದ್ದು, ಒಂದು ಪಾಠದ ಮೇಲೆ ಮತ್ತೊಂದು ಪಾಠವನ್ನು ಕಲಿಯುತ್ತಾ ವಿಜ್ಞಾನಸಂಪನ್ನರಾಗ ಬೇಕು ಎಂತ, ಸಾಮ್ಯವಾಗಿ ಹೇಳ ಬಹುದು; ಅದಕ್ಕಾಗಿ ದೇವರು ಅವರಿಗೆ ಆರಂಭದ ಪಾಠವಾಗಿ ಹೇಳಿದ್ದೇನಂದರೆ — ತೋಟದ ಎಲ್ಲಾ ಮರಗಳಿಂದ ತಿನ್ನ ಬಹುದು, ಮೇಲು ಕೀಳುಗಳ ತಿಳುವಿಕೆಯ ಮರದಿಂದ ತಿನ್ನ ಬಾರದು; ಯಾಕಂದರೆ ನೀನು ಅದರಿಂದ ತಿನ್ನುವ

ದಿವಸದಲ್ಲಿ ಸಾಯಲೇ ಸಾಯುವಿ (ಮೋಶೆಯ ೧ನೇ ಪುಸ್ತಕ ೨, ೧೭); — ಇತ್ತಲಾಗೆ ಆ ಪಾತವು ತಕ್ಕಷ್ಟು ಹೆಚ್ಚು ಜಾರದ್ದಾಗುವ ಹಾಗೆ ದೇವರು ಸರ್ಪದಾಳಗೆ ಹಾಕ್ಕಾಂದ (ಮುಂಚೆ ದೇವದೂತನಾಗಿದ್ದ) ಪಿಶಾಚನನ್ನು ಅವರ ಹತ್ತರ ಹಾಗ ಗಾಯಿಸಿದನು; ಇವನ ಮುಖಾಂತ್ರ ದಿಂದ ಅವರ ಪ್ರೀತಿಗೆ ಪಾತ್ರನೆಯಾಗ ಬೇಕು; ಆದರೆ ದೇವರು ಅವರ ಬಲ ಕ್ಕಿಂತ ಹೆಚ್ಚಾಗಿ ಅವರನ್ನು ಶಾಪಿಸಲ್ಪದ ಗಾಯಿಸಲಿಲ್ಲ (ಕಾರಿಂಥರ ೧ನೇ ಪತ್ರಿಕೆ ೧೦, ೧೩); — ಬಳಿಕ ಆದದ್ದೇನಂದರೆ, ಆ ಪಿಶಾಚನು ಸ್ತ್ರೀ ಗೆ ಅಂದದ್ದು — ನೀವು ತಾಟಿದ ಎಲ್ಲಾ ಮರಗಳ ಫಲವ ತಿನ್ನ ಬಾರ ದೆಂದು, ದೇವರು ಹೇಳಿದ್ದುಂಟೇ? — ಸ್ತ್ರೀಯು ಸರ್ಪಕ್ಕೆ ಅಂದಳು — ತಾಟಿದ ಮರಗಳ ಫಲವನ್ನು ನಾವು ತಿನ್ನ ಬಹುದು, ಆದರೆ, ತಾಟಿ ದ ಮಧ್ಯದಲ್ಲಿರುವ ಮರದ ಫಲವನ್ನು, ನೀವು ಸಾಯದ ಹಾಗೆ, ತಿನ್ನ ಲೂ ಅದನ್ನು ಮುಟ್ಟಲೂ ಬಾರದೆಂದು, ದೇವರು ಹೇಳಿದ್ದಾನೆ; — ಸ ರ್ಪವು ಸ್ತ್ರೀಗೆ ಅಂದದ್ದು — ನೀವು ಸಾಯಲೇ ಸಾಯುವದಿಲ್ಲ; ಆದರೆ ಅದನ್ನು ತಿಂದ ದಿವಸದಲ್ಲಿ ನಿಮ್ಮ ಕಣ್ಣುಗಳು ತೆರೆಯಲ್ಪಡುವವೆಂದೂ, ನೀವು ಮೇಲು ಕೀಳುಗಳನ್ನು ಅರಿತವರಾಗಿ ದೇವರ ಹಾಗೆ ಇರುವಿರೆಂದೂ, ದೇವರಿಗೆ ತಿಳಿದದೆ; — ಆಗ ಸ್ತ್ರೀಯು ನೋಡಿ, ಆ ಮರವು ತಿನ್ನುವದಕ್ಕೆ ಒಳ್ಳೇದೂ ಕಣ್ಣುಗಳಿಗೆ ಇಷ್ಟವೂ ಆ ಮರವು ಬುದ್ಧಿ ಹೊಂದುವದಕ್ಕೆ ರ ಮ್ಯವೂ ಎಂದು, ಅದರ ಫಲ ತೆಗೆದು, ತಿಂದಳು; ಮತ್ತು ತನ್ನ ಸಂಗಡ ಲಿರುವ ಗಂಡನಿಗೂ ಕಾಟ್ಟಳು; ಅವನು ತಿಂದನು (ಮೋಶೆಯ ೧ನೇ ಪು ಸ್ತಕ ೩, ೧ — ೬); — ಅಕಟಾ, ರಂಗನೇ, ಹೀಗೆ ದೇವರ ವಾಕ್ಯದ ಪ್ರ ಕಾರ ಆದಿಮನುಷ್ಯರು ದೇವರಿಗೆದುರಾಗಿ ಅವಿಧೇಯತ್ವ ನಡಿಸಿ, ಅವಿಧೇ ಯಾವಸ್ಥೆಯುಳ್ಳವರಾಗಿ ಮನುಷ್ಯಜಾತಿಯಲ್ಲಿರುವ ಪಾಪಕ್ಕೆ ಕಾರಣವಾ ದರು; ಅವರು ಒಳ್ಳೇ ಯುದ್ಧಸ್ಥರಂತೆ ಪಿಶಾಚನ ಸುಳ್ಳನ್ನು ಜಯಿಸಿ ಸಾ ಧನೆಯ ಮೂಲವಾಗಿ ಬಲದಿಂದ ಬಲಕ್ಕೆ ಹೋಗಲಿ ಎಂಬದೇ ದೇವರ ಕೃಪಾಯಾಚನೆಯಾಗಿತ್ತು, ಜಯಿಸಲಿಕ್ಕೆ ಅವರಿಗೆ ನನ್ನಲ್ಲಿ ತ್ರಾಣವುಂ ಟು ಎಂಬದು ದೇವರಿಗೆ ತಿಳಿದಿತ್ತು; ಆದರೆ ಅವರು ಲಕ್ಷಿಸುತ್ತಿದ್ದ ದೇವಾ ಜ್ಞೆಯನ್ನು ಇನ್ನೂ ಲಕ್ಷಿಸದೆ, ತಮ್ಮಲ್ಲಿಲ್ಲದಿದ್ದ ಲಾಭಾಲಾಭನೆಗಳನ್ನು

ದೇವರಿಗೆ ವಿರೋಧವಾಗಿ ಹಿಡುಕಾಂಡು, ಪಾಪವೇನೆಂದು ತಮ್ಮಿಂದ ತಾವೇ ಅನುಭವಿಸಲಿಕ್ಕೆ ಹಾಕಿದರು; ಆದ್ದರಿಂದ ತಮ್ಮ ದಿವ್ಯ ಸ್ವಾವದ ರೂಪವನ್ನು ತಾವೇ ಕಳದು ಬಿಟ್ಟರು, ದೇವರ ವೈರಿಗಳಾಗಿ ಅವನ ಕೋಪವನ್ನೂ ಶಿಕ್ಷೆಯನ್ನೂ ತಾವೇ ತಮ್ಮ ಮೇಲೆ ತರಿಸಿದರು, ಅವರು ಅನ್ಯಾಯ ಮಾಡಿ ಅನ್ಯಾಯಕ್ಕೆ ಹಗೆ ಮಾಡುವ ಪರಿಶುದ್ಧ ದೇವರ ಐಕ್ಯಕ್ಕೆ ಯೋಗ್ಯರಲ್ಲದವರು ಆದರು, ಅವರು ತಮ್ಮನ್ನು ಆಳಿ ಕಾಳ್ಕುವ ಸ್ವತಂತ್ರ ಕಳದು ಬಿಟ್ಟು ಪಿಶಾಚನಿಂದಲೂ ದೇವರಿಗೆ ವಿರುದ್ಧಕರವಾದ ಸ್ವಾವದಿಂದಲೂ ಆಳಿಸಿ ಕಾಳ್ಕುವವರು ಆದರು, ಅವರು ದೇವರಿಗೂ ಸತ್ಯಕ್ಕೂ ಪ್ರೀತಿ ಮಾಡುವ ಸ್ವತಂತ್ರ ಕಳದು ಬಿಟ್ಟು ಅವಿಧೇಯತ್ವದ ದಾಸರು ಆದರು, ಅವರು ಆನಂದಜೀವವಾಗಿರುವ ದೇವರನ್ನಗಲಿ ಬಿಟ್ಟು ದೇವರು ಪಾಪಕ್ಕೆ ಶಿಕ್ಷೆಯಾಗಿ ನೇಮಿಸಿದ್ದ ಕಷ್ಟವೂ ಮರಣವೂ ಉಳ್ಳವರು ಆದರು (ಮೋಶೆಯ ೧ನೇ ಪುಸ್ತಕ ೩, ೧೬—೧೯); ಆ ಮೂಲಪಿತೃಗಳು ದೇವಾತ್ಮಕ್ಕೆ ವಿರೋಧವಾಗಿ ಆಶಿಸುವ ಮಾಂಸಸ್ವಾವದವರಾದ್ದರಿಂದ ಮಾಂಸದಿಂದ ಹುಟ್ಟಿದ್ದು ಮಾಂಸವೇ ಎಂಬ ಕಟ್ಟಳೆಯ ಮೇರೆಗೆ (ಯೋಹಾನನ ಸುವಾರ್ತೆ ೩, ೬) ಮನುಷ್ಯರೆಲ್ಲರು ಮಾಂಸಸ್ವಾವದವರಾಗಿ, ಸ್ವಸ್ವಾವದ ಪ್ರಕಾರ ದೇವರ ಕೋಪದ ಮಕ್ಕಳಾಗಿದ್ದಾರೆ (ಎಫೆಸ್ಯರ ಪತ್ರಿಕೆ ೨, ೩). —

ರಂಗನು ತಲೆಮೊಗುತ್ತಾ ಅಲ್ಲೈಸಿ, ಹೇಳಿದ್ದೇನಂದರೆ — ಅಣ್ಣಾ, ನೀವು ಚಿಕ್ಕತನದಲ್ಲಿ ನನಗೆ ಕಲಿಸಿದ (ಭಾಷಾ-ಪರಿಚ್ಛೇದದಲ್ಲಿ ಇರುವ) ಒಂದು ಶ್ಲೋಕವು ನನಗೆ ನೆನಪಾಯಿತು, ಏನಂದರೆ —

ಸುಖಂ ತು ಜಗತಾಮ್ ಏವ ಕಾಮ್ಯಂ ಧರ್ಮೇಣ ಜನ್ಯತೇ।
ಅಧರ್ಮ-ಜನ್ಯಂ ದುಃಖಂ ಸ್ಯಾತ್ ಪ್ರಶಿಕೂಲಂ ಸಚೇತಸಾಂ॥೧೪೪॥

ಟೀಕು॥ ಜಗತ್ತಿನವರು ಕಾಮಿಸ ತಕ್ಕಂಥ ಸುಖವು ಧರ್ಮದಿಂದ (ಅಂದರೆ ದೇವರ ಪರಿಶುದ್ಧ ಚಿತ್ತಕ್ಕೆ ಅನುಸಾರವಾದ ನಡತೆಯಿಂದ) ಹುಟ್ಟುತ್ತದೆ; ಅಧರ್ಮದಿಂದ ಹುಟ್ಟುವ ದುಃಖವು ಬುದ್ಧಿವಂತರಿಗೆ ಸರಿಯಾಗದಂಥಾದ್ದು ಆಗಿರುತ್ತೆ*. —

*ಉಪಗ್ರಂಥದ ೧೨ನೇ ಅಂಕೆಯದನ್ನು ನೋಡಿರಿ.

ಆದರೆ, ಸುಚಿತ್ತಿಯೇ, ಒಂದು ಪ್ರಶ್ನೆಗೆ ಉತ್ತರವನ್ನು ದಯೆ ಮಾಡಿರಿ, ದೇವರು ನಮ್ಮ ಆದಿತಂದೆತಾಯಿಗಳನ್ನು ಪಾಪಕ್ಕೆ ಯಾಕೆ ತಡಿಸಲಿಲ್ಲ? — ಸುಚಿತ್ತಿಯು ಅಂದನು — ತಮ್ಮಾ, ಒಬ್ಬ ಮಹಾರಾಜನು ತನ್ನ ಸೇವಕರಲ್ಲಿ ಒಬ್ಬನನ್ನು, ನಂಬಿಗಸ್ತನಾಗಿರುವನಾ? ಇಲ್ಲವೋ? ಎಂತ, ಸೂಕ್ಷ್ಮನ್ಯಾಯವಾಗಿ ಶಾಸ್ತ್ರಿಸಹಾದರೆ, ಆ ಸೇವಕನ ವಿಧೇಯನಡತೆಯಾಗಲಿ ಅವಿಧೇಯನಡತೆಯಾಗಲಿ ಪ್ರತ್ಯಕ್ಷವಾಗ ಬೇಕಾದಾಗಲೇ ಆ ರಾಜನು, ಅವನನ್ನು ತಡಿಸುವದಕ್ಕಾಗಲಿ ನಡಿಸುವದಕ್ಕಾಗಲಿ, ತನ್ನ ಕೈ ಚಾಚಿ, ಸ್ವಲ್ಪ ಬಲವಂತವನ್ನಾದರೂ ಮಾಡುವದುಂಟೇ? ಅಥವಾ ಒಬ್ಬ ವರ್ತಕನು ಸೂಕ್ಷ್ಮಶಾಸ್ತ್ರನೆಗಾಗಿ ಎರಡು ವಸ್ತುಗಳನ್ನು ತೂಕ ಮಾಡಿ ಸರಿ ನಾಡ ಬೇಕಾದರೆ, ಒಂದಕ್ಕೆ ಪರ ವಸ್ತುವನ್ನು ಕೂಡಿಸಿ ಮೋಸದ ತೂಕ ಮಾಡುವದುಂಟೇ? ಒಬ್ಬ ಒಕ್ಕಲಿಗನು ಪಶುಗಳಿಗೆ ಹಗ್ಗಗಳನ್ನು ಒಬ್ಬ ಆಟಗಾರನು ಬಾಂಬೆಗಳಿಗೆ ಸೂತ್ರಧಾರಗಳನ್ನು ಕಟ್ಟಿ, ಅವನವುಗಳನ್ನು ಇವನಿವುಗಳನ್ನು ತನ್ನ ಚಿತ್ತದಾಳಿಗೆ ಮಾಡಿ ಕಾಳ್ಳುವಂತೆ ದೇವರು ಮಾನುಷ್ಯಸ್ಥಿತಿಗತಿಗನುಸಾರವಾಗಿ ತನ್ನ ಸ್ವರೂಪದ ಹಾಗೆ ಸ್ವತಂತ್ರವುಳ್ಳವರಾಗಿ ನಿರ್ಮಿಸಿದ ಮನುಷ್ಯರನ್ನು ನಡಿಸಲಾಗಲಿಲ್ಲ; ಮನುಷ್ಯರು ದನಗಳಲ್ಲ ದೇವರು ದನದವನಲ್ಲ, ಮನುಷ್ಯರು ಬಾಂಬೆಗಳಲ್ಲ ದೇವರು ಆಟಗಾರನಲ್ಲ; ದೇವರಿಗೆ ಸ್ವತಂತ್ರದ ಮೇಲೆ ತನಗೆ ಪ್ರೀತಿ ಮಾಡುವಂಥವರ ಸೇವೆಯು ಬೇಕು, ಆದರೆ ಎಲ್ಲಿ ಸ್ವತಂತ್ರವಿಲ್ಲವೋ ಅಲ್ಲಿ ಪ್ರೀತಿಯಿಲ್ಲ; ಅದಕ್ಕಾಗಿ ದೇವರು ಆದಿಜನರಲ್ಲಿ ಯಾವ ವ್ಯಸನಗಳನ್ನೂ ಇಡದೆ, ಅವರಿಗೆ, ಪ್ರೀತಿ ಮಾಡುವ ಮೇರೆಗೆ, ಸ್ವತಂತ್ರ ಕಾಟ್ಟು, ಒಳ್ಳೇದನ್ನು ಮಾಡಲಿಕ್ಕೆ ಅವರನ್ನು ಬಹಳ ಆನಂದದ ವಾಗ್ದತ್ತದಿಂದ ಎಚ್ಚರಿಸಿ (ಮೋಶೆಯ ೧ನೇ ಪುಸ್ತಕ ೧, ೨೮—೩೦), ಕೆಟ್ಟದ್ದನ್ನು ಬಿಡಲಿಕ್ಕೆ ಅವರನ್ನು ದಾಡ್ಡ ಶಿಕ್ಷೆ ಮಾಡುತ್ತೇನೆಂತ ಬೆದರಿಸಿದನು (ಮೋಶೆಯ ೧ನೇ ಪುಸ್ತಕ ೨, ೧೭); ಇದು ಸಮವಲ್ಲವೋ, ತಮ್ಮಾ? ನಾನೆಂದಿರಿ, ಮನುಷ್ಯರು ಆದಿಯಲ್ಲಿ ನಮ್ಮಂಥ ಪಾಪಬಂಧವುಳ್ಳವರಾಗಿರಲಿಲ್ಲ, ಅದಲ್ಲದೆ ಅವರು ಪಾಪವ್ಯಸನವಿಲ್ಲದವರಾಗಿದ್ದರೂ ದೇವರ ಚಿತ್ತ ಮಾಡುವ ವ್ಯಸನವುಳ್ಳವರೂ ಆಗಿರಲಿಲ್ಲ; ಅವರು ಸ್ವತಂತ್ರದ ಮೇಲೆ ವಿಧೇಯತ್ವದಿಂದ

ವಿಧೇಯತ್ವಕ್ಕೆ ಹಾಗ ತಕ್ಕವರಾಗಿದ್ದರು; ಅವರು ವಿಧೇಯತ್ವ ನಮಿಸ ಯೋಗ್ಯವಾದಲ್ಲಿ ದೇವರು ಕಿಂಚಿತ್ ಬಲಾತ್ಕಾರ ಮಾಮಿ, ಅವರು ತನ್ನ ಚಿತ್ತ ಮಿರದ ಹಾಗೆ ಅವರನ್ನು ತಮಿಸಿ, ತನ್ನ ಚಿತ್ತ ಮಾಡುವ ಹಾಗೆ ಅವರನ್ನು ನಮಿಸಿ ಇದ್ದರೆ, ಪ್ರೀತಿಯ ಸೇವೆಯು ನಡೆಯುತ್ತಿದ್ದಿಲ್ಲ.—ಆಗ ರಂಗನು ಅಂದದ್ದೇನು—ಶಿಳಿಯಿತಣ್ಣಾ, ಆದರೆ ನಾನು ಈಗ ಮಾಡಲಿಕ್ಕಿರುವ ಪ್ರಶ್ನೆಗೆ ಮುಂದಾಗಿ ಮನ್ನಿಸಿರಿ, ವಿನಂದರೆ ದೇವರು ಅವರನ್ನು ಪಾಪಕ್ಕೂ ಶಿಕ್ಷೆಗೂ ಪ್ಯಾಗಾದರೂ ತಪ್ಪಿಸದಿದ್ದಲ್ಲಿ ಅವನ ಕರುಣೆಯು ಸ್ವಲ್ಪ ಕಮಿಮೆಯಾಗಿ ಕಾಣಿಸುವದಿಲ್ಲವೋ?—ಅದಕ್ಕೆ ಸುಚಿತ್ತಿಯು ಉತ್ತರ ಕಾಟ್ಟದ್ದೇನಂದರೆ—ದೇವರಲ್ಲಿ ಕರುಣೆಯು ಕಮಿಮೆಯಾ? ಇಲ್ಲವಿಲ್ಲ, ತಮ್ಮಾ! ಅವನು, ತನ್ನ ಸ್ವರೂಪದ ಹಾಗೆ ಸ್ವತಂತ್ರವಿರುವವರಿಗೆ ಬಲವಂತ ಮಾಡುವದು ನ್ಯಾಯವಲ್ಲವೆಂತ, ಶಿಳುಕಾಳ್ಳದಿದ್ದರೆ ಅವರನ್ನು ಪಾಪಕ್ಕೂ ಅದರ ಸಂಬಳಕ್ಕೂ ತಪ್ಪಿಸ ಬಹುದಾಗುತ್ತಿತ್ತು, ಆದರೆ ದೇವರು ಅನ್ಯಾಯಗಾರನಾ? ಇಲ್ಲವಿಲ್ಲ! ಆದರೆ ಕರುಣೆಯಲ್ಲಿ ಅಶಾಧ್ಯ ಐಶ್ವರ್ಯವುಳ್ಳವನಾದ ದೇವರು ಮನುಷ್ಯರು ದ್ರೋಹಿಗಳೂ ಶತ್ರುಗಳೂ ಆದ ಕ್ಷಣದಲ್ಲಿಯೇ, ನಾನು ನೀತಿ ನಮಿಸುವವನಾಗಿದ್ದರೂ ಪ್ರೀತಿ ಬಿಡುವವನಲ್ಲವೆಂಬಂತೆ, ವಾಗ್ದತ್ತ ಮಾಮಿದ್ದೇನಂದರೆ—

ಪಿಶಾಚನಿಗೂ ಸ್ತ್ರೀಯ ಬೀಜದವನಿಗೂ ಹಗೆ ಇಡುವೆನು; ಇವನು ಪಿಶಾಚನ ತಲೆ ಜಜ್ಜುವನು, ಆದರೆ ಪಿಶಾಚನು ಅವನ ಹಿಮ್ಮಡಿ ಬಡಿಯುವನು (ವೋಶೆಯ ೧ನೇ ಪುಸ್ತಕ ೩, ೧೫); —ಈ ವಾಗ್ದತ್ತದಲ್ಲಿ ದೇವರು ಹೇಳಿದ ವಿವರವೇನಂದರೆ—ನನ್ನ ವಾಕ್ಯವಾಗಿರುವ ವಿಕ ಪುತ್ರನನ್ನು ಕಳುಹಿಸುವೆನು (ಯೋಹಾನನ ಸುವಾರ್ತೆ ೧, ೧; ೩, ೧೬), ಅವನು ನಿಮ್ಮ ವಂಶದವಳಾದ ಕನ್ಯಾಸ್ತ್ರೀಯಲ್ಲಿ ನಿಮ್ಮ ಮಾಂಸವಾಗಿ (ಲೂಕನ ಸುವಾರ್ತೆ ೧, ೨೬—೨೭; ಯೋಹಾನನ ಸುವಾರ್ತೆ ೧, ೧೪), ಎರಡನೇ ಆದಾಮನಾಗಿ ಅವಳಿಂದ ಹುಟ್ಟಿ (ರೋಮಾಯರ ಪತ್ರಿಕೆ ೫, ೧೪; ಕಾರಿಂಥರ ೧ನೇ ಪತ್ರಿಕೆ ೧೫, ೪೫; ಲೂಕನ ಸುವಾರ್ತೆ ೨, ೬—೭), ನನ್ನ ಚಿತ್ತವನ್ನು ಮಾಡುವದು ತನ್ನ ಆಹಾ

ರವೆಂಬಂತೆ ನಡೆದು (ಯೋಹಾನನ ಸುವಾರ್ತೆ ೪, ೫), ಸಮಸ್ತ ನೀತಿಯನ್ನೂ ನ್ಯಾಯವನ್ನೂ ಈಡೇರಿಸಿ (ಮತ್ತಾಯನ ಸುವಾರ್ತೆ ೩, ೧೫; ರೋಮಾಯರ ಪತ್ರಿಕೆ ೧೦, ೪), ಪಾಪವಿಲ್ಲದವನಾಗಿದ್ದು (೨ ಕ್ರಿಯರ ಪತ್ರಿಕೆ ೪, ೧೫), ಸತ್ಯದ ವೈರಿಯಾದ ಪಿಶಾಚನ ಹಗೆಯಿಂದಲೂ ಇವನ ಚಾಕರರಾದ ಪಾಪಿಷ್ಠರ ಕೈಯಿಂದಲೂ, ಸಮಸ್ತ ಜನರ ಪಾಪವಿಮೋಚನೆಗಾಗಿ, ಬೇಕೆಂತ ಮರಣ ಪಟ್ಟು (ಯೋಹಾನನ ಸುವಾರ್ತೆ ೧೦, ೧೧, ೧೫, ೧೭, ೧೮; ೧೫, ೧೩; ಮತ್ತಾಯನದು ೨೬, ೨೮), ನೀವೂ ನಿಮ್ಮ ಮಕ್ಕಳೂ ಒಳಬಿದ್ದ ಪಾಪದ ಶಾಪವನ್ನೂ ಪಿಶಾಚನ ಅಧಿಕಾರವನ್ನೂ ಹಾಳು ಮಾಡಿ (ಕಾಲಾತ್ಸ್ಯೆಯರ ಪತ್ರಿಕೆ ೨, ೧೪—೧೫; ಎಫೆಸ್ಯರದು ೪, ೮), ವಿಶ್ವಾಸಿಸುವವರಿಗೆ ನಿತ್ಯಜೀವವನ್ನು ದಾರಕೆಸುವನು (ಯೋಹಾನನ ಸುವಾರ್ತೆ ೩, ೧೬); — ಇದೇ, ತಮ್ಮಾ, ಆ ಪ್ರಥಮಸುವಾರ್ತೆಯ ಅರ್ಥವು; ಅದು ಆ ವಾಗ್ದತ್ತದ ಸ್ತ್ರೀಬೀಜವಾನಾದ ಯೇಸು ಕ್ರಿಸ್ತನಲ್ಲಿ ಒದಗಿ ಬಂತು; ಇವನೇ ಲೌಕಿಕ ಪಾಪಗಳನ್ನು ಹೊತ್ತು ಕೊಂಡು ಹೋಗುವ ಯಜ್ಞಕುರಿಮರಿಯಾಗಿ (ಯೋಹಾನನ ಸುವಾರ್ತೆ ೧, ೨೯), ಲೌಕಿಕದವರಿಗೆ ಪ್ರೀತಿ ಮಾಡಿ ತನ್ನನ್ನು ತಗ್ಗಿಸಿ ಕೊಂಡು, ಮರಣದ ವರೆಗೆ — ಕ್ರೂಜೆಯ ಮರಣದ ವರೆಗೂ — ವಿಧೇಯನಾಗಿದ್ದು, ವಿಶ್ವಾಸಿಸುವವರ ಪಾಪಗಳನ್ನು ತನ್ನ ಶುದ್ಧ ರಕ್ತದಿಂದ ತಾಳೆದು ತೆಗೆದು (ಫಿಲಿಪ್ಪರ ಪತ್ರಿಕೆ ೨, ೮; ಪ್ರಕಟಣೆ ೧, ೬), ಅವರಿಗೆ ಜೀವವು ಆಗಿದ್ದಾನೆ (ಯೋಹಾನನ ಸುವಾರ್ತೆ ೧೪, ೬); — ರಂಗಾ, ಯಾವ ಪ್ರಕಾರ ಒಬ್ಬನೇ ಮನುಷ್ಯನ ಅವಿಧೇಯತ್ವದಿಂದ ಅನೇಕರಾದವರು ಪಾಪಿಗಳಾದರಾ, ಅದೇ ಪ್ರಕಾರ ಒಬ್ಬನಾದವನ ವಿಧೇಯತ್ವದಿಂದ ಅನೇಕರಾದವರು ನೀತಿವಂತರಾದರು (ರೋಮಾಯರ ಪತ್ರಿಕೆ ೫, ೧೯); ಪಾಪದ ಸಂಬಳವು ಮರಣವು, ಆದರೆ ದೇವರ ಕೃಪೆಯ ವರವು ನಮ್ಮ ಕರ್ತನಾದ ಯೇಸುವಿನಲ್ಲಿರುವ ನಿತ್ಯಜೀವವು (ರೋಮಾಯರ ಪತ್ರಿಕೆ ೬, ೨೩); ನಾವು ಮಣ್ಣಿನವನ ಹೋಲ್ವಿಕೆಯನ್ನು ಪಡೆಸಿದ ಹಾಗೆ ಪರಲೋಕದವನಾದ ಯೇಸು ಕ್ರಿಸ್ತನ ಹೋಲ್ವಿಕೆಯನ್ನು ಪಡೆಸಿ (ಕೊರಿಂಥರ ೧ನೇ ಪತ್ರಿಕೆ ೧೫, ೪೯), ತಿರಿಗಿ ದೇವರ ಸ್ವರೂಪವುಳ್ಳವರಾಗು

ವೆವು (ಕಾರಿಂಥರ ೨ನೇ ಪತ್ರಿಕೆ ೩, ೧೮); — ರಂಗಾ, ಯೇಸು ಕ್ರಿಸ್ತನು ತನ್ನನ್ನು ತಾನೇ ತನ್ನ ತಂದೆಯಾದ ದೇವರಿಗೆ ಅರ್ಪಿಸಿ, ಈ ಒಂದೇ ಯಜ್ಞಾರ್ಪಣೆಯಿಂದ ಪರಿಶುದ್ಧ ಮಾಡಲ್ಪಡುವವರನ್ನು ಸದಾಕಾಲಕ್ಕೆ ಸಂಪೂರ್ಣ ಮಾಡಿದ್ದಾನೆ; ತನ್ನ ಮುಖಾಂತರ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸ ಬಲ್ಲನು (ಇಬ್ರಿಯರ ಪತ್ರಿಕೆ ೧೦, ೧೪; ೭, ೨೫); ತನ್ನನ್ನು ತಾನೇ ಅರ್ಪಿಸಿದ, ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪದಿಂದ ಪ್ರತ್ಯೇಕನೂ ಆಕಾಶಗಳಿಗಿಂತ ಉನ್ನತನೂ ಆಗಿರುವ ಪ್ರಧಾನಯಾಜಕನು ನಮಗೆ ಬೇಕು (ಇಬ್ರಿಯರು ೭, ೨೬—೨೭); ಯೇಸು ಕ್ರಿಸ್ತನೆಂಬ ಅವನಲ್ಲಿಯೇ ನಮ್ಮ ಪಿತೃಗಳ ಮತ್ತು ಸರ್ವ ಭೂಮಿಯವರ ಆಶಾರ್ಥವು ಒದಗಿತು.

ಆಗ ರಂಗನು ಅದೇನೆಂತ ಕೇಳಲಾಗಿ ಸುಚಿತ್ತಿಯು ಇಂತೆಂದನು — ಮಹಾಭಾರತದ ಶಾಂತಿ-ಪರ್ವದ ಅರ್ಧ ಶ್ಲೋಕ ಕೇಳಿರಿ, ಏನಂದರೆ —

ಸ್ವರ್ಗ-ಕಾಮೋ ಯಜೇತೇತಿ ಸತತಂ ಶ್ರೂಯತೇ ಶ್ರುತಿಃ। ೯೬೧೯।

ಟೀಕು॥ ಸ್ವರ್ಗವನ್ನು (ಅಂದರೆ ಪ್ರಕಾಶಲೋಕವನ್ನು) ಅಪೇಕ್ಷಿಸುವವನು ಯಜ್ಞ ಮಾಡಲಿ! ಎಂತ ವೇದವು ನಿತ್ಯದಲ್ಲಿ ಕೇಳಿಸುತ್ತದೆ.—

ಸ್ವರ್ಗ-ಕಾಮೋ ಯಜೇತ (ಅಂದರೆ ಸ್ವರ್ಗವನ್ನು ಅಪೇಕ್ಷಿಸುವವನು ಯಜ್ಞ ಮಾಡಲಿ) ಎಂಬುದರ ಪ್ರಕಾರ ಪಿತೃಗಳು, ಎಲ್ಲಾ ಲೌಕಜನರು ಸಹಿತವಾಗಿ, ನಿಜ ಸುಖದ ಪ್ರಾಪ್ತಿಗೆ ಯಜ್ಞಗಳನ್ನು ಮಾಡುತ್ತಿದ್ದರು; ಇವು ಮುಂದಿದ್ದಂಥ, ಯೇಸು ಕ್ರಿಸ್ತನಲ್ಲಿ ಪೂರ್ತಿಯಾದಂಥ ನಿಜ ಯಜ್ಞದ ನೆರಳಾಗಿದ್ದವು (ಕಾಲಾಸ್ಸೆಯರ ಪತ್ರಿಕೆ ೨, ೧೭; ಇಬ್ರಿಯರಮಲ, ೫; ೧೦, ೧), ಯಾಕಂದರೆ ಗೂಳಿ ಹಾಗೂ ಹೋತು ಇತ್ಯಾದಿಗಳ ರಕ್ತವು ಪಾಪಗಳನ್ನು ಪರಿಹರಿಸಲಾರದು; ಆದ್ದರಿಂದ, ತಮ್ಮಾ, ನಮ್ಮ ಮೂಲ ಪಿತೃಗಳ ಮತ್ತು ಎಲ್ಲಾ ಭೂಲೌಕದವರ ಆಶಾರ್ಥವು ಯೇಸು ಕ್ರಿಸ್ತನಲ್ಲಿ ಒದಗಿತೆಂದೆನು. — ಬಳಿಕ ರಂಗನು ಕೆಲವು ಹೊತ್ತು ಚಿಂತೆಯಾಳಗಿದ್ದು, ಏನೂ ಮಾತಾಡದೆ, ಕಡೆಯಲ್ಲಿ, ಪರೆಯು ಕಣ್ಣಿನಿಂದ ಉಚ್ಚಿ ಬಿದ್ದ ಕುರುಡನು ತಿರಿಗಿ ನೋಡುವಂತೆ, ಹೀಗೆ ನುಡಿದನು — ನೀವು ತಿಳಿಸಿ

ದ್ದೆಲ್ಲಾ, ಅಣ್ಣಾ, ಬಹಳ ಲೇಸುವಾಗಿದೆ, ಬಹಳ ಲೇಸು; ಪಾಪಾತ್ಪ್ರಾ
ಶ್ಚಿಯನ್ನು ಕುರಿತು ನೀವು ದೇವರ ವಾಕ್ಯದ ಮೇಲೆ ವಿವರಿಸಿದ್ದೇ ಸತ್ಯ!
ಆ ಪ್ರಕಾರ ಅನುಭವಿಸಿ ಕಾಂಡರೆ, ದೇವರ ಜಯವೂ ವಿನಯವುಳ್ಳ ಸೇ
ವೆಯೂ ಹೃದಯ ಗೃಹ ಗ್ರಾಮ ನಗರಗಳಲ್ಲಿ ಪ್ರಬಲವಾಗುವದು;
ಈ ವಿಷಯವಾಗಿ ಇನ್ನಾರೂ ನನಗೇನೂ ಹೇಳ ಬೇಡ! ಸತ್ಯಮ್ ವಿವ
ಜಯತೇ (ಅಂದರೆ ಸತ್ಯವೇ ಜಯಿಸುತ್ತದೆ)! ಅದಲ್ಲದೆ, ಸುಚಿತ್ತಿಯೇ,
ಆದಾಮನು ಮೊದಲ್ಗೊಂಡ ಮನುಷ್ಯರೆಲ್ಲರು ತಮಗಿದ್ದ ಸ್ವತಂತ್ರದ
ದುಷ್ಪ್ರಯೋಗದಿಂದ ಅವಿಧೇಯರಾಗಿ ನಿತ್ಯ ಜೀವವನ್ನು ಕಳೆದು ಬಿಟ್ಟ
ಮೇಲೆ ದೇವರ ಬಳೀಲಿ ಹಾಸ ಸ್ವತಂತ್ರ ಬೇಡಿ ಕಾಂಡು ಇದರ ಸುಪ್ರ
ಯೋಗದಿಂದ ದೇವರು ಯೇಸು ಕ್ರಿಸ್ತನಲ್ಲಿ ಪ್ರಕಟಿಸಿದ ರಕ್ಷಣಾಜ್ಞೆಗೆ ವಿ
ಧೇಯರಾಗಿ ಕಳೆದದ್ದನ್ನು ತಿರಿಗಿ ಸಂಪಾದಿಸಿ ಕಾಳ್ಳ ಬೇಕೆಂಬದು ನನಗೆ ಆ
ಗತ್ಯವಾಗಿಯೇ ತಾಗಿಚುತ್ತದೆ. —ಆಗ ಸುಚಿತ್ತಿಯು ಸಂತೋಷ ಪಟ್ಟು,
ತಥಾಸ್ತು! ಎಂದು, ಅವನ ಸಂಗಡ ಮೊಗಾಲೂರಿ, ತ್ರಾಣದಾಯಕ
ನಾದ ದೇವರಿಗೆ ಪ್ರಾರ್ಥಿಸಿದನು.

ಓದುವ ಗೃಹಸ್ಥಾತ್ತಮರೇ, ರಂಗನು ಆ ಮೇಲೆ ದೇವರ ಸಭೆಯ
ಲ್ಲಿ ಶೇರಿ, ತಾನು ದಾರಿ ನಾಗಿದ್ದನ್ನು ಸುಚಿತ್ತಿಯಂತೆ ಕಂಡು ಕಾಂಡನು.
ನೀವು ಸಹ ವೃಥ್ಥವೂ ಸುಳ್ಳೂ ಆಗಿರುವ ಹಿಂದು ವೇದ ಶಾಸ್ತ್ರಗಳ ಬಂಧ
ಗಳಿಂದ, ದೇವರ ವಾಕ್ಯದ ಮುಖಾಂತ್ರವಾಗಿ, ಬಿಡಿಸಿ ಕಾಳ್ಳಿರಿ! ಪಿಶಾಚನು
ಸುಳ್ಳಿನ ತಂದೆಯಾಗಿದ್ದಾನೆಂತ ತಿಳುಕಾಂಡು, ಸುಳ್ಳಿಗೆ ಜಯ ಪಡುವವ
ರಾಗಿರಿ! ನಾವು ವಿವರಿಸಿದ್ದರ ಮೇಲೆ ಪಾಪಾತ್ಪ್ರಾಶ್ಚಿ ಇತ್ಯಾದಿಗಳ ವಿಷ
ಯವಾದ ಹಿಂದು ವೇದಶಾಸ್ತ್ರಬೋಧನೆಯು ಸುಳ್ಳೆಂತ ತಿಳುಕಾಂಡವ
ರು ನಿಮ್ಮಲ್ಲಿದ್ದರೆ ಅಂಥವರು ಇನ್ನೆಂದಿಗೂ ದೇವರ ಜಯವಿಲ್ಲದಂಥವ
ರ ಮಾತಿಗೆ ತಿರಿಗಿ ಒಳಗಾಗದೆ, ದೇವರ ಸದ್ವಾಕ್ಯವಿರುವ ಸಭೆಗೆ ಬರಲಿ!
ಅದಕ್ಕಾಗಿ ಹಿತೋಪದೇಶದ ಮಿತ್ರ-ಲಾಭದಲ್ಲಿ ಹೇಳಿರುವದೇನಂದರೆ —

ವರಂ ಪ್ರಾಣ-ತ್ಯಾಗೋ ನ ಪುನರ್ ಅಧಮಾನಾಮ್ ಉಪಗಮಃ।

ಟೀಕು॥ ತಿರಿಗಿ ಅಧಮರ ಹಿಂಬಾಲ ಮಾಡಿ ಕೊಳ್ಳುವದಕ್ಕಿಂತ ಪ್ರಾಣತ್ಯಾ
ಗವು ಉತ್ತಮವಾಗಿದೆ. —

ನೀವು ಜೀವವುಳ್ಳ ನಿಜವಾದ ದೇವರಿಗೆ ಸೇವೆ ಮಾಡಲಿಕ್ಕೂ — ಅ ವನು ಸತ್ತವರಾಳಗಿಂದ ಎಬ್ಬಿಸಿದಂಥ, ಬರುವ ಕಾಪಕ್ಕೆ ನಿಮ್ಮನ್ನೂ ನಮ್ಮ ನ್ನೂ ರಕ್ಷಿಸುವಂಥ ಯೇಸುವೆಂಬ ದೇವಪುತ್ರನು ಪರಲೋಕದಿಂದ ಬ ರುವದಕ್ಕೆ ಎದುನಾರ್ಪಡಲಿಕ್ಕೂ — ಮಿನೂ ಅಲ್ಲದ ವಿಗ್ರಹಗಳನ್ನೂ ಕಲ್ಪ ನಾದೇವರನ್ನೂ (ಕಾರಿಂಥರ ೧ನೇ ಪತ್ರಿಕೆ ೮, ೪; ಯೆಶಾಯನ ಪು ಸ್ತಕ ೪೪, ೫ — ೬) ಬಿಟ್ಟು, ದೇವರ ಬಳಿಗೆ ತಿರುಗಿ ಕಾಳ್ಳಿರಿ (ಥೆಸ್ಸಲೋನೀ ಕಿಯರ ೧ನೇ ಪತ್ರಿಕೆ ೧, ೧೦)! ಯೇಸು ಕ್ರಿಸ್ತನು (ಯೋಹಾನನ ಸುವಾ ರ್ತೆಯ ೧೮ನೇ ಸಂಧಿಯ ೩೭ನೇ ಶ್ಲೋಕದಲ್ಲಿ) ತನ್ನನ್ನೂ ತನ್ನವರನ್ನೂ ಕುರಿತು ಹೇಳಿದ್ದೇನಂದರೆ —

ನಾನು ಸತ್ಯಕ್ಕೆ ಸಾಕ್ಷಿ ಕೊಡುವದಕ್ಕೋಸ್ಕರವೇ ಹುಟ್ಟಿ, ಅದಕ್ಕೋಸ್ಕರವೇ ಈ ಲೋಕಕ್ಕೆ ಬಂದೆನು; ಸ ತ್ಯದವರೆಲ್ಲರು ನನ್ನ ಶಬ್ದವನ್ನು ಕೇಳುತ್ತಾರೆ.

ಉಪಗ್ರಂಥವು

೧. ಎಲ್ಲಾ ಕ್ರಿಯೆಗಳು, ಅವು ಒಳ್ಳೆಯವುಗಳಾಗಿದ್ದರೂ, ಅವಿದ್ಯೆಯಾಗಿವೆಂಬ ಹಿಂದು ದುರ್ಬೋಧನೆಯು ಮೂಲಗ್ರಂಥದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಹ್ಯಾಗಂದರೆ, ಜನರ (ಮತ್ತು ಆ ಹಿಂದು ದೇವರ) ಎಲ್ಲಾ ಒಳ್ಳೇ ಮತ್ತು ಕೆಟ್ಟ ಗುಣಗಳು ಪ್ರಕೃತಿಯಿಂದ ಅಂದರೆ ಮಾಯೆಯಿಂದ ಅಂದರೆ ಮಿಥ್ಯೆಯಿಂದ ಅಂದರೆ ನಿದ್ರೆಯಿಂದ ಅಂದರೆ ಅಜ್ಞಾನದಿಂದ ಅಂದರೆ ಅವಿದ್ಯೆಯಿಂದ. ಹುಟ್ಟುತ್ತವೆಂತಲೂ, ಅಂಥಾದ್ದಾದ ಪ್ರಕೃತಿಯ ಗುಣಗಳಿಂದ ಜನರ (ಮತ್ತು ಆ ದೇವರ) ಎಲ್ಲಾ ಒಳ್ಳೇ ಮತ್ತು ಕೆಟ್ಟ ಕರ್ಮಗಳು ಹುಟ್ಟುತ್ತವೆಂತಲೂ, ಆಯಾ ಹಿಂದು ಗ್ರಂಥಗಳು ತಿರಿಗಿ ತಿರಿಗಿ ಹೇಳುತ್ತವೆ (ಮೂಲಗ್ರಂಥದ ೩ನೇ ೪ನೇ ೫ನೇ ೭ನೇ ೪೬ನೇ ೫೩ನೇ ೫೫ನೇ ಪಾನುಗಳು). ಹಿಂದು ಗ್ರಂಥಗಳು ವಿವರವಾಗಿ ಆ ಪ್ರಕೃತಿಗೆ ಹಾಕುವ ೨೪ ಗುಣಗಳನ್ನು ಅಂದರೆ ೨೪ ತತ್ವಗಳನ್ನು ನೀವು ತಿಳುಕೊಳ್ಳುವ ಹಾಗೆ ಅನ್ನಂ-ಚಿಟ್ಟನು ರಚಿಸಿದ ತರ್ಕ-ಸಂಗ್ರಹದ ೪ನೇ ವಚನವನ್ನು ಕೇಳಿರಿ, ೩ನಂದರೆ — ರೂಪ-ರಸ-ಗಂಧ-ಸ್ಪರ್ಶ-ಸಂಖ್ಯಾ-ಪರಿಮಾಣ-ಪೃಥಕ್ತ್ವ-ಸಂಯೋಗ-ವಿಭಾಗ-ಪರತ್ವ-ಅಪರತ್ವ-ಗುರುತ್ವ-ದ್ರವತ್ವ-ಸ್ನೇಹ-ಶಬ್ದ-ಬುದ್ಧಿ-ಸುಖ-ದುಃಖ-ಇಚ್ಛಾ-ದ್ವೇಷ-ಪ್ರಯತ್ನ-ಧರ್ಮ-ಅಧರ್ಮ-ಸಂಸ್ಕಾರಾಶ್ (ಅಂದರೆ ಸಂಸ್ಕಾರಗಳು, ಸಂಸ್ಕಾರವೆಂಬದು ೨೪ನೇದು) ಚತುರ್-ವಿಂಶತಿರ್ ಗುಣಾಃ (ಅಂದರೆ ೨೪ ಗುಣಗಳಾಗಿವೆ) ॥೪॥ ನೋಡಿರಿ, ೫ವು ಹಿಂದು ಬೋಧನಾರ್ಥವಾಗಿರುವ ಮಾಯೆಯ ೩ ಮೂಲಗುಣಗಳಿಂದ ಬರುವ ಗುಣಗಳು ಅಥವಾ ತತ್ವಗಳು. ೫ವುಗಳ ವಿಚಾರವು ಮಹಾಚಾರತದ ಶಾಂತಿ-ಪರ್ವದಲ್ಲಿ ಬೇಸರಕ್ಕಾಗಿ ಎಡೆ ಬಿಡದೆ ಬರುತ್ತದೆ. ಅವುಗಳಲ್ಲಿ ಒಂದೊಂದರ ಅರ್ಥವು ನಿಮಗೆ ಪೂರಾಗಿ ತಿಳಿಯದಿದ್ದರೂ ಚಿಂತೆಯಿಲ್ಲ; ಮುಖ್ಯವಾದವುಗಳು, ಅಂದರೆ ಸ್ನೇಹ, ಬುದ್ಧಿ, ಸುಖ, ದುಃಖ, ೫ಚ್ಛೆ, ದ್ವೇಷ. ಪ್ರಯತ್ನ, ಧರ್ಮ ಎಂಬವುಗಳು, ನಿಮಗೆ ಗೊತ್ತವೆ. ೫ವೆಲ್ಲಾ, ಅವು ಪುಣ್ಯದ

ಲ್ಲಿ ಪ್ರವರ್ತಿಸುತ್ತಿದ್ದರೂ, ನೀಚ ಮಾಯೆಯ ನೀಚ ಗುಣಗಳೆಂತ, ಹಿಂದು ಶಾಸ್ತ್ರಾದಿಗಳ ಬೋಧನೆಯಾಗಿದೆ. ಆ ೨೪ ಗುಣಗಳು, ಕೆಟ್ಟವುಗಳಾಗಲಿ ಒಳ್ಳೇವುಗಳಾಗಲಿ, ಎಲ್ಲವೂ ಅವುಗಳಿಂದ ಬರುವ ಪುಣ್ಯ ಪಾಪಗಳೆಂಬ ಕ್ರಿಯೆಗಳೆರಡೂ ದೋಷವೆಂತಲೂ (ಮೂ. ಗ್ರ. ೬ನೇ ಪಾನು), ಎಲ್ಲಾ ಜನರನ್ನು ಮೋಹ ಪಡಿಸುತ್ತಾ ಜ್ಞಾನಕ್ಕೆ ವಿರೋಧ ಮಾಡುತ್ತಾ ಇರುವಂಥವುಗಳೆಂತಲೂ (ಮೂ. ಗ್ರ. ೮ನೇ ೧೮ನೇ ೪೦ನೇ ೫೩ನೇ ಪಾನು), ಬರೇ ಕನಸಿನ ನೋಟವೆಂತಲೂ (ಮೂ. ಗ್ರ. ೯ನೇ ೫೭ನೇ ಪಾನು), ಅಜ್ಞಾನವೂ ಅಜ್ಞಾನಸಾಗರವೂ ಎಂತಲೂ (ಮೂ. ಗ್ರ. ೨೦ನೇ ೫೦ನೇ ಪಾನು), ಬರೇ ಇಂದ್ರಜಾಲವೆಂತಲೂ (ಮೂ. ಗ್ರ. ೯ನೇ ೧೯ನೇ ಪಾನು), ಬರೇ ಲೀಲೆಯೆಂತಲೂ (ಮೂ. ಗ್ರ. ೨೮ನೇ ೩೨ನೇ ೫೭ನೇ ೬೧ನೇ ೬೨ನೇ ಪಾನು), ಹಿಂದು ವೇದ ಶಾಸ್ತ್ರಗಳು ಲಜ್ಜೆಯಿಲ್ಲದೆ ಪ್ರಸಂಗಿಸುತ್ತವೆ. ಅದಲ್ಲದೆ ಅವುಗಳು ಆ ಮೂಲದುರ್ಬೋಧನೆಗನುಸಾರವಾಗಿ ಪ್ರಸಂಗಿಸುವದೇನಂದರೆ — ಜನರೇ, ನೀವು ಜ್ಞಾನಯೋಗವನ್ನು, ಅಂದರೆ ದೇವರದ್ದಾದ ಅಥವಾ ದೇವರಾದ ನೀಚ ಪ್ರಕೃತಿಯ ವಿಷಯವಾದ ವಿವೇಕವನ್ನು, ಹಿಡುಕೊಂಡು, ಕೆಟ್ಟ ಕ್ರಿಯೆಗಳನ್ನಲ್ಲದೆ ಒಳ್ಳೇ ಕ್ರಿಯೆಗಳನ್ನು ಸಹ ತೃಜಿಸಿ ಬಿಡ ಬೇಕು! (ಮೂ. ಗ್ರ. ೫೩ನೇ ೫೪ನೇ ೫೫ನೇ ೫೭ನೇ ೫೮ನೇ ೫೯ನೇ ೬೦ನೇ ಪಾನು; ಅದಲ್ಲದೆ ಶುಕ್ಲ-ಯಜುರ್-ವೇದದ ಜಾಬಾಲ-ಉಪನಿಷತ್ತಿನ ಅಂತ್ಯವನ್ನೂ ಭಗವದ್ಗೀತೆಯ ೨ನೇ ಅಧ್ಯಾಯದ ೫೦ನೇ ಶ್ಲೋಕವನ್ನೂ ಪಾತಂಜಲ-ಯೋಗ-ಶಾಸ್ತ್ರದ ೧೫ನೇ ಸೂತ್ರವನ್ನೂ ಶಾಂತಿ-ಪರ್ವದ ೬೨೫ನೇ ೯೯೨ನೇ ೧೨೪೬ನೇ ೧೩೦೧ನೇ ೧೩೭೭ನೇ ೧೩೭೭ನೇ ಶ್ಲೋಕಗಳನ್ನೂ ನೋಡಿರಿ.) ಶಾಂತಿ-ಪರ್ವದ ೧೨೪೬ನೇ ಶ್ಲೋಕವನ್ನು ದೃಷ್ಟಾಂತವಾಗಿ ಥಾಪಿಸುವ, ವಿನಂದರೆ —

ತೃಜ ಧರ್ಮಮ್ ಅಧರ್ಮಂ ಚ ತಥಾ ಸತ್ಯಾ೭ನೃತೇ ತೃಜ।
ಉಭೇ ಸತ್ಯಾ೭ನೃತೇ ತೃಕ್ತ್ವಾ ಯೇನ ತೃಜಿಸಿ ತಂ ತೃಜ॥

ಟೀಕು॥ ಧರ್ಮವನ್ನೂ ಅಧರ್ಮವನ್ನೂ ಸತ್ಯವನ್ನೂ ಸುಳ್ಳನ್ನೂ ತೃಜಿಸು; ಸತ್ಯ ಸುಳ್ಳುಗಳಿವೆರಡನ್ನು ತೃಜಿಸಿ, ಯಾತರಿಂದ ಅವನ್ನು ತೃಜಿಸುತ್ತಿ

ಯೋ ಅದನ್ನು (ಅಂದರೆ ಮಾಯೆಯ ಗುಣವಾದ ಬುದ್ಧಿಯನ್ನು) ತೃಜಿಸು! — ಕೇಳಿದಿರೋ? ಈ ಪ್ರಕಾರವಾಗಿ ಹಿಂದು ಗ್ರಂಥಗಳು ಕರ್ಮಗಳನ್ನು ಕುರಿತು ಹುಚ್ಚುತನವನ್ನೂ ನರಕಜ್ಞಾನವನ್ನೂ ಬೋಧಿಸುತ್ತವೆ, ಅಯ್ಯಯ್ಯೋ! —

೨. ಲಿಂಗವು ಮತ್ತು ಶಿಶ್ನವು ಒಂದೇ ಆಗಿರುವದರಿಂದ ನಾವು ಬಲ್ಲವರಿಗೆ — ಋಗ್ವೇದದ ೭ನೇ ಮಂಡಲದ ೨೧ನೇ ಸೂಕ್ತದ ೫ನೇ ಶ್ಲೋಕವನ್ನೂ ಋಗ್ವೇದದ ೧೦ನೇ ಮಂಡಲದ ೯೯ನೇ ಸೂಕ್ತದ ೩ನೇ ಶ್ಲೋಕವನ್ನೂ ಓದಿರೆಂತ, ಹೇಳುತ್ತೇವೆ. ಆ ಶ್ಲೋಕಗಳಲ್ಲಿರುವದೇನಂದರೆ — ಶಿಶ್ನದೇವರ ನೀಚ ಭಕ್ತರು ಯಜ್ಞಾಧಿಗೆ ಬರ ಬಾರದು, ಇಂದ್ರನು ಶಿಶ್ನದೇವರ ಭಕ್ತರನ್ನು ಸಂಹಾರ ಮಾಡುತ್ತಾನೆ. — ಆದರೂ ಹಿಂದು ಪರಮಾತ್ಮನು ಯಾವಾಗಲೂ ಶಿಶ್ನದವನಾಗಿ ಪರ್ಸ್‌ಸಲ್ಪಟ್ಟಿದ್ದಾನೆ; ಇದು ಬಹಳ ನೀಚ ವಿಚಾರವಾಗಿದ್ದರೂ, ಹಿಂದು ಜನರು ತಮ್ಮ ವೇದ ಶಾಸ್ತ್ರಗಳಿಗಾಗಿ ನಾಚಿಕೆ ಪಡಲಾರಂಭಿಸುವ ಹಾಗೆ ಸ್ವಲ್ಪ ಹೇಳದೆ ಇರ ಕೂಡದು. ಹ್ಯಾಗಂದರೆ ಆ ಪರಮಾತ್ಮನ ಮೊದಲಿನ ಶಕ್ತಿಯು ಒಬ್ಬ ಸ್ತ್ರೀಯೇ (ಬೃಹದಾರಣ್ಯಕೋಪನಿಷತ್ತಿನ ೧ನೇ ಅಧ್ಯಾಯದ ೪ನೇ ಬ್ರಾಹ್ಮಣದ ೧೩ನೇ ಕಂಡಿಕೆ); ಹೋರಿಯು ಆಕಳುಗಳೊಂದಿಗೆ ಮಾಡುವಂತೆ ಅವನು ಸೃಷ್ಟಿಯಲ್ಲಿ ಮಾಡುತ್ತಾನೆ (ಋಗ್ವೇದದ ೭ನೇ ಮಂಡಲದ ೧೦೧ನೇ ಸೂಕ್ತ); ಬಹಳ ನಗೆಗಾಗಿ ಅವನ ಬೀಜವು ಬಿದ್ದು ಹೋಗುತ್ತದೆ (ಕೃಷ್ಣ ಯಜುರ್ವೇದದ ತೈತ್ತಿರೀಯ ಆರಣ್ಯಕದ ೫ನೇ ಅಧ್ಯಾಯದ ೧ನೇ ಅನುವಾಕ); ಅವನು ತನ್ನ ಸ್ವಂತ ಮಗಳಿಗೆ ಕೂಡುತ್ತಾನೆ (ಋಗ್ವೇದದ ೧೦ನೇ ಮಂಡಲದ ೬೧ನೇ ಸೂಕ್ತ); ಅವನು ತನಗೆ ಒಬ್ಬ ಸ್ತ್ರೀಯನ್ನುಂಟು ಮಾಡಿ ಕೊಂಡು ಅವಳೊಂದಿಗೆ ಮನುಷ್ಯರನ್ನು ಹುಟ್ಟಿಸಿದ ಮೇಲೆ ಆ ಸ್ತ್ರೀಯು ಒಂದು ಆಕಳಾಗಿ ಆ ಪರಮಾತ್ಮನು ಒಂದು ಹೋರಿಯಾಗುತ್ತಾನೆ, ಆಗ ಅವರಿಬ್ಬರ ಸಂಗದಿಂದ ಪಶುಜಾತಿಯು ಹುಟ್ಟಿತು; ಬಳಿಕ ಅವಳು ಒಂದು ಹೆಣ್ಣು ಕುದುರೆಯಾಗಿ ಅವನು ಒಂದು ಗಂಡು ಕುದುರೆಯಾಗುತ್ತಾನೆ, ಆಗ ಅವರ ಸಂಗದಿಂದ ಕುದುರೆಜಾತಿಯು ಹುಟ್ಟಿತು; ಬಳಿಕ ಅವಳು ಒಂದು ಹೆಣ್ಣು ಕತ್ತೆಯಾಗಿ ಅವನು ಒಂದು ಗಂಡು ಕತ್ತೆ

ಯಾಗುತ್ತಾನೆ, ಆಗ ಅವರ ಸಂಗದಿಂದ ಕತ್ತೆಜಾತಿಯು ಹುಟ್ಟಿತು; ಈ ಪ್ರಕಾರವಾಗಿಯೇ ಅವರಿಬ್ಬರು ಎಲ್ಲಾ ಜೀವಿಗಳನ್ನು ಇರಿವೆಗಳ ಪರಿಯಂತರಕ್ಕೂ ಹುಟ್ಟಿಸಿದರು (ಬೃಹದಾರಣ್ಯಕೋಪನಿಷತ್ತಿನ ೧ನೇ ಅಧ್ಯಾಯದ ೩ನೇ ಬ್ರಾಹ್ಮಣದ ೩ನೇ ಳನೇ ಕಂಡಿಕೆ); ಆ ಪರಮಾತ್ಮನ ಯೋನಿಯು ವಿಷ್ಣುವೇ (ಋಗ್ವೇದದ ೧ಂನೇ ಮಂಡಲದ ೧೬ಳನೇ ಸೂಕ್ತ); ಅವನು ಅಧ-ಉಪಾಸನವನ್ನು ಅಂದರೆ ನೀಚ ಆಚಾರದ ಮೇಲೆ ಸ್ತ್ರೀಸಂಗವನ್ನು ಮಾಡುತ್ತಾನೆ (ಬೃಹದಾರಣ್ಯಕೋಪನಿಷತ್ತಿನ ೬ನೇ ಅಧ್ಯಾಯದ ೪ನೇ ಬ್ರಾಹ್ಮಣದ ೨ನೇ ಕಂಡಿಕೆ; ಇದು ಹೇಳಲಾರದಷ್ಟು ನೀಚ ಜಾತಿಯ ಬ್ರಾಹ್ಮಣವಾಗಿದೆ). ಅಂಥಾ ಶಿಶ್ನದೇವರನ್ನು ಬಿಟ್ಟಿರಿ, ಪೂನಪ್ರಿಯ ಗೃಹಸ್ಥರೇ! —

೩. ಬ್ರಹ್ಮನೂ ವಿಷ್ಣುವೂ ಶಿವನೂ ಹಲವು ಹಿಂದು ಶಾಸ್ತ್ರಗಳ ಮೇಲೆ ಮಾಯೆಯೆನ್ನಿಸುತ್ತವೆ, ಆದರೂ ಅವರು ಹಿಂದು ಬೋಧನೆಯ ಪರಮಾತ್ಮನೇ ಅಥವಾ ಇವನು ತಕ್ಕೊಂಡ ಮಾಯೆಯ ರೂಪಗಳೇ (ಮೂಲಗ್ರಂಥದ ೨೩ನೇ ೩ನೇ ೩೫ನೇ ೩೬ನೇ ೪೧ನೇ ಪಾನು); ಆದ್ದರಿಂದ ಆ ಶ್ರಿಮೂರ್ತಿ ಮುಂತಾದ ದೇವತೆಗಳ ವಿಷಯವಾಗಿ ಹೇಳಿರುವ ದುಷ್ಕೃತ್ಯೆಗಳೆಲ್ಲಾ ಆ ಪರಮಾತ್ಮನಿಗೆಯೇ ಹೋಗುತ್ತವೆ; ಅದು ಎಷ್ಟೋ ಹೊಲಸಾದ ಕಲ್ಪನೆಯ ಪರಮಾತ್ಮನು! — ಒಟ್ಟಿಗೆ ಹಿಂದು ನೀಚ ದೇವರುಗಳೆಲ್ಲರ ವಿಷಯವಾಗಿ ಹೇಳಿರುವದೇನಂದರೆ — ಕಾಮೋ ದೇವಾನಾಮ್ ಈಶ್ವರಃ॥ ಅಂದರೆ ಕಾಮವು ದೇವರುಗಳ ಈಶ್ವರನಾಗಿದ್ದಾನೆ (ಋಗ್ವೇದದ ಕೌಷೀತಕಿ-ಬ್ರಾಹ್ಮಣದ ೧೯ನೇ ಅಧ್ಯಾಯದ ೨ನೇ ಕಂಡಿಕೆ); ಮತ್ತು-ಸೋಮೇನಾಽದಿತ್ಯಾ ಬಲಿನಃ॥ ಅಂದರೆ ಸೋಮಸಾರಾಯದಿಂದ ದೇವರುಗಳು (ಆದಿತ್ಯಾ ದೇವಾ ಇತಿ ಸಾಯಣಃ) ಬಲಿಷ್ಠರಾಗುತ್ತಾರೆ (ಋಗ್ವೇದದ ೧ಂನೇ ಮಂಡಲದ ೪೩ನೇ ಸೂಕ್ತದ ೨ನೇ ಶ್ಲೋಕ). —

೪. ಇಂದ್ರನ ನೀಚವಿಷಯವು—ಇಂದ್ರನು ಸೋಮಸಾರಾಯದ ಮಗನು (ಋ. ೯, ೯೬, ೫*), ಸೋಮಸಾರಾಯ ಕುಡಿಯುವದಕ್ಕೆ ಹುಟ್ಟಿ

* ಋ. ಅಂದರೆ ಋಗ್ವೇದ, ಈ ಅಂಕೆಗಳ ಅರ್ಥವನ್ನು ಮುಂಚೆನಂತೆ ತಿಳುಕೊಳ್ಳ ಬೇಕು.

ಧನು (ಋ. ೧, ೫೫, ೬), ಒಂದು ಹೋರಿಯ ಹಾಗೆ ಅದನ್ನು ಕುಡಿಯುತ್ತಾನೆ (ಋ. ೧, ೩೨, ೩), ಒಂದೇ ಹೊತ್ತಿಗೆ ೩೦ ಕೆರೆ ತುಂಬ ಸೋಮಸಾರಾಯ ಕುಡಿದನು (ಋ. ೮, ೬೬, ೪), ತನಗೆ ೧೦೦ ಕೋಣಗಳನ್ನು ಅಡಿಗೆ ಮಾಡಿಸಿ ಕೊಂಡು ಅವುಗಳನ್ನು ಉಣ್ಣುವಾಗ ೩ ಕೆರೆ ತುಂಬ ಸೋಮಸಾರಾಯ ಕುಡಿದನು (ಋ. ೬, ೧೭, ೧೧), ತನ್ನ ಶತ್ರುಗಳ ಸಂಗಡದ ಲಡಾಯಿಯಲ್ಲಿ ಸೋಮಸಾರಾಯ ಕುಡಿದು, ಬಲಿಷ್ಠನಾಗುವನು (ಋ. ೧೦, ೧೧೩, ೧); ತಪಸು ಮಾಡಿ ಸ್ವರ್ಗ ಪಡಕೊಂಡನು (ಋ. ೧೦, ೧೬೭, ೧); ಅಸುರರ ಒಬ್ಬ ಸ್ತ್ರೀಯ ಸಂಗಡ ಕಾಮವಿಕಾರ ಮಾಡಿದನು (ಋ. ಕೌಷೀತಕಿ-ಬ್ರಾಹ್ಮಣದ ೨೩ನೇ ಅಧ್ಯಾಯದ ೪ನೇ ಕಂಡಿಕೆ); ಗೌತಮ ಋಷಿಯ ಹೆಂಡತಿಯಾದ ಅಹಲ್ಯೆಯನ್ನು ಕೆಡಿಸಿ, ಶಾಪಕ್ಕೊಳಗಾಗಿ ರಾವಣನ ಮಗನಾದ ಇಂದ್ರಜಿತನ ಕೈಯಿಂದ ಅಪಜಯ ಪಟ್ಟನು (ರಾಮಾಯಣದ ಯುದ್ಧ-ಕಾಂಡದ ೩೪ನೇ ೩೫ನೇ ಸರ್ಗ); ನಮುಚಿಯ ತಲೆಯನ್ನು ಕಪಟಸ್ಥನಾಗಿ ಕಡಿದು, ಅರುಣಾನದಿಯಲ್ಲಿ ಸ್ನಾನ ಮಾಡಿ ತನ್ನ ಪಾಪ ಕಳೆಯ ಬೇಕು (ಮಹಾಭಾ. ಶಲ್ಯ-ಪರ್ವದ ೨೪೩ನೇ ಆದಿ ಶ್ಲೋಕಗಳು). — ಬ್ರಹ್ಮನ ಅಂದರೆ ಪ್ರಜಾಪತಿಯ ನೀಚ ವಿಷಯವು — ಇವನು ತನ್ನೊಬ್ಬನಿಗಾಗಿಯೇ ಸೋಮಸಾರಾಯ ಉಂಟು ಮಾಡಿ ಕೊಂಡನು (ಅಥರ್ವ-ವೇದದ ೧೦ನೇ ಕಾಂಡದ ೭ನೇ ಸೂಕ್ತ); ತನ್ನ ಸ್ವಂತ ಮಗಳ ಸಂಗ ಮಾಡಿದ ಅವನಿಗೆ ದೇವರುಗಳು ಕೋಪ ಪಟ್ಟು, ಅವನನ್ನು ಕೊಲ್ಲಿರಿ ಎಂತ ಕೂಗುವಾಗ ಅವನ ಮಗನಾದ ರುದ್ರನು ಚಲ್ಲೆ ಹಿಡಿದು, ಅವನ ಎದೆ ಶಿವಿದು ಬಿಟ್ಟನು (ಶತಪಥಬ್ರಾಹ್ಮಣದ ೧ನೇ ಕಾಂಡದ ೭ನೇ ಅಧ್ಯಾಯದ ೪ನೇ ಬ್ರಾಹ್ಮಣದ ೧ ಆದಿ ಕಂಡಿಕೆಗಳು); ಅವನು ತಾನು ಬ್ರಹ್ಮವೂ ಶಿವನ ತಂದೆಯೂ ಎಂತ ಹೇಳುವಾಗ ಶಿವನು ಹೊಟ್ಟೆಚ್ಚಿನಿಂದ ಅವನ ತಲೆ ಕಡಿದು ಬಿಟ್ಟನು (ಸ್ಕಂದ-ಪುರಾಣದ ೩೧ನೇ ಅಧ್ಯಾಯ); ಅವನು ವಿಷ್ಣುವಿನ ಸಂಗಡ ಅಧಿಕಾರಕ್ಕೋಸ್ಕರ ದೊಡ್ಡ ಜಗಳಾಡಿದನು (ಲಿಂಗಪುರಾಣದ ೧೭ನೇ ಅಧ್ಯಾಯ); ವಿಷ್ಣುವೂ ಶಿವನೂ ಜಗಳಾಡುವ ಹಾಗೆ ಅವರೊಳಗೆ ಹಗೆ ಹುಟ್ಟಿಸಿದನು (ರಾಮಾಯಣದ ೧೧ನೇ ಕಾಂಡದ ೭೫ನೇ ಸರ್ಗ). —

೫. ಬ್ರಹ್ಮದ ನೀಚ ವಿಷಯವು—ನಾಲ್ಕು ವೇದಗಳ ಉಪನಿಷತ್ತುಗಳೆಲ್ಲಾ, ಬ್ರಹ್ಮವನ್ನು ತಿಳುಕಾಂಡರಾಯಿತೆಂತ, ಎಡೆ ಬಿಡದೆ ಪ್ರಸಂಗಿಸುತ್ತವೆ; ಆ ಬ್ರಹ್ಮವು ನೀರುಗಳ ಮೊಮ್ಮಗನು, ಹ್ಯಾಗಂದರೆ—ಆಪ ಏವೇzದಮ್ ಅಗ್ರ ಆಸುಸ್ ತಾ ಆಪಃ ಸತ್ಯಮ್ ಅಸೃಜನ್ತ ಸತ್ಯಂ ಬ್ರಹ್ಮ ಬ್ರಹ್ಮ ಪ್ರಜಾಪತಿಂ ಪ್ರಜಾಪತಿರ್ ದೇವಾಂಸ್***ತ್ರ್ಯಕ್ಷರಂ ಸತ್ಯಮ್ ಇತಿ ಸ ಇತ್ಯೈ ಏಕಮ್ ಅಕ್ಷರಂ ತೀzತ್ಯೈ ಏಕಮ್ ಅಕ್ಷರಂ ಯಮ್ ಇತ್ಯೈ ಏಕಮ್ ಅಕ್ಷರಂ ಪ್ರಥಮೋzತ್ತಮೇ ಅಕ್ಷರೇ ಸತ್ಯಂ ಮಥುತಾzನೃತಂ ತದ್ ಏತದ್ ಅನೃತಮ್ ಉಭಯತಃ ಸತ್ಯೇನ ಪರಿಗೃಹೀತಂ ಸತ್ಯ-ಋಯಮ್ ಏವ ಚವತಿ ನೈzನಂ ವಿದ್ವಾಂಸಮ್ ಅನೃತಂ ಹಿನಸ್ತಿ॥೧॥ ಅಂದರೆ ನೀರುಗಳೇ ಆರಂಭದಲ್ಲಿ ಇದೆಲ್ಲವು (ಈ ವಿಶ್ವವೆಲ್ಲವು) ಆಗಿದ್ದವು, ಆ ನೀರುಗಳು ಸತ್ಯಂ ಸೃಷ್ಟಿಸಿದವು, ಸತ್ಯಂ ಬ್ರಹ್ಮವನ್ನು (ಸೃಷ್ಟಿಸಿತು), ಬ್ರಹ್ಮವು ಪ್ರಜಾಪತಿಯನ್ನು (ಸೃಷ್ಟಿಸಿತು), ಪ್ರಜಾಪತಿಯು ದೇವರುಗಳನ್ನು (ಸೃಷ್ಟಿಸಿದನು); ಸತ್ಯಂ ಎಂಬುದು ತ್ರಿ ಅಕ್ಷರದ್ದು; ಗನೇ ಅಕ್ಷರ ಸ ಎಂಬುದು, ಏನೇ ಅಕ್ಷರ ತಿ ಎಂಬುದು, ತ್ರಿನೇ ಅಕ್ಷರ ಯಂ ಎಂಬುದು; ಗನೇ ಮತ್ತು ತ್ರಿನೇ (ಸ-ಯಂ)ಅಕ್ಷರಗಳು ಸತ್ಯವಾಗಿವೆ, ನಡುವೆಯದು (ತಿ) ಸುಳ್ಳಾಗಿದೆ (ಹಾಗಾದರೆ ಬ್ರಹ್ಮದಲ್ಲಿ ಸುಳ್ಳು ಸಹ ಉಂಟು); ಸುಳ್ಳಿನ ಎರಡು ಕಡೆಯಲ್ಲಿ ಸತ್ಯವದೆ, ಸತ್ಯವು (ಬ್ರಹ್ಮದಲ್ಲಿ ಸುಳ್ಳಿಗಿಂತ ಒಂದು ಪಾಲು) ಹೆಚ್ಚಾಗಿದೆ; ಹೀಗೆ (ಅಂದರೆ ಬ್ರಹ್ಮದಲ್ಲಿ ೧ ಪಾಲು ಮಾತ್ರ ಸುಳ್ಳುಂಟೆಂತ) ತಿಳುಕೊಂಡವನನ್ನು (ತಾನು ನಡಿಸಿದ ಮತ್ತು ನುಡಿದ) ಸುಳ್ಳು ಕೊಲ್ಲುವದಿಲ್ಲ (ಸುಳ್ಳು ಬ್ರಹ್ಮದಲ್ಲಿಯೂ ತನ್ನಲ್ಲಿಯೂ ಸತ್ಯಕ್ಕಿಂತ ಒಂದು ಪಾಲು ಹೆಚ್ಚು ಎಂಬ ನೀಚ ಕಾರಣದಿಂದ). —ನೋಡಿರಿ, ಗೃಹಸ್ಥರೇ, ಇದು ನಿಮ್ಮ ಅಬದ್ಧ ಬ್ರಹ್ಮಜ್ಞಾನವೇ! —

೬. ರುದ್ರನ ಅಥವಾ ಶಿವನ ನೀಚ ವಿಷಯವು—ಅವನು ಸೋಮಸಾರಾಯದ ಮಗನು (ಋಗ್ವೇದದ ೪ನೇ ಮಂ. ೪೬ನೇ ಸೂ. ೫ನೇ ಶ್ಲೋಕ); ಸೋಮಸಾರಾಯದ ಒಡೆಯನಾಗಿದ್ದಾನೆ (ಶುಕ್ಲಯಜುರ್ವೇದದ ಶತರುದ್ರಿಯದ ೪೬ನೇ ಶ್ಲೋಕ); ಮಾಂಸ ರಕ್ತ ಮಜ್ಜ ತಿನ್ನುತ್ತಾನೆ (ಮ. ಭಾ. ಅನುಶಾಸನಪರ್ವದ ೭೫೬೬ನೇ ಶ್ಲೋಕ); ಪಂಚಕನೂ ಮೋಸ

ಗಾರನೂ ಕಳ್ಳರ ಮತ್ತು ಕೊಳ್ಳೆಗಾರರ ಒಡೆಯನೂ ಆಗಿದ್ದಾನೆ (ಶತರುದ್ರಿಯದ ೨೧ನೇ ಶ್ಲೋಕ); ಹುಟ್ಟಿದ ಮೇಲೆ ತನ್ನ ತಂದೆಯಾದ ಬ್ರಹ್ಮನ ತೊಡೆಯಲ್ಲಿ ಕುಂತು ಕೊಂಡು ತನ್ನ ಪಾಪಕ್ಕೂ ತನಗೆ ಹೆಸರಿಲ್ಲದ್ದಕ್ಕೂ ಬಹಳ ಅತ್ತನು (ಶತಪಥಬ್ರಾಹ್ಮಣ ೬, ೧, ೩, ೮); ಅವನು ಇಂದ್ರನಿಗೆ ಸೇವೆ ಮಾಡುತ್ತಾ ೧೦೦ ಕೋಣಗಳನ್ನು ಅವನಿಗೆ ಮಾಡಿದನು (ಋ. ೬, ೧೭, ೧೧; ಋ. ೨, ೧, ೬ ಸರಿ ನೋಡಿರಿ); ವಶಿಷ್ಠಾದಿ ಋಷಿಗಳ ಹೆಂಡರ ಸಂಗಡ ವ್ಯಭಿಚಾರ ಮಾಡಿದನು (ಅನಪರ್ವದ ೧೪೨೭ ಆದಿ ಶ್ಲೋಕಗಳು); ಅಂಗಿರಸ ಚಾರ್ಗವನ ಹೆಂಡತಿಯಾದ ಸುಕನ್ಯೆಯನ್ನು ಕೆಡಿಸಲಿಕ್ಕೆ ನೋಡಿದನು (ಶತಪಥಬ್ರಾ. ೪, ೧, ೫, ೨ ಆದಿ; ಅನುಶಾಸನಪರ್ವದ ೭೫೪೪ನೇ ಶ್ಲೋಕ ಸರಿ ನೋಡಿರಿ); ತನ್ನ ಸಹೋದರಿಯಾದ ಉಷಸಿಗೆ ಕಾಮ ಪಟ್ಟನು (ಕೌಷೀತಕೀಬ್ರಾಹ್ಮಣ ೬, ೧); ಬಹಳ ನೀಚವಾಗಿ ತನ್ನ ಹೆಂಡತಿಯ ಸಂಗಡ ಕಾಮಕ್ರೀಡೆ ಮಾಡಿದನು (ರಾಮಾಯಣ ೧, ೩೭, ೧ ಆದಿ); ಋಷಿಗಳ ಮಕ್ಕಳ ಮತ್ತು ಹೆಂಡರ ಸಂಗಡ ವ್ಯಭಿಚಾರ ಮಾಡುತ್ತಾ ಅಮಲಾಗಿಯೂ ಹುಚ್ಚಾಗಿಯೂ ತಿರಿಗಾಡುತ್ತಿರುವನು (ಅನುಶಾಸನಪರ್ವದ ೭೪೨ನೇ ೭೪೪ನೇ ಶ್ಲೋಕಗಳು); ವಿಷ್ಣುವಿನ ಸಂಗಡ ಬಹಳ ಸರ್ತಿ ಅಧಿಕಾರಕ್ಕೋಸ್ಕರ ಜಗಳಾಡಿದನು (ರಾಮಾಯಣ ೧, ೭೫; ಶಾಂತಿಪರ್ವ, ೧೩೨೬೫ ಆದಿ ಶ್ಲೋಕಗಳು; ಭಾಗವತಪುರಾಣ ೧೦, ೬೪; ಹರಿವಂಶದ ೧೪೩ನೇ ೧೪೪ನೇ ಅಧ್ಯಾಯಗಳು); ಎರಡು ಸರ್ತಿ ಹೊಟ್ಟೇ ಕಿಚ್ಚಿನಿಂದ ತನ್ನ ತಂದೆಯಾದ ಬ್ರಹ್ಮನ ತಲೆ ಕಡಿದು ಹಾಕಿದನು (ಸ್ಕಂದಪುರಾಣದ ೩೧ನೇ ಅಧ್ಯಾಯ; ಭಾಗವತ ಪು. ೪, ೫; ಶತಪಥಬ್ರಾ. ೨, ೪, ೪, ೧); ಕೃಷ್ಣನ ಹೆಂಡತಿಯಾದ ರುಕ್ಮಿಣಿಯನ್ನು ತನ್ನ ರಥಕ್ಕೆ ಹೂಡಿ ಹೊಡೆದನು (ಅನುಶಾಸನಪ. ೭೪೦೨ ಆದಿ ಶ್ಲೋಕಗಳು). —

೭. ನಾರಾಯಣನ ಅಥವಾ ವಿಷ್ಣುವಿನ ನೀಚ ವಿಷಯವು. — ಅವನು ಸೋಮಸಾರಾಯದ ಮಗನು (ಋ. ೯, ೯೬, ೫); ಇಂದ್ರನ ಸಂಗಡ ಸೋಮಸಾರಾಯ ಕುಡಿಯುತ್ತಾನೆ (ಋ. ೨, ೨೨, ೧); ಆ ಸಾರಾಯವು ಸೃಷ್ಟಿಸುವ ಅವನಿಗೆ ವೀರ್ಯವನ್ನು ಹುಟ್ಟಿಸುವದು (ಋ. ೧,

೧೫೫, ೩); ಅವನು ಇಂದ್ರನಿಗಾಗಿ ೧೦೦ ಕೋಣಗಳನ್ನೂ ಹಾಲಂಬಲಿಯನ್ನೂ ಒಂದು ಹಂಡಿಯನ್ನೂ ತಂದು, ಅವನಿಗಾಗಿ ೧೦೦ ಕೋಣಗಳನ್ನು ಅಡಿಗೆ ಮಾಡಿದನು (ಋ. ೮, ೬೬, ೧೦; ಋ. ೬, ೧೭, ೧೧); ಇಂದ್ರನಿಗೆ ಸೋಮಸಾರಾಯ ತಂದು ಕೊಟ್ಟು, ಅವನನ್ನು ಕೊಂಡಾಡಿದನು (ಋ. ೧೦, ೧೧೩, ೨); ಅವನು ದೇವತೆಗಳ ಬಾಗಿಲು ಕಾಯುವವನಾಗಿದ್ದಾನೆ (ಋ. ಐತರೇಯ ಬ್ರಾಹ್ಮಣದ ೧ನೇ ಅಧ್ಯಾಯದ ೩ನೇ ಖಂಡ); ಇರಿವೆಗಳು ಅವನ ತಲೆ ಕಡಿದು ಹಾಕಿದವು (ಶತಪಥ ಬ್ರಾ. ೧೪, ೧, ೧, ೯); ಅವನು ಮೋಸಗಾರರಲ್ಲಿ ಶ್ರೇಷ್ಠನು (ಜಾಗವತ ಪು. ೮, ೨೧, ೧೦ನೇ ಶ್ಲೋಕ); ರುದ್ರನ ಸಂಗಡ ಅನೇಕಾವರ್ತಿ ಅಧಿಕಾರಕ್ಕೋಸ್ಕರ ಜಗಳಾಡಿದನು (ರುದ್ರನ ವಿಷಯ ನೋಡಿರಿ); ಬ್ರಹ್ಮನ ಸಂಗಡ ಅಧಿಕಾರಕ್ಕಾಗಿ ಜಗಳಾಡಿದನು (ಲಿಂಗ ಪು. ೧೭); ಮತ್ಸರದಿಂದ ಅಮೃತವನ್ನು ಕದ್ದು ಕೊಂಡು ಹೋದನು (ರಾಮಾಯಣ ೧, ೪೫); ಕೃಷ್ಣನು ಮಾಡಿದ್ದೆಲ್ಲಾ ಅವನು ಮಾಡಿದ್ದೇ. —

೮. ಕೃಷ್ಣದೇವರೆಂಬಾತನನ್ನು ಕುರಿತು ಒಂದೇ ಮಾತಾದರೂ ಮೂಲವೇದಗಳಲ್ಲಿ ಇಲ್ಲ. —

೯. ಕೆಲವು ಉಪನಿಷತ್ತುಗಳೂ ಭಗವದ್ಗೀತೆಯೂ ಮೂಲವೇದಗಳಿಗೆ ನಿಂದಿಸುತ್ತವೆ. —

೧೦. ಇಹಕ್ಕೂ ಪರಕ್ಕೂ ನಾಶಕರವಾದ ಅಂಥಾ ಬೋಧನೆಯು ಋಗ್ವೇದದ ಕೌಷೀತಕಿ ಉಪನಿಷತ್ತಿನಲ್ಲಿಯೂ ಸಾಮವೇದದ ಛಾಂದೋಗ್ಯೋಪನಿಷತ್ತಿನಲ್ಲಿಯೂ ಉಂಟು. —

೧೧. ರಾಮದೇವರೆಂಬವನನ್ನು ಕುರಿತು ಒಂದೇ ಮಾತಾದರೂ ಮೂಲವೇದಗಳಲ್ಲಿ ಇಲ್ಲ. ಮೂಲರಾಮಾಯಣದಲ್ಲಿ ಸಹ ರಾಮನು ದೇವರೆಂತಲ್ಲ ನರಜಾತಿಯ ಒಬ್ಬ ರಾಜನೆಂತ ವರ್ಣಿಸಲ್ಪಟ್ಟಿದ್ದಾನೆ; ಆ ಮೂಲಕಥೆಗೆ ಸರಿ ಬೀಳದ್ದರಿಂದ ಹಾಸ ಮಾತುಗಳೆನ್ನಿಸುವ ವರ್ಣನೆಯಲ್ಲಿ ಮಾತ್ರ ಅವನು ವಿಷ್ಣುವಿನ ಅರ್ಧ ಬೀಜದಿಂದ ಹುಟ್ಟಿದ ಒಬ್ಬ ದೇವರೆಂತಲೂ ಪರಮಾತ್ಮನೆಂತಲೂ ಹೇಳಿ ಅದೆ. ಮೂಲಕಥೆಗೆ ವಿರೋಧವಾದ ಈ ಹಾಸ ವರ್ಣನೆ ಕೂಡಿಸುವದಕ್ಕೆ ಪುರೋಹಿತರಿಗೆ ಮೂಲಕಥೆಯಲ್ಲಿ ಆಸ್ಪದವಿಲ್ಲದಿದ್ದದರಿಂದ ಅವರು ಒಂದು ಯುಕ್ತಿ ಹಿಡುಕಾಳ್ಳಬೇಕಾಯಿತು; ಅವರು ಹೇಳಿದ್ದೇನಂದರೆ — ರಾಮನು ತನ್ನ ಸ್ವಭಾವದ ಮೇಲೆಯೂ ತನ್ನ ಕ್ರಿಯೆಗಳ ಮೇಲೆಯೂ ತಾನು ದೇವರೆಂತ ತಿಳುಕಾಳ್ಳದಿದ್ದನು, ಆದರೆ ಬ್ರಹ್ಮನೂ ವಾಯುವೂ ಅವನಿಗೆ ನೀನು ದೇವರೆಂತ ಹೇ

ಳಿದರು, ಆದ್ದರಿಂದ ಅವನು ದೇವರು (ರಾಮಾಯಣ, ೬ನೇ ಕಾಂಡ, ೧೧೯ನೇ ಸರ್ಗ, ೧೩ನೆಯ ಶ್ಲೋಕಗಳು; ಮತ್ತು ೬, ೨೬, ೮೪ನೆಯ). ಮೂಲಕರ್ತೃಗಳು ರಾಮನು ದೇವರಲ್ಲವೆಂತ ನಂಬಿದ್ದಕ್ಕೆ ಕೆಲವು ದೃಷ್ಟಾಂತಗಳು ಯಾವವಂದರೆ — ರಾಕ್ಷಸರು ರಾಮನ ಮೇಲೆ ಬೀಳುವಾಗ ದೇವತೆಗಳು ಅವನು ಅಪಜಯ ಪಟ್ಟಾನೆಂತ ಅಂಜಿದರು (ರಾ. ೩, ೨೩, ೧೯ ಆವ); ಆ ದೇವತೆಗಳು ಅವನು ಪರಮಾತ್ಮನೆಂತ ನೆನಸಲೇ ಇಲ್ಲ, ಇಲ್ಲದಿದ್ದರೆ ಅವರು ಅಂಜುತ್ತಿದ್ದಿಲ್ಲ. ರಾಮನು ಖರನೆಂಬ ರಾಕ್ಷಸನನ್ನು ಕಾಂದಾಗ ಆ ದೇವತೆಗಳು ವಿಸ್ಮಯ ಪಟ್ಟರು (ರಾ. ೩, ೩೦, ೨೭ ಆವ); ಅವರು ರಾಮನು ಪರಮಾತ್ಮನೆಂತ ನೆನಸಿದ್ದರೆ ಅವನ ಅಂಥಾ ಸಾಧಾರಣ ಕ್ರಿಯೆಗೆ ವಿಸ್ಮಯ ಪಟ್ಟದ್ದುಂಟೇ? ಇಂದ್ರಜಿತನು ಬಾಣಗಳನ್ನೆಸದು ರಾಮನನ್ನು ನೆಲಕ್ಕೆ ಬೀಳಿಸಿದಾಗ ಇವನ ದಂಡುಗಾರರೂ ಸೀತೆಯೂ ವಿಭೀಷಣನೂ ಸತ್ತನೆಂತ ಅತ್ತು ಗಾಳಾಡಿದರು (ರಾ. ೬, ೪೫; ೬, ೪೬; ೬, ೪೭; ೬, ೫೦). ಲಕ್ಷ್ಮಣನು ಕಾಲ್ಲಲ್ಪಟ್ಟನಾನೇ? ಇಲ್ಲವೋ? ಎಂತ ರಾಮನು ಅರಿಯದಿದ್ದನು (ರಾ. ೬, ೪೯). ತಾನು ಒಳ್ಳೇ ದಳವಾಯಿಯಲ್ಲವೆಂತ ತನ್ನನ್ನು ಕುರಿತು ಅರಿಕೆ ಮಾಡಿದನು (ರಾ. ೬, ೪೯, ೧೮). ತನ್ನ ಘಾಯಗಳನ್ನು ವಾಶಿ ಮಾಡಿದ ಗರುಡನನ್ನು ಅರಿಯದಿದ್ದನು (ರಾ. ೬, ೫೦). ರಾವಣನನ್ನು ಜಯಿಸುವದಕ್ಕೆ ಚಿಂತೆಯುಳ್ಳವನಾಗಿ ಸೂರ್ಯನ ಸಹಾಯ ಬೇಡಿ ಕಾಂಡನು (ರಾ. ೬, ೧೦೬). ನಾನು ನನ್ನ ಶತ್ರುಗಳನ್ನು ಯಾವಾಗಲೂ ಜಯಿಸುವಂತೆ ವರವನ್ನು ಕಾಡೆಂತ ಬ್ರಹ್ಮನ ಹತ್ತರ ಬೇಡಿ ಕಾಂಡನು (ವನಪರ್ವದ ೧೬೧ನೆಯ ೨೬ನೇ ಶ್ಲೋಕ). ಸೀತೆಯು ರಾವಣನಲ್ಲಿ ತನಗೆ ನಂಬಿಗಸ್ತಳಾಗಿದ್ದಳಾನೇ? ಇಲ್ಲವೋ? ಎಂತ ಅರಿಯದಿದ್ದನು (ರಾ. ೬, ೧೧೯ನೇ ೧೧೯ನೇ ಸರ್ಗ). — ಹಾಗಾದರೆ ರಾಮನ ಚಕ್ಕರು ಒಬ್ಬ ಹೀನ ಮನುಷ್ಯನ ಚಕ್ಕರೇ! —

೧೨. ಮೂಲಗ್ರಂಥದ ೭ನೇ ಪಾನಿನಲ್ಲಿ ಸುಚಿತ್ರಿಯು, ೭ನೇ ಪಾನಿನಲ್ಲಿ ರಂಗನು ಹೇಳಿದ ಅಂಥ ಹಿಂದು ಶ್ಲೋಕಗಳನ್ನು ಹಿಂದು ಮಾಯಾವಾದದ ಮೇಲೆ ಪರೀಕ್ಷಿಸಿದರೆ ಬರೇ ಹೊಟ್ಟಾದ ಮರ್ಯಾದೇ ಮಾತುಗಳಾಗಿ ಕಾಣಿಸುತ್ತವೆ. —

1892

4

ಪರಮಾತ್ಮಜ್ಞಾನ

KNOWLEDGE

OF THE

SUPREME SPIRIT

A DIALOGUE ON THE HINDOO DOCTRINE OF GOD'S BEING THE AUTHOR OF SIN &

BY

THE REV. F. K

MANGALORE

PFLEIDERER & RIEHM, MISSION BOOKSHOP AND GOVT. SCHOOLBOOK DEPOT

1863

CXIV 108 aug

Copyright 4/1999 YxyMaster GmbH www.yxymaster.com VierFarbSelector Standard* - Euroskala Offset